ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

18 ನವೆಂಬರ್ 2015 ಪುಟ 20 ರೂ. 15/-




ಅರುಂಧತಿ ರಾಯ್
ವೈದ್ಯನೂ ಸಂತನೂ



ಭಲೇ ಹುಚ್ಚಾ!




ಶಿವಮೊಗ್ಗ ಬಸಪ್ಪನ ಪುಂಡಾಟ



ಮಾಯಕೊಂಡ ಶಾಸಕನ ದ್ರೋಹಗಳು

ಮಂಗಳೂರು ಜೈಲಲ್ಲೇ ಗ್ಯಾಂಗ್‌ವಾರ್

'ಕೆಟ್ಟ ಕಾಲ'ದಲ್ಲೂ ಮಾನವೀಯತೆಗೆ ಜೀವ ತುಂಬುತ್ತಿರುವ ದನಿಗಳಿಗೆ



ಎಲ್ಲೆಡೆ ಭೋರ್ಗರೆತದ ಸದ್ದು! ಕೆಲವರ ಮೆಲುಮಾತುಗಳು, ಬದುಕಿನ 'ಮಾರ್ಗ'ಗಳು ಮೇಲಿನವರಿಗೆ ಶಿಕ್ಷಾರ್ಹವಾಗಿ ಕಂಡಾಗ ಪಿಸ್ತೂಲುಗಳು, ತುಪಾಕಿಗಳು ಭೋರ್ಗರೆಯುತ್ತವೆ! ಈ ಬಹುಮಾನಕ್ಕೆ ಪ್ರತಿಯಾಗಿ ಈ ಹಿಂದೆ ನೀಡಲಾಗಿದ್ದ (ಅಥವಾ ಪಡೆದಿದ್ದ) 'ಬಹುಮಾನ' ಈಗ ಬೇಡವೆಂದು ವಾಪಸು ಮಾಡಲು ನೋಡಿದರೆ..... ಆಗಲೂ ಭೋರ್ಗರೆತ; ಗುಂಡುಗಳಲ್ಲ ಬದಲಿಗೆ ಮಾತುಗಳೂ ಸುಡುತ್ತವೆ.......!!

ಇದು ಯಾವ ದೇಶದ, ಯಾವ ಕಾಲದ ಚಿತ್ರಣ ಹೇಳಿ? ಹೇಳುವುದು ಕಷ್ಟ; ಏಕೆಂದರೆ ಇದು ಕಾಲ-ದೇಶಗಳ ಹಂಗಿಲ್ಲದ ಕೆಟ್ಟಕಾಲದ ಚಿತ್ರ; ಚಿತ್ರಣ!

ಸಮಾನತೆಯ ವ್ಯವಸ್ಥೆ ತರಲು ಅವರು ಪ್ರಯತ್ನಿಸುತ್ತಿರುವಂತೆ ಕಂಡುಬರುವ ಸಮಾನತೆಯ ವ್ಯವಸ್ಥೆ ತರಲು ಅವರು ಪ್ರಯತ್ನಿಸುತ್ತಿರುವಂತೆ ಕಂಡುಬರುವ

ಸಮಾನತೆಯ ವ್ಯವಸ್ಥೆ ತರಲು ಅವರು ಪ್ರಯತ್ನಿಸುತ್ತಿರುವಂತೆ ಕಂಡುಬರುವ ಕಾರಣ. ಆಶ್ಚರ್ಯದ ಸಂಗತಿಯೆಂದರೆ, ಈ ರೀತಿಯ 'ಸಮಾನತೆಯ ಕೂಗು' ಮೇಲಿನವರಿಗೆ ಬೇಕಾದಾಗಲೆಲ್ಲಾ ಅನುಕೂಲಸಿಂಧು ತತ್ವವಾಗಿ ಯಾವ ಮುಜುಗರ ಹಿಂಜರಿಕೆಗಳಿಲ್ಲದೆ ಬಳಕೆಯಾಗಿರುವುದು! ಈಗ ಸ್ವಲ್ಪ ಕಾಲದಿಂದ ಮತ್ತೆ ಮೇಲೆದ್ದಿರುವ ಮೀಸಲಾತಿ ವಿರೋಧಿ ದನಿಯನ್ನು ಗಮನಿಸಿ; ಅಲ್ಲಿ ಮತ್ತದೇ ಸಮಾನತೆಯ ಮಾತು. ಗುಜರಾತಿನಲ್ಲಿ ನಡೆದ ಪಟೇಲ್ ಸಮುದಾಯದ ಮೀಸಲಾತಿ 'ಹೋರಾಟ'ದಲ್ಲಿ ತಮಗೆ ಮೀಸಲಾತಿ ಬೇಕೆಂಬ ವಿಚಾರಕ್ಕೆ ಒತ್ತಿಗಿಂತ ಸಿಕ್ಕಿದರೆ ಎಲ್ಲರಿಗೂ, ಇಲ್ಲದಿದ್ದರೆ ಯಾರಿಗೂ ಬೇಡ ಎಂಬ 'ಸಮಾನತೆ'ಯ ಭಾಷೆಯದ್ದೇ ಮೇಲಾಟವಾಗಿತ್ತು.

ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಬೇಡವೆಂದು ಸುಪ್ರೀಂಕೋರ್ಟ್ ಹೇಳಿರುವುದಕ್ಕೂ ಇದೇ ತಳಹದಿ ಎನ್ನಲಾಗುತ್ತಿದೆ. ಶಿಕ್ಷಣದ ವಿಚಾರದಲ್ಲೇ ನಡೆದಿರುವ ಮತ್ತೊಂದು ಬೆಳವಣಿಗೆಯನ್ನೂ ಗಮನಿಸಿದರೆ, ವಿದೇಶಿ ವಿಶ್ವವಿದ್ಯಾಲಯಗಳ ಸ್ಥಾಪನೆಯ ನೆಪದಲ್ಲಿ ಅಂತಾರಾಷ್ಟ್ರೀಯ ಶಿಕ್ಷಣ ವ್ಯಾಪಾರಿಗಳನ್ನು ಭಾರತದೊಳಕ್ಕೆ ಬಿಟ್ಟುಕೊಳ್ಳುವುದಕ್ಕೆ ಸಿದ್ಧತೆಯೊಂದು ನಡೆಯುತ್ತಿದೆ. ಇದೇ ಡಿಸೆಂಬರ್‌ನಲ್ಲಿ ನಡೆಯಲಿರುವ ವಿಶ್ವ ವ್ಯಾಪಾರ ಸಂಘಟನೆಯ ಸಚಿವ ಮಂಡಳದ ಸಭೆಯಲ್ಲಿ ಭಾರತ ಸರ್ಕಾರ ಉನ್ನತ ಶಿಕ್ಷಣದೊಳಕ್ಕೆ ವಿದೇಶೀ ಕಾರ್ಪೊರೇಟ್ ಶಕ್ತಿಗಳನ್ನು ಬಿಟ್ಟುಕೊಳ್ಳುವ ಒಪ್ಪಂದವೊಂದಕ್ಕೆ ಸಹಿ ಹಾಕಲು ತಯಾರಾಗಿದೆ. ಆಸಕ್ತಿಯ ವಿಚಾರವೆಂದರೆ, ಭಾರತದೊಂದಿಗೆ ಈ ಒಪ್ಪಂದಕ್ಕೆ ಸಹಿ ಹಾಕುವ ಮೊದಲು ಕಾರ್ಪೊರೇಟ್ ಶಕ್ತಿಗಳು ಒಂದು ಷರತ್ತು ಹಾಕಿದ್ದಾರೆ-ತಮಗೆ ಸಮಾನತೆ ಬೇಕು- ಎಂದು. ಅಂದರೆ, ಭಾರತ ಸರ್ಕಾರ ಒಂದು ವೇಳೆ ಭಾರತದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಭಾಗವಾದ ಸಂಸ್ಥೆಗಳಿಗೆ ಯಾವುದೇ ರೀತಿಯ ರಿಯಾಯಿತಿಗಳನ್ನು ಮತ್ತು ನೆರವನ್ನು ಕೊಡುವುದಾದರೆ, ಹೊರ ದೇಶಗಳ ಈ ಎಲ್ಲಾ ವಿದೇಶೀ ಶಿಕ್ಷಣ ಸಂಸ್ಥೆಗಳಿಗೂ ಅಷ್ಟೇ ಪ್ರಮಾಣದ ನೆರವು-ರಿಯಾಯಿತಿ ಕೊಡಬೇಕೆಂಬುದು! ಸಮಾನ ಸ್ಥಾಯಿಯಲ್ಲಿ ತಮ್ಮನ್ನೂ ಪರಿಗಣಿಸಬೇಕೆಂಬುದು ಅವರ ಆಗ್ರಹ!!






ಈ ಮನೆ
ದಾಖಲೆಗಳ ಮೇಲಿನ ಸಹಿಯದು
ಈ ಗೋಡೆಗಳ ನಡುವೆ ನಾನು ಬದುಕಿದ್ದೇನಷ್ಟೇ
ಈ ಊರು
ಮಂತ್ರಿಯದು
ಊರಿನ ಮತದಾರರ ಪಟ್ಟಿಯಲ್ಲಿ
ನನ್ನದೂ ಹೆಸರಿದೆ........

....

(ಈ ಊರು ಮಂತ್ರಿಯದು- ಬಿ.ಪೀರ್

ಮೊನ್ನೆಯಷ್ಟೇ ಮುಂದೆ ಇಂತಹ ಒಂದು ಕಾಲ ಬರಬಹು ಚರ್ಚಿಸುತ್ತಾ, ಅದನ್ನು ತಡೆಯುವ ಬಗ್ಗೆ ಮಾತನಾಡಿದ ನೆನಪು; ಆ ನೆನ ಸಮೇತ ನಮ್ಮನ್ನು ಈ ಕಾಲದೊಳಕ್ಕೆ ರಫ್ತು ಮಾಡಲಾಗಿದೆ! ಹಾ ಅದನ್ನು ಕಂಡ, ತಿಳಿದ, ಅರಿತ ವಿಚಾರವಂತರ ಕೆಲಸ ಸುಮ್ಮನೇ ಕೂರು

"ಓಟಿನ ರಾಜಕೀಯಕ್ಕಾಗಿಯೇ ದೇವರು-ಧರ್ಮಗಳ ಹೆಸರು ಉ ಹುಳುಬಿದ್ದ ಭಾಷೆಯನ್ನು ಹಾಗೆಯೇ ಮಾತಾಗಿಸುವ ಮನುಷ್ಯನಾಗಿರುವುದಿಲ್ಲವಾದ್ದರಿಂದ ನಾವು ಮತ್ತೆ ಮಗುವಾಗಬೇಕು; ಬದ್ದುಹೋದ ಅವಧಿಯ ಅನುಭವದಲ್ಲಿ ಹುಟ್ಟಿದ 'ಮೂಕ ಮಹಾಕಾ ಹೊಸ ಮಾತು ಹುಟ್ಟಿಸಬೇಕು; ಹೊಸ ಗೆರೆಗಳು ಮೂಡಬೇಕು. ಕವಿ, ಕಲಾವಿದರ ಕರ್ತವ್ಯ. ಈ ಕರ್ತವ್ಯದ ಕ್ರಿಯೆಯಲ್ಲಿ ನಾವ ಮನುಷ್ಯರಾಗಬೇಕು. ನನಗೆ ಸಾಹಿತ್ಯವೆಂದರೆ ಮನುಷ್ಯ, ಮನುಷ್ಯನಾಗು ಸಾಹಿತ್ಯ.......ಸಾಯಿಸುವುದು ಸಾಹಿತ್ಯವಲ್ಲ; ಸಾಯಿಸುವವ ಮನು ....ಆದ್ದರಿಂದ ಭಾಷೆ, ಮತಧರ್ಮದ ಮಿತಿಗಳನ್ನು ಮೀರಬೆ

ಬ್ರೆಕ್ಟ್ ಬರೆಯುತ್ತಾನೆ....

'ಯಾವುದೂ ಈಗ ಸಹಜವಲ್ಲ
ವ್ಯವಸ್ಥಿತವಾಗಿ ನಡೆಯುವ ದೊಂಬಿ,
ಯೋಜನೆಗೆ ತಕ್ಕಂತೆ ಬದಲಾಗುವ ಖಯಾಲಿ,
ಕಣ್ಣಲ್ಲಿ ರಕ್ತವಿರದ ಜನ,
ಇಲ್ಲಿಯೇನೂ ಬದಲಾಗದು ಎಂಬ ಭಯ.........'

(ಅನು:ಕೆ.ಫಣಿರಾಜ್)

'ನಿನ್ನ ಸುಕ್ಕುಗಟ್ಟಿದ ಮುಖ, ಬಿರಿದ ತುಟಿ,
ಬಚಬಾಯಿ, ಕಾಣದ ಕಣ್ಣು
ಚಿತ್ರಿಸಿದ್ದಕ್ಕೆ,
ಉತ್ತಮ ಕಲಾಕೃತಿ ಬಹುಮಾನ ಬಂತು
ಎಂದೆ,
ಮುದುಕಿ ಅತ್ತಳು
'ನನ್ನ ಮೊಮ್ಮಗಳು ಹಸಿದಿದ್ದಾಳೆ'
ಐಶಾರಾಮಿ ಕಾರು ಹತ್ತುವ ಧಾವಂತದಲ್ಲಿದ್ದ
ಶಾಸಕನಿಗೆ ಹೀಗೆಂದೆ
'ನಿಮ್ಮ ಮಹಡಿಯ ಮನೆ ಹಿಂದೆ
ಮುರುಕಲು ಮನೆಯಲ್ಲಿ
ನಿಮ್ಮನ್ನು ಈ ಎತ್ತರಕ್ಕೆ ತರಲು ದುಡಿದ ನಿಮ್ಮ ಸ್ನೇಹಿತ
ಔಷಧಿಯಿಲ್ಲದೆ ತೀರಿದನಂತೆ'
ಅಂವ ಢೇಗು ಹೊಡೆದು ಹೇಳಿದ
'ನನ್ನ ಸ್ಟಾರ್ ಹೊಟೇಲಿನಲ್ಲಿ
ಲೈವ್ ಬ್ಯಾಂಡ್ ಉದ್ಘಾಟನೆಯಿದೆ,
ಸುದ್ದಿ ಮಾಡಲು ತಪ್ಪದೆ ಬನ್ನಿ'

(ಮಾತಿಗೆ ಮಾತು-ವೀರಣ್ಣ ಮಡಿವಾಳರ)

ಇದೇ ಅಂಕಣದಲ್ಲಿ ಈ ಹಿಂದಿನ ಹಲವಾರು ಲೇಖನಗಳು 'ಅಂಚಿನ ಜನರ' ಬದುಕನ್ನು ಕಾಣಿಸುವ ಪ್ರಯತ್ನ ಮಾಡಿವೆ. ಈ ಒಂದೆರಡು ದಿನಗಳಲ್ಲಿ ಕಂಡ ಮತ್ತೊಂದು ಸುದ್ದಿ-ಬಸ್ ಪಾಸ್ ದರ ಏಕಾಏಕಿ ಎರಡು ಪಟ್ಟು ಏರಿಕೆಯಾದದ್ದು. ಬಸ್ ಪಾಸ್ ದರ ಏರಿಕೆಯಾಗುವುದರಲ್ಲಿಲ್ಲ ವಿಶೇಷವಿರುವುದು, ಬದಲಿಗೆ ಅದಕ್ಕೆ ಅಧಿಕಾರಿಗಳು ನೀಡಿರುವ ಕಾರಣದಲ್ಲಿ, ಡೀಸೆಲ್ ದರ ಮಾರುಕಟ್ಟೆಯಲ್ಲಿ ಇಳಿದಿದ್ದರೂ ಬಸ್ ಪಾಸ್ ದರ ಮಾತ್ರ ಅಗಾಧವಾಗಿ ಹೆಚ್ಚಳವಾಗಲು ಅಧಿಕಾರಿಗಳು ಕೊಟ್ಟಿರುವ ಕಾರಣ, ಬೇರೆ ಬೇರೆ ಮಾರ್ಗಗಳ ಸಂಚಾರಕ್ಕೆ ಬೇರೆ ಬೇರೆ ದರ ಇದ್ದು ಇವೆಲ್ಲವನ್ನೂ ಏಕರೂಪಗೊಳಿಸಲು ಪ್ರಯತ್ನಿಸುತ್ತಿರುವುದರಿಂದ ಏರಿಕೆ ಹೆಚ್ಚಾದಂತೆ ಕಾಣುತ್ತಿದೆ ಎಂಬುದು. ಅಂದರೆ

ಇವು ಮೋಸದ ಆಟದ ಸರಳವಾದ ಕೆಲವು ಉದಾಹರಣೆಗಳಷ್ಟೇ. ಈ ಮೋಸದ ಆಟ ಸುಲಭವಾಗಿ ಹೊರನೋಟಕ್ಕೆ ಎಲ್ಲರಿಗೂ ಗೊತ್ತಾಗುವಂಥದ್ದಲ್ಲ! ಸಮಾನತೆಯೆಂಬ ಆಶಯ ತನ್ನಂತೆ ತಾನೇ ಬಹಳ ಆಗತ್ಯ, ಆಕರ್ಷಕ ಮತ್ತು ಆಪ್ಯಾಯಮಾನ; ಆದ್ದರಿಂದಲೇ ಆ ಮುಸುಕಿನಲ್ಲಿ ಬರುವ ಎರಡಲಗಿನ ಕತ್ತಿಗಳ ಅಪಾಯದ ಸುಳಿವು ಎಲ್ಲರಿಗೂ ಸಿಗುವುದು ಬಹಳ ಕಷ್ಟ; ಅಥವ ಬಹಳ ತಡ. ಮೀಸಲಾತಿಯ ವಿರೋಧಿ ಹೋರಾಟಕ್ಕೆ ಇಂದು ಹೆಚ್ಚಿನ ಸಂಖ್ಯೆಯಲ್ಲಿ ಬೀದಿಗಿಳಿಸಲ್ಪಟ್ಟಿರುವವರು ಮೀಸಲಾತಿಯ ಫಲಾನುಭವಿಗಳೆ ಆಗಿರುವಂತೆ! ಅದು ಜನಸಾಮಾನ್ಯರಿಗೆ ತಟ್ಟುವ ಭಾಷೆಯಲ್ಲೇ ಆಳುವವರು ಮಾತನಾಡುವ ಸಂಚಿನ ಪರಿಣಾಮ. ಈ ಸಂಚನ್ನು ಎಲ್ಲರೂ ಒಡೆದು ನೋಡಲಾರರೆಂಬ ವಿಶ್ವಾಸ ಅವರಿಗೂ ಇದೆ. ಅದೇ ಹುಂಬ ಧೈರ್ಯದಿಂದ ಬಡವರ ಬದುಕಿಗೆ ಕೊಳ್ಳಿ ಇಡುವ ಕೆಲಸ ನಡೆಯುತ್ತಿರುತ್ತದೆ. ಆದರೆ, ಒಂದೊಮ್ಮೆ ಅದನ್ನು ಕಾಣಬಲ್ಲವರು ಕಂಡು, ಅವರಲ್ಲಿ ಕೆಲವರು ಬಾಯಿ ಬಿಟ್ಟರೆ........? ಆ ಸತ್ಯ ಹೇಳುವ ದನಿಗಳು ಕೇಳದಂತೆ ಮಾಡುವ ಭೋರ್ಗರೆತ ಆಗಲೇ ಆರಂಭವಾಗುತ್ತದೆ.

ಈಗ ಭಾರತದಲ್ಲಿ ನಡೆಯುತ್ತಿರುವುದೂ ಅದೇ! ಅಸಹಿಷ್ಣುತೆಯನ್ನು, ಅದರಿಂದ ಘಟಿಸಿರುವ ಅಮಾನವೀಯ ಘಟನೆಗಳನ್ನು, ಅದರ ಹಿಂದಿರುವ ಶಕ್ತಿಗಳನ್ನು ಕಂಡು, ಬಿಡಿಸಿ ನೋಡಿ, ಪ್ರಶ್ನಿಸುತ್ತಿರುವ ದನಿಗಳನ್ನು ಈಗ ಅಡಗಿಸುವ ಪ್ರಯತ್ನ ನಡೆಯುತ್ತಿದೆ. ಆದ್ದರಿಂದಲೇ ಬಹಳ ಸಾತ್ವಿಕವೆಂದು ಕಾಣುವ ಪ್ರಶಸ್ತಿ ವಾಪ್ಸಿಯಂತಹ ಪ್ರತಿಭಟನೆಯ ಕ್ರಿಯೆಯನ್ನೂ ಸಹಿಸಲಾರದೆ ಭಾರತದ ಸಾಹಿತಿ, ಕಲಾವಿದ, ವಿಜ್ಞಾನಿ, ಚಿಂತಕ ವಲಯದ ಮೇಲೆ ವಾಗ್ದಾಳಿ ನಡೆಸಲಾಗುತ್ತಿದೆ; ಹಲವು ರೀತಿಯ ದೈಹಿಕ ದಾಳಿಗಳನ್ನೂ ನಡೆಸಲಾಗುತ್ತಿದೆ. ಇಲ್ಲಿ ಪ್ರಶಸ್ತಿ ವಾಪ್ಸಿಯ ಪ್ರತಿಭಟನಾ ವಿಧಾನವನ್ನು ವೈಭವೀಕರಿಸುವುದಾಗಲೀ ಅಥವಾ ಅದರೊಳಗೂ ಇರಬಹುದಾದ ರಾಜಕಾರಣದ ಹಲವು ಬಗೆಗಳನ್ನು ಬಗೆದು ನೋಡುವುದಾಗಲೀ ನನ್ನ ಉದ್ದೇಶವಲ್ಲ. ಈ ಬರಹಕ್ಕೆ ಕಾರಣವಾಗಿರುವುದು, ಇಂತಹದೊಂದು ಪ್ರತಿಭಟನೆಯ ಧಾರೆಗೆ ಜನ್ಮಕೊಟ್ಟ ನೈತಿಕ ಎಚ್ಚರ ಮತ್ತು ಸಾಮಾಜಿಕ ಬದ್ಧತೆಯ ಚಿಂತಕ ಗಣದೊಂದಿಗೆ ನಿಲ್ಲುವುದು ನನ್ನ ಹೊಣೆಗಾರಿಕೆಯೂ ಹೌದು ಎಂಬ ಪ್ರಜ್ಞೆ.

ಇಂದು ನಾವು 'ಒಳ್ಳೆಯ ಕಾಲ'ದ ಬಗ್ಗೆ ಹಿಂದೆಂದೂ ಇಲ್ಲದಷ್ಟು ಘೋಷಣೆಗಳಿಂದ ತುಂಬಿರುವ ವಾಸ್ತವದ 'ಕೆಟ್ಟಕಾಲ'ದಲ್ಲಿ ನಿಂತಿದ್ದೇವೆ.

ನನಗೀಗ ಇರುವುದು
ಇಲ್ಲ ಎಂಬುದೊಂದೇ
ಹೂವು
ತೋಟದ ಮಾಲೀಕನದು
ನಾನು ಬೆಳೆಯುವ ಬೇಸಾಯಗಾರ

ಎಂಬ ಪ್ರೊ. ಬರಗೂರರ ಮಾತುಗಳು ಚಿಂತನೆಗೆ ಹಚ್ಚುತ್ತವೆ.

'ಶ್ರಮಿಕ ಅಧ್ಯಯನ ಕೇಂದ್ರ'ದ ವಿದ್ಯಾರ್ಥಿಗಳಿಗೆ ಬ್ರೆಕ್ಟ್ ಹೇಳುವ ವ ರೂಪದ ಕವಿತೆ;


'ಕಾಲ ಕೂಡಿದಾಗ
ನಿಮ್ಮ ಅರಿವು ಮನುಷ್ಯರನ್ನು ದಮನಿಸುವ
ಹಲವು ಬಗೆಯ ಶತ್ರುಗಳನ್ನು
ಎದುರಿಸಲು ಒದಗಿ ಬರದೇಹೋದಲ್ಲಿ
ನೀವು ಕಲಿತ ಜ್ಞಾನ ಪೂರ ಪುಸ್ತಕದ ಬದನೇಕಾಯಿ'.......

ವಿಚಾರವಂತರ ಪ್ರತಿಭಟನೆಯ ಮಾರ್ಗದಲ್ಲಿ ನಡೆಯುತ್ತಿರುವ ರಹಮತ್ ತರೀಕೆರೆಯವರು ಒಮ್ಮೆ 'ಕಾಡಿನಲ್ಲಿರುವ ಪಕ್ಷಿಗಳು ಸಾಧುಪ್ರಾಣಿ ಬೇಟೆಗಾರರಿಂದ ರಕ್ಷಿಸಲಾಗದಿದ್ದರೂ, ಕನಿಷ್ಠ ಬೇಟೆಗಾರರು ಬರುತ್ತಿರುವ ತಾವು ಕುಳಿತ ಮರದ ಮೇಲಿಂದಲೇ ನೋಡಿ ಕೂಗಿ ಎಚ್ಚರಿ ಕೆಲಸವನ್ನಾದರೂ ಮಾಡುತ್ತವೆ. ಇಷ್ಟನ್ನಾದರೂ ಮಾಡುವುದು ಬುದ್ಧಿಜೀ ಕರ್ತವ್ಯ' ಎಂದು ಹೇಳಿದ್ದ ನೆನಪು. ಇಂದು ಇಂತಹ ಕರ್ತವ್ಯ ಮಾಡಿದ್ದಕ್ಕಾಗಿಯೂ ಹಲವು ರೀತಿಗಳಲ್ಲಿ ಚಿಂತಕರು, ಬರಹಗಾ ಬುದ್ಧಿಜೀವಿಗಳು ದಾಳಿಗೊಳಗಾಗುತ್ತಿದ್ದಾರೆ. ಅವರ ಪ್ರತಿಭಟನೆಯನ್ನು ಕೆ ಕೆಲವು ಘಟನೆಗಳಿಗೆ ಮಾತ್ರ ಸೀಮಿತವಾಗಿ ಜೋಡಿಸ ವಿಕೃತಗೊಳಿಸಲಾಗುತ್ತಿದೆ.

ವಾಸ್ತವದಲ್ಲಿ ಅವರ ಪ್ರತಿಭಟನೆಯ ಹರಹು ವಿಶಾಲವಾದದ್ದು. ಕೇವಲ ಒಂದು ಕಾಲಕ್ಕೆ ಒಂದು ದೇಶಕ್ಕೆ, ಒಂದು ಪಕ್ಷಕ್ಕೆ ಸಂಬಂಧಿಸಿ ಅದು ಇಂದು ಆರಂಭವಾದದ್ದೂ ಅಲ್ಲ; ಇಂದಿಗೆ ಮುಗಿಯುವುದೂ ತಲೆಮಾರುಗಳ ಕಾಲ ದನಿಯಿಲ್ಲದವರಿಗೆ ದನಿಯಾದವರು, ಜನಸಾಮ ಸಂಕಟಕ್ಕೆ ಸ್ಪಂದಿಸಿದ ರೀತಿ ಅದು. ಗೆಳೆಯ ಪೀರ್‌ಬಾಷಾರ ಮತ್ತೊ ಹುಟ್ಟಿ ಕವಿತೆ ಅಂತಹ ಕಾವ್ಯರಚನೆಯ ಮತ್ತು ಇಂತಹ ಪ್ರತಿಭಟ ಪ್ರಸ್ತುತತೆಯನ್ನು ನಾನು ಬರೆಯಬಹುದಾಗಿರುವುದಕ್ಕಿಂತ ಚೆ ಎತ್ತಿಹಿಡಿಯುವದರಿಂದ, ಅದರೊಂದಿಗೆ ಈ ಲೇಖನಕ್ಕೆ ವಿರಾಮ.

ಸಾಯುವುದಿಲ್ಲ ನನ್ನ ಕಾವ್ಯ ಕೂಡಾ
ಒಂದು ಬೆವರ ಹನಿ
ನೆಲಕ್ಕೆ ಬಿದ್ದಾಗಲೇ ಅಂದುಕೊಂಡೆ
ನಾನು ಸಾಯುವುದಿಲ್ಲ
ನನ್ನ ಕಣ್ಣೀರು ಅಕ್ಷರವಾದಾಗಲೇ ಹೇಳಿದೆ
ನನ್ನ ಕಾವ್ಯ ಸಾಯುವುದಿಲ್ಲ
ಬೆವರು ಕಣ್ಣೀರಿನೊಟ್ಟಿಗೆ
ಮಾತಾಡಿತು
ಕಾವ್ಯ ಬೀಜಗಳ ಬಿತ್ತುತ್ತಾ
ಬೀದಿ ತುಂಬಾ ಹಾಡು
ಸಾವುಗಳೇ ಇರಲಿಲ್ಲ.....ಅಲ್ಲಿ

1975 ಮತ್ತು 1984ರಲ್ಲಿ ಚೆಡ್ಡಿಗಳ ವರ್ತನೆ ಹೇಗಿತ್ತು?





ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com


ಆರೆಸ್ಸೆಸ್ ಮತ್ತು ಅದರ ಕೃಪೆಯಲ್ಲಿರುವ ವಿವಿಧ ಸರಿ ತಂಡಗಳ ಸದಸ್ಯರಿಗೆ ಈಗ ಜಗತ್ತಿನಾದ್ಯಂತ ಗುತ್ತಿರುವ ಮುಖಭಂಗವನ್ನು ಸಹಿಸಲಾಗುತ್ತಿಲ್ಲ, ಅದಕ್ಕೆ ವರು ಹುಚ್ಚುಚ್ಚಾದ ಮತ್ತು ಅಷ್ಟೇ ಅಪಾಯಕಾರಿಯಾದ ೇಳಿಕೆಗಳನ್ನು ನೀಡುತ್ತಿದ್ದಾರೆ. ಅಂತಹ ಹೇಳಿಕೆಗಳನ್ನು ಡುತ್ತಿರುವವರು ಯಾವುದೋ ಅಬ್ಬೇಪಾರಿ ಚೆಡ್ಡಿಗಳಲ್ಲ, ದಲಾಗಿ ಆರೆಸ್ಸೆಸ್ ಮತ್ತು ಬಿಜೆಪಿಯಲ್ಲಿ ಹಿರಿಯ ದ್ದೆಗಳನ್ನು ಅಲಂಕರಿಸಿರುವವರು; ಕೇಂದ್ರ ಮತ್ತು ಹಲವು ಜ್ಯ ಸರ್ಕಾರಗಳಲ್ಲಿ ಮುಖ್ಯಮಂತ್ರಿ, ಸಂಸದ ಅಥವಾ ಸಕರಾಗಿರುವವರು; ವಿಶ್ವಹಿಂದೂ ಪರಿಷತ್‌ನಲ್ಲಿ ಕಾವಿ ಟ್ಟು ಸ್ವಾಮಿ/ಸನ್ಯಾಸಿ ಎಂದು ಗುರುತಿಸಿಕೊಂಡಿರುವವರು.

ಇವರೆಲ್ಲರ ಪ್ರಕಾರ ಈಗ ದೇಶದಾದ್ಯಂತ ಹೆಚ್ಚುತ್ತಿರುವ ಸಹಿಷ್ಣುತೆಯನ್ನು ಪ್ರತಿಭಟಿಸಿ ಸಾಹಿತ್ಯ ಅಕಾಡಮಿಯ ಶಸ್ತಿಗಳನ್ನು ಹಿಂದಿರುಗಿಸಿದವರೆಲ್ಲರೂ ಕಾಂಗ್ರೆಸ್ ಜೆಂಟರು. ದನಿ ಎತ್ತಿದ ಸಿನಿಮಾ ನಿರ್ದೇಶಕರು ೇಶದ್ರೋಹಿಗಳು. ವಿರೋಧ ವ್ಯಕ್ತಪಡಿಸಿದ ವಿಜ್ಞಾನಿಗಳು ಜ್ಞಾನಿಗಳು. ಟೀಕಿಸಿದ ಇತಿಹಾಸಕಾರರು ಮೆಕಾಲೆ ಂತತಿಯವರು. ತಮ್ಮ ಆತಂಕವನ್ನು ವ್ಯಕ್ತಪಡಿಸಿದ ನಟರು ದೇಶದಲ್ಲಿ ವಾಸಿಸಲಿಕ್ಕೇ ನಾಲಾಯಕ್ ಆಗಿರುವವರು. ೇಂದ್ರ ಸಚಿವರಾಗಿರುವ ಅರುಣ್ ಜೇಟ್ಲಿ ಪ್ರಕಾರ "ಇದು ಮೋದಿ ವಿರುದ್ಧ ಸೃಷ್ಟಿಸಲಾಗಿರುವ ಉತ್ಪಾದಿತ ಚಳವಳಿ" ಾದ್ದರೆ ಮನೇಕಾ ಗಾಂಧಿ ಪ್ರಕಾರ "ಇದು ನರೇಂದ್ರ ಮೋದಿಯ ವಿರುದ್ಧ ಬೇಕಂತಲೇ ರೂಪಿಸಲಾಗಿರುವ ಂತಾರಾಷ್ಟ್ರೀಯ ಪಿತೂರಿ." ಹಾಗೆಯೇ ಬಿಜೆಪಿ ವಕ್ತಾರರ ಕಾರ "ಮೋದಿಯನ್ನು ಮುಜುಗರಕ್ಕೆ ಈಡು ಮಾಡಲೆಂದೇ ಡೆಯುತ್ತಿರುವ ಷಡ್ಯಂತ್ರ" ಇದಾಗಿದೆ.

ದೇಶದಾದ್ಯಂತ ಸಾಮಾನ್ಯ ಜನರಿಂದಲೂ ಭಿವ್ಯಕ್ತವಾಗುತ್ತಿರುವ ಅಸಹನೆಯ ನಡುವೆಯೇ ಬಿಹಾರದಲ್ಲಿ ಡೆಯುತ್ತಿರುವ ಚುನಾವಣೆಯಲ್ಲಿ ಸೋಲುವ ಭೀತಿ ಜೆಪಿಯನ್ನು ಕಾಡುತ್ತಿರುವುದರಿಂದ ಅವರ ಅರೆಚಾಟ ಮತ್ತು ಚೀರಾಟ ಮುಗಿಲು ಮುಟ್ಟಿದೆ. ಲೋಕಸಭೆ ಚುನಾವಣೆ ಸಂದರ್ಭದಲ್ಲಿ "ಪಿಂಕ್ ರೆವಲ್ಯೂಷನ್" ವಿರುದ್ಧ ದನಿ ಎತ್ತಿದ್ದ ಮೋದಿ ಅಧಿಕಾರಕ್ಕೆ ಬಂದನಂತರ ಗೋ ಂತತಿಯನ್ನು ರಕ್ಷಿಸಲು ಕಡಿದು ಕಟ್ಟೆ ಹಾಕಿದ್ದು ಅಷ್ಟರಲ್ಲೇ ದೆ. ಆದರೂ ಚುನಾವಣೆಯ ಕೊನೆಯ ಹಂತದಲ್ಲಿ ಗೋ ರಕ್ಷಣೆ ಕುರಿತು ಬಿಹಾರದ ಪ್ರಮುಖ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ಬಿಡುಗಡೆ ಮಾಡಿದ್ದಾರೆ.

ಮೋದಿಯ ಬಿಜೆಪಿ ಪಕ್ಷದಿಂದ ಸಂಸದನಾಗಿರುವ ಸಂಗೀತ್ ಸೋಮ್ ಎಂಬಾತ ಸ್ವತಃ ದನದ ಮಾಂಸವನ್ನು ವಿದೇಶಗಳಿಗೆ ರಫ್ತು ಮಾಡುವ ಕಂಪನಿಯ ಮಾಲೀಕನಾಗಿದ್ದಾನೆ ಮಾತ್ರವಲ್ಲ ಆತನ ಮಗನೇ ದಾದ್ರಿಯಲ್ಲಿ ಅಖ್ಲಾಕ್ ಮನೆಯಲ್ಲಿ ದನದ ಮಾಂಸ ಇದೆ ಎಂಬ ಗುಲ್ಲು ಹಬ್ಬಿಸಿ ಆ ಅಮಾಯಕನ ಸಾವಿಗೆ ಕಾರಣನಾಗಿದ್ದಾನೆ.





ಅಂದರೆ ಸಂಗೀತ್ ಸೋಮ್ ತರಹದ ಚೆಡ್ಡಿಗಳಿಗೆ ಇತ್ತ ದನದ ಮಾಂಸ ಮಾರುವ ಮೂಲಕ ಬರುವ ಹಣವೂ ಬೇಕು, ಅತ್ತ ಅದೇ ದನದ ಮಾಂಸವನ್ನು ನೆಪವಾಗಿಟ್ಟುಕೊಂಡು ಜನರ ರಕ್ತ ಹರಿಸಿ ರಾಜಕೀಯ ಲಾಭವನ್ನೂ ಪಡೆಯಬೇಕು.

ಇರಲಿ, ಬಿಹಾರ ಚುನಾವಣೆಯನ್ನು ಗೆಲ್ಲಲು ಮೊದಲು ಲವ್ ಜಿಹಾದ್' ಅಂತ ಬೊಬ್ಬೆಹಾಕಿ ಮುಸಲ್ಮಾನರು ಹಿಂದೂ ಯುವತಿಯರನ್ನು ಲಪಟಾಯಿಸುತ್ತಿದ್ದಾರೆ ಎಂದರು. ಅದು ಬಹಳ ಕಾಲ ಮುಂದುವರೆಯಲಿಲ್ಲ, ಆಮೇಲೆ ಮೀಸಲಾತಿ ವಿಷಯವನ್ನು ತೆಗೆದುಕೊಂಡು ಮುಸಲ್ಮಾನರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ನೀಡಿರುವ ಮೀಸಲಾತಿಯಲ್ಲಿ ಭಾಗವನ್ನು ಪಡೆದು 'ಹಿಂದೂಗಳಾದ ನಿಮಗೆ' ಅನ್ಯಾಯ ಮಾಡುತ್ತಾರೆ ಎಂದು ಬಾಯಿ ಬಡಿದುಕೊಂಡರು. ಅದೂ ಚೆಡ್ಡಿಗಳ ಕೈಹಿಡಿಯಲಿಲ್ಲ, ಕಡಿದ ಮೇಲೆ ಮುಸಲ್ಮಾನರು ಭಯೋತ್ಪಾದಕರು ಎಂದು ಘೋಷಿಸಿದರು. ಸ್ವತಃ ಬಿಜೆಪಿಯ ಅಧ್ಯಕ್ಷ ಅಮಿತ್ ಶಾ ಬಿಹಾರದಲ್ಲಿ ಬಿಜೆಪಿ ಸೋತರೆ ಪಾಕಿಸ್ತಾನದಲ್ಲಿ ಪಟಾಕಿ ಸುಡುತ್ತಾರೆ" ಎಂದು ಹೇಳುವ ಮೂಲಕ ಬಿಹಾರದ ಮುಸಲ್ಮಾನರೆಲ್ಲರೂ ಪಾಕಿಸ್ತಾನಕ್ಕೆ ನಿಷ್ಠೆ ಹೊಂದಿರುವವರು ಎಂಬ ಅರ್ಥವನ್ನು ನೀಡುವ ಹೇಳಿಕೆಯನ್ನು ಕೊಟ್ಟ. ಆದರೆ ಅವರ ದುರಾದೃಷ್ಟಕ್ಕೆ ಅದೂ ಬರಕತ್ತಾಗಲಿಲ್ಲ, ಈಗ ದನದ ಮಾಂಸವನ್ನು ಕೈಗೆತ್ತಿಕೊಂಡಿದ್ದಾರೆ. ಗಿರಿರಾಜ್ ಸಿಂಗ್ ಎಂಬ ಬಿಜೆಪಿಯ ನಾಯಕ "ಬಿಹಾರದಲ್ಲಿ ನಿತೀಶ್ ಗೆದ್ದರೆ ಹಿಂದೂಗಳೆಲ್ಲ ದನದ ಮಾಂಸವನ್ನು ಬಲವಂತವಾಗಿ ತಿನ್ನಬೇಕಾಗುತ್ತದೆ" ಎಂದಿದ್ದಾನಲ್ಲದೆ, ಸುಶೀಲ್ ಮೋದಿ ಎಂಬ ಬಿಹಾರದ ಮಾಜಿ ಉಪಮುಖ್ಯಮಂತ್ರಿ "ಬಿಜೆಪಿ ಗೆದ್ದರೆ ಗೋಹತ್ಯಾ ನಿಷೇಧ ಕಾನೂನನ್ನು ಜಾರಿಗೆ ತರುತ್ತೇವೆ" ಎಂದಿದ್ದಾನೆ. ಆದರೆ ಹಲವು ಸಮೀಕ್ಷೆಗಳ ಪ್ರಕಾರ ಬಿಹಾರದಲ್ಲಿ ಬಿಜೆಪಿಗೆ ಜಯ ಸಿಗುವುದು ಅಷ್ಟು ಸುಲಭವಲ್ಲ. ನವೆಂಬರ್ 8ರಂದು ಬಿಜೆಪಿಗಳ ಚೀರಾಟಕ್ಕೆ ಸಂದಿರುವ ಪ್ರತಿಫಲ ಗೊತ್ತಾಗುತ್ತದಲ್ಲದೆ ಅದು ದೇಶದ ಮುಂದಿನ ರಾಜಕೀಯವನ್ನೇ ನಿರ್ಧರಿಸುವುದು ನಿಶ್ಚಿತ.

* * *

ತಮ್ಮ ಅಸಮಾಧಾನವನ್ನು ಹೊರಹಾಕುತ್ತಿರುವ ಸಾಹಿತಿಗಳಿಗೆ, ನಿರ್ದೇಶಕರಿಗೆ, ವಿಜ್ಞಾನಿಗಳಿಗೆ ಮತ್ತು ಇತರರಿಗೆ ಈಗ ಚೆಡ್ಡಿಗಳು "ನೀವೆಲ್ಲ 1984ರಲ್ಲಿ ಸಿಖ್ಖರ ವಿರುದ್ಧ ನಡೆದ ಮಾರಣಹೋಮವನ್ನು ಯಾಕೆ ಪ್ರತಿಭಟಿಸಲಿಲ್ಲ?" ಎಂದು ಕೇಳುತ್ತಿದ್ದಾರೆ. ಆದರೆ ವಾಸ್ತವವಾಗಿ ಆಗ ಆ ಮಾರಣಹೋಮದ ವಿರುದ್ಧ ನಯಂತಾರ ಸೆಹಗಲ್ ಮತ್ತು ರೊಮಿಳಾ ಥಾಪರ್ ಪ್ರತಿಭಟಿಸಿದ್ದರಲ್ಲದೆ, ಬಹಳಷ್ಟು ಜನ ಸತ್ಯಶೋಧನಾ ತಂಡಗಳನ್ನು ರಚಿಸಿ ಗಲಭೆಕೋರರ ವಿರುದ್ಧ ಮಾಹಿತಿಗಳನ್ನು ಸಂಗ್ರಹಿಸಿ ಪೊಲೀಸರಿಗೆ ಕೊಟ್ಟಿದ್ದರು. ಮಾತ್ರವಲ್ಲ, ದೆಹಲಿಯಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಸ್ವಾಮಿ ಅಗ್ನಿವೇಶ್, ರಜನಿ ಕೊಥಾರಿ ಸೇರಿದಂತೆ ವಿವಿಧ ವಲಯಗಳ ಪರಿಣಿತರು ಭಾಗವಹಿಸಿದ್ದರು. ಇರಲಿ, ಇಲ್ಲಿ ಚೆಡ್ಡಿಗಳಿಗೂ ಒಂದು ಪ್ರಶ್ನೆಯನ್ನು ಕೇಳಬಹುದು. ಅದೇನೆಂದರೆ "1984ರ ಮಾರಣಹೋಮ ನಡೆದಾಗ ನೀವೇನು ಮಾಡಿದಿರಿ?" ಎಂದು.

ಈ ಪ್ರಶ್ನೆ ಯಾಕೆ ಮುಖ್ಯವಾಗುತ್ತದೆಂದರೆ ಆಗ ಆರೆಸ್ಸೆಸ್ ಮತ್ತು ಬಿಜೆಪಿಗರು ತಮ್ಮೆಲ್ಲ ರಂಧ್ರಗಳನ್ನು ಮುಚ್ಚಿಕೊಂಡು ತೆಪ್ಪಗೆ ಕೂತಿದ್ದರು. 1984ರ ಗಲಭೆ ಕುರಿತು 'ದಿ ಹಾರ್ ಬಿಫೋರ್ ಡಾನ್' ಎಂಬ ಪುಸ್ತಕವನ್ನು ಬರೆದಿರುವ ಗೌತಮ್ ನವ್ಲಾಕ ಎಂಬುವರ ಪ್ರಕಾರ "ಆಗ ಆರೆಸ್ಸೆಸ್ ಮತ್ತು ಬಿಜೆಪಿಗಳಿಗೆ ಇಂದಿರಾ ಗಾಂಧಿಯವರ ಸಾವು ಮುಖ್ಯವಾಗಿತ್ತೆ ಹೊರತು ಅಮಾಯಕ ಸಿಖ್ಖರ ಕೊಲೆಗಳಲ್ಲ. ಅಷ್ಟೇ ಅಲ್ಲ, ಆಗ ಕಾಂಗ್ರೆಸ್ಸಿಗರು ಸಿಖ್ಖರ ವಿರುದ್ಧ ಹಿಂದೂಗಳನ್ನು ಸಂಘಟಿಸಿದ್ದು ಸಂಘಿಗಳಿಗೆ ಸರಿಯಾಗಿಯೇ ಕಂಡಿತ್ತು ಎಂಬುದು ನನ್ನ ಅನ್ನಿಸಿಕೆ. ಆ ಕಾರಣಕ್ಕೇ ಅವರು ಗಲಭೆ ನಡೆಯುತ್ತಿದ್ದಾಗ ಅದರ ವಿರುದ್ಧ ತುಟಿಪಿಟಿಕ್ ಅನ್ನಲಿಲ್ಲ, ಅದಕ್ಕಿಂತ ಮುಖ್ಯವಾದ ಅಂಶ ಯಾವುದೆಂದರೆ ಈ ಗಲಭೆಯಲ್ಲಿ ಸ್ವತಃ ಆರೆಸ್ಸೆಸ್ ಮತ್ತು ಬಿಜೆಪಿಯ ಪಾತ್ರವಿದ್ದದ್ದು, ಕೆಲವು ಕಡೆ ನಮ್ಮ ಸತ್ಯ ಶೋಧನಾ ವರದಿಯ ಪ್ರಕಾರ ಆರೆಸ್ಸಿಗರು ಗಲಭೆಯಲ್ಲಿ ಪಾಲುದಾರರಾಗಿದ್ದರು. ಗಲಭೆ, ಸಾವು, ನೋವು, ನಷ್ಟ ಇತ್ಯಾದಿಗಳೆಲ್ಲ ಮುಗಿದ ಅದೆಷ್ಟೋ ಕಾಲದ ನಂತರ ಈ ಮಾರಣಹೋಮದಿಂದಾಗಿ ತಮಗೆ ರಾಜಕೀಯ ಲಾಭ ಸಿಗುತ್ತದೆ ಅನ್ನಿಸಿದ್ದರಿಂದ ಅವರು ಇದಕ್ಕೆ ಕಾಂಗ್ರೆಸ್ ಕಾರಣ ಎಂದು ಹೇಳತೊಡಗಿದರು."

ಇವತ್ತು ಚೆಡ್ಡಿಗಳು ಎತ್ತುತ್ತಿರುವ ತಕರಾರುಗಳಲ್ಲಿ "ಇಂದಿರಾ ಗಾಂಧಿ 1975ರಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಿಸಿದಾಗ ನೀವೆಲ್ಲ ಬುದ್ಧಿಜೀವಿಗಳು ಏನು ಕಡಿದು ಕಟ್ಟೆಹಾಕುತ್ತಿದ್ದಿರಿ" ಎಂಬ ಪ್ರಶ್ನೆಯೂ ಇದೆ. ಅದರ ಬಗ್ಗೆ ಈ ಹಿಂದೆ ಬರೆದಿರುವುದರಿಂದ ಇಲ್ಲಿ ಅದೇ ತುರ್ತು ಪರಿಸ್ಥಿತಿಯಲ್ಲಿ ಸ್ವತಃ ಈ ಚೆಡ್ಡಿಗಳು ಏನು ಮಾಡುತ್ತಿದ್ದರು ಎಂದು ನೋಡಿದರೆ ಅವರ ಅಸಲಿ ಬಂಡವಾಳ ಗೊತ್ತಾಗುತ್ತದೆ.

ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಇಂದಿರಾ ಗಾಂಧಿ ಹಲವಾರು ಸಂಘಟನೆಗಳ ವಿರುದ್ಧ ನಿರ್ಬಂಧ ಹೇರಿದ್ದು ಅದರಲ್ಲಿ ಆರೆಸ್ಸೆಸ್ ಕೂಡ ಒಂದಾಗಿತ್ತು, ಆಗ ಪೊಲೀಸರು ಕೈಗೆ ಸಿಕ್ಕ ಚೆಡ್ಡಿಗಳನ್ನೆಲ್ಲ ಹಿಡಿದು ಜೈಲಿಗೆ ದೂಡುತ್ತಿದ್ದರು. ಎ.ಕೆ. ಸುಬ್ಬಯ್ಯನವರು ತಮ್ಮ 'ಆರೆಸ್ಸೆಸ್ ಅಂತರಂಗ' ಪುಸ್ತಕದಲ್ಲಿ ಹೇಳಿರುವಂತೆ "ತುರ್ತುಪರಿಸ್ಥಿತಿಯಲ್ಲಿ ಅವರು (ಅಂದರೆ ಆರೆಸ್ಸೆಸ್‌ನವರು) ನಡೆಸಿದ ಭೂಗತ ಚಟುವಟಿಕೆಯ ಅಂಗವಾಗಿ ಹೊರಡಿಸಿದ ಎಲ್ಲಾ ಸಾಹಿತ್ಯದಲ್ಲಿ ಆರೆಸ್ಸೆಸ್ ಮೇಲಿನ ನಿರ್ಬಂಧ ತೆಗೆದುಹಾಕಿ ಜೈಲಿನಲ್ಲಿದ್ದ ಆರೆಸ್ಸೆಸ್‌ನವರ ಬಿಡುಗಡೆಯ ಬಗ್ಗೆ ಒತ್ತಾಯಿಸಲಾಗಿತ್ತೇ ವಿನಃ ತುರ್ತುಪರಿಸ್ಥಿತಿ ರದ್ದಾಗಬೇಕೆಂಬ ಒತ್ತಾಯ ಎಲ್ಲೂ ಇರಲಿಲ್ಲ."

ಅದಕ್ಕಿಂತ ಆಘಾತಕಾರಿ ವಿಷಯ ಯಾವುದೆಂದರೆ ಇದೇ ಆರೆಸ್ಸೆಸ್‌ನ ಆಗಿನ ಮುಖ್ಯಸ್ಥ ಬಾಳಾಸಾಬ್ ದೇವರಸ್ ಎಂಬಾತ ಇಂದಿರಾ ಗಾಂಧಿ ಮುಂದೆ ಪದೇಪದೇ ಅಹವಾಲುಗಳನ್ನು ಸಲ್ಲಿಸಿದ್ದು! ಬಹಳ ಜನಕ್ಕೆ ಗೊತ್ತಿರದ ಸಂಗತಿ ಯಾವುದೆಂದರೆ ತುರ್ತುಪರಿಸ್ಥಿತಿ ಸಂದರ್ಭದಲ್ಲಿ ದೇವರಸ್ ಎಂಬ ಪ್ರಮುಖ ಚೆಡ್ಡಿಯನ್ನು ಮಹಾರಾಷ್ಟ್ರದ ಯರವಾಡ ಜೈಲಿನಲ್ಲಿ ಬಂಧಿಸಲಾಗಿತ್ತು, ಆ ಅವಧಿಯಲ್ಲಿ ಆತ ಇಂದಿರಾ ಗಾಂಧಿಗೆ ಎರಡು ಪತ್ರಗಳನ್ನು ಬರೆದಿದ್ದ. ಹಲವು ವರ್ಷಗಳ ನಂತರ ಆ ಪತ್ರಗಳನ್ನು ಮಹಾರಾಷ್ಟ್ರದ ವಿಧಾನ ಸಭೆಯಲ್ಲಿ ಮಂಡಿಸಲಾಗಿತ್ತು.

ಒಂದು ಪತ್ರದಲ್ಲಿ ದೇವರಸ್ ಇಂದಿರಾ ಗಾಂಧಿ ಜಾರಿಗೆ ತಂದಿದ್ದ 20 ಅಂಶಗಳ ಕಾರ್ಯಕ್ರಮವನ್ನು ಪ್ರಶಂಸಿಸಿದ್ದನಲ್ಲದೆ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಜೈಲಿನಲ್ಲಿದ್ದ ಸಾವಿರಾರು ಆರೆಸ್ಸೆಸ್ ಮಂದಿಯನ್ನು ಬಿಡುಗಡೆ ಮಾಡಿ ಬಳಸಿಕೊಳ್ಳಬೇಕೆಂದು ಪ್ರಾರ್ಥಿಸಿದ್ದ! ಎರಡನೆ ಪತ್ರದ ಪ್ರಾರಂಭದಲ್ಲೇ ಇಂದಿರಾ ಗಾಂಧಿಯವರು ತಮ್ಮ ಲೋಕಸಭಾ ಸದಸ್ಯತ್ವ ರದ್ದಾದುದರ ವಿರುದ್ಧ ಶ್ರೇಷ್ಠ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಮೇಲ್ಮನವಿಯಲ್ಲಿ ಜಯಗಳಿಸಿದ್ದಕ್ಕೆ ಅಭಿನಂದನೆಯನ್ನು ವ್ಯಕ್ತಪಡಿಸಿದ್ದ!! ಸುಬ್ಬಯ್ಯ ಅವರು ಹೇಳಿರುವಂತೆ "ಈ ಮೇಲ್ಮನವಿಯಲ್ಲಿ ಗೆಲ್ಲುವುದಕ್ಕೆ ಇಂದಿರಾ ಗಾಂಧಿಯವರು ಕಾನೂನನ್ನೇ ಪೂರ್ವಾನ್ವಯವಾಗಿ ಬದಲಾಯಿಸಿದ್ದನ್ನು ಇಡೀ ರಾಷ್ಟ್ರದಲ್ಲಿ ಎಲ್ಲಾ ಪ್ರಜಾಪ್ರಭುತ್ವವಾದಿಗಳು ಒಕ್ಕೊರಲಿನಿಂದ ಖಂಡಿಸುತ್ತಿದ್ದಾಗ, ಅಕ್ರಮ ಮಾರ್ಗದಿಂದ ಗಳಿಸಿದ ಈ ಗೆಲುವಿಗೆ ಭಾರೀ ಬಲಶಾಲಿ ಸಂಘಟನೆ ಎಂದು ಹೇಳಿಕೊಳ್ಳುತ್ತಿದ್ದ ಆರೆಸ್ಸೆಸ್‌ನ ಸರ್ವೋಚ್ಚ ನಾಯಕ ಬಾಳಾಸಾಬ್ ದೇವರಸ್ ಅಭಿನಂದನೆ ಸಲ್ಲಿಸಿ ಜೈಲಿನಿಂದ ಪತ್ರ ಬರೆದುದರ ಔಚಿತ್ಯವೇನು? ಇದು ಶರಣಾಗತಿ ಪತ್ರವಲ್ಲದೆ ಇನ್ನೇನು?" ಇದೆಲ್ಲದರ ಅರ್ಥ ಇಷ್ಟೇ: ಆರೆಸ್ಸೆಸ್‌ಗಾಗಲಿ ಬಿಜೆಪಿಗಾಗಲಿ ತುರ್ತುಪರಿಸ್ಥಿತಿ ಕುರಿತು ಯಾವ ವಿರೋಧವೂ ಇರಲಿಲ್ಲ, ಯಾಕೆಂದರೆ ಅವರು ಅಂತಹ ಫ್ಯಾಸಿಸ್ಟ್ ಕಾರ್ಯಗಳನ್ನು ಬೆಂಬಲಿಸುವವರು!

* * *

ಮುಖ್ಯಮಂತ್ರಿ, ಸಿದ್ದರಾಮಯ್ಯನವರು "ನಾನು ಇದುವರೆಗೂ ಗೋಮಾಂಸ ತಿಂದಿಲ್ಲ, ಗೋಮಾಂಸ ತಿನ್ನಬೇಕೆನಿಸಿದರೆ ತಿನ್ನುತ್ತೇನೆ. ಅದನ್ನು ತಡೆಯಲು ನೀವು ಯಾರು?" ಎಂದು ಇತ್ತೀಚೆಗೆ ಪ್ರಶ್ನಿಸಿರುವುದು ಸಂಘಿಗಳ ಚೆಡ್ಡಿಗೇ ಬೆಂಕಿ ಹಚ್ಚಿದಂತಾಗಿದೆ. ಅದಕ್ಕೆ ಜಗದೀಶ್ ಶೆಟ್ಟರ್ "ಸಿದ್ದರಾಮಯ್ಯನವರಿಗೆ ಹಂದಿ ಮಾಂಸವೂ ಇಷ್ಟವಾಗಬಹುದು" ಎಂದಿದ್ದಾರೆ. ಇಲ್ಲಿ ಸಿದ್ದು ಗೋಮಾಂಸದ ಪರ ಮಾತನಾಡಿದ್ದರಿಂದ ಹಂದಿ ಮಾಂಸವನ್ನು ಪ್ರಸ್ತಾಪಿಸುವ ಮೂಲಕ ಶೆಟ್ಟರ್ ಕೋಮುಕಿತಾಪತಿ ಮಾಡಲು ಯತ್ನಿಸಿದ್ದಾರೆ. ಅದಕ್ಕೆ ಸಿದ್ದು "ನನಗೆ ಬೇಕಿದ್ದರೆ ಅದನ್ನೂ ತಿನ್ನುತ್ತೇನೆ" ಎನ್ನುವ ಮೂಲಕ ಶೆಟ್ಟರ್‌ಗೆ ಚಾಟಿ ಏಟು ನೀಡಿದ್ದಾರೆ.

ಇನ್ನು ತಾನು ಸರ್ವಸಂಗಪರಿತ್ಯಾಗಿ ಎಂಬಂತೆ ಪೋಸು ಕೊಡುವ ರಾಜಕಾರಣಿ ಪೇಜಾವರ ಶ್ರೀ ವಿಶ್ವೇಶತೀರ್ಥರು "ಮಸೀದಿಯ ಮುಂದೆ ಹಂದಿ ಮಾಂಸದ ಸಮಾರಾಧನೆ ಮಾಡುವ ಧೈರ್ಯ ನಿಮಗಿದೆಯೋ?" ಎಂದು ಪ್ರಶ್ನಿಸಿದ್ದಾರೆ. ಇದೆಂತಹ ಕುತರ್ಕ? ಸಿದ್ದು ಎಲ್ಲಿಯಾದರೂ ತಾನು ಯಾವುದೇ ದೇವಸ್ಥಾನದ ಮುಂದೆ ನಿಂತು ದನದ ಮಾಂಸದ ಸಮಾರಾಧನೆ ಮಾಡುತ್ತೇನೆ ಎಂದಿದ್ದಾರಾ? ಹಾಗೆ ಹೇಳಿಲ್ಲವಾದ್ದರಿಂದ ಮಸೀದಿಯ ಮುಂದೆ ಹಂದಿ ಮಾಂಸದ ಸಮಾರಾಧನೆ ವಿಷಯ ಯಾಕೆ? ಅಂದಹಾಗೆ ಹಲವು ದಲಿತರ ದೇವಸ್ಥಾನಗಳಲ್ಲಿ ಈಗಲೂ ಕೋಣ ಅಥವಾ ಎಮ್ಮೆಗಳನ್ನು ಬಲಿಕೊಡಲಾಗುತ್ತದಲ್ಲದೆ ಅವುಗಳ ಮಾಂಸದ ಸಮಾರಾಧನೆಯೂ ಅಲ್ಲೇ ಜರುಗುತ್ತದೆ ಎಂಬ ವಿಷಯ ಪೇಜಾವರ ಶ್ರೀಗಳಿಗೆ ಗೊತ್ತಿಲ್ಲ ಎಂದಲ್ಲ, ಇರಲಿ.


ಸುನೀಲ್ ಕುಮಾರ ಎಂಬ ಮತ್ತೊಬ್ಬ ಚೆಡ್ಡಿ ಚತುರ "ಸಿದ್ದರಾಮಯ್ಯ ಬೇಕಿದ್ದರೆ ಸಗಣಿಯನ್ನೂ ತಿನ್ನಲಿ" ಎಂದಿದ್ದಾನೆ. ಅಯ್ಯೋ ಮಾರಾಯ, ಬೇಳೆ ಬೆಲೆಯು ಮೋದಿ ಅಧಿಕಾರದ ಅವಧಿಯಲ್ಲಿ 70 ರೂಗಳಿಂದ 270 ರೂಗಳಿಗೆ ಏರಿರುವುದರಿಂದ ಸದ್ಯದಲ್ಲೇ ಸಿದ್ದು ಇರಲಿ, ನೀನು, ನಾವು, ಎಲ್ಲರೂ ಸಗಣಿ ತಿನ್ನುವ 'ಅಚ್ಛೇ ದಿನ್' ಬಂದರೂ ಬರಬಹುದು ಕಣಯ್ಯ.

ಈಶ್ವರಪ್ಪ, ಪ್ರಹ್ಲಾದ್ ಜೋಷಿ ಇತ್ಯಾದಿ ಚೆಡ್ಡಿಗಳು ಸಿದ್ದರಾಮಯ್ಯ ಗೋಮಾಂಸ ತಿನ್ನುವ ಬಗ್ಗೆ ಹೇಳುವ ಮೂಲಕ ಬಹುಸಂಖ್ಯಾತ ಹಿಂದೂಗಳ ಭಾವನೆಗೆ ನೋವುಂಟು ಮಾಡಿದ್ದಾರೆ ಎಂದೆಲ್ಲ ತಮ್ಮ ನಾಲಿಗೆಗಳನ್ನು ಹರಿಬಿಟ್ಟಿದ್ದಾರೆ. ಅಲ್ಲಾ, ಬಹುಸಂಖ್ಯಾತ ಹಿಂದೂಗಳು- ಪುಳಚಾರು ಬ್ರಾಹ್ಮಣರನ್ನು ಮತ್ತು ಈರುಳ್ಳಿ-ಬೆಳ್ಳುಳ್ಳಿ ಲಿಂಗಾಯತರನ್ನು ಹೊರತುಪಡಿಸಿ - ದನದ ಮಾಂಸವನ್ನು ತಿನ್ನುತ್ತಾರೆ. ಅಷ್ಟೇ ಅಲ್ಲ, ಅದೆಷ್ಟೋ ಒಕ್ಕಲಿಗರು ಹಂದಿ ಮಾಂಸವನ್ನು ತಿನ್ನುತ್ತಾರೆ. ಈಗೀಗ ಹಲವು ಬ್ರಾಹ್ಮಣರು ಮತ್ತು ಲಿಂಗಾಯತರೂ ಕೋಳಿ, ಮೀನು ಇತ್ಯಾದಿಗಳನ್ನು ಸೇವಿಸಲಾರಂಭಿಸಿದ್ದಾರೆ. ಅಷ್ಟೇ ಅಲ್ಲ, ಸಿದ್ದರಾಮಯ್ಯನವರ ಹೇಳಿಕೆ ವಿರುದ್ಧ ಇಲ್ಲಿಯತನಕ ಚೆಡ್ಡಿ ಬಳಗವನ್ನು ಹೊರತುಪಡಿಸಿ ಯಾರೂ ಆಭ್ಯಂತರವನ್ನು ವ್ಯಕ್ತಪಡಿಸಿಲ್ಲ, ಹಾಗಿರುವಾಗ ಈ ಚೆಡ್ಡಿಗಳು ಅದ್ಯಾವ ನೊಂದ ಹಿಂದೂಗಳ ಬಗ್ಗೆ ಮಾತನಾಡುತ್ತಿದ್ದಾರೆ? ನಮ್ಮ ರಾಜ್ಯದಲ್ಲಿ ಶೇಕಡ ನಾಲ್ಕಕ್ಕಿಂತ ಕಡಿಮೆ ಸಂಖ್ಯೆಯಲ್ಲಿರುವ ಹಲವು ಜನಿವಾರಿಗಳು ಅದು ಹೇಗೆ ಬಹುಸಂಖ್ಯಾತ ಹಿಂದೂಗಳಾಗುತ್ತಾರೆ?

ಅಂದಹಾಗೆ, ನಾನು ದನದ ಮಾಂಸ, ಹಂದಿ ಮಾಂಸ, ಕೋಳಿ ಮತ್ತು ಕುರಿ ಮಾಂಸದ ಜೊತೆಗೆ ಮೀನು, ಹಾವು ಇತ್ಯಾದಿಗಳನ್ನು ತಿಂದಿದ್ದೇನೆ. ಮುಂದೆಯೂ ತಿನ್ನುತ್ತೇನೆ. ಸಿದ್ದರಾಮಯ್ಯನವರಂತೆ "ಅದನ್ನು ತಡೆಯಲು ನೀವು ಯಾರು?" ಎಂದು ಕೇಳುವ ಮೂಲಕ ಸಿದ್ದರಾಮಯ್ಯನವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ■

ಮಂಗಳೂರು ಜೈಲಲ್ಲೇ ಗ್ಯಾಂಗ್ ವಾರ್!

ಹಿಂದೂ ಡಾನ್ ವಿಕ್ಕಿ ಶೆಟ್ಟಿಗಾಯ್ತಾ ಜೋಡಿ ಆಹುತಿ?




ಮಂಗಳೂರಿನ ಹೈಟೆಕ್ ಭೂಗತ ಲೋಕದ ಬೀದಿಗಳಲ್ಲಿ ನಡೆಯುತ್ತಿದ್ದ ರೌಡಿಗಳ ಗ್ಯಾಂಗ್‌ವಾರ್ ಈಗ ಜೈಲಿನ ನಟ್ಟ ನಡುವೆಯೇ ಬಂದು ನಿಂತಿದೆ! ಹಿಂದೂತ್ವದ ಪ್ರಯೋಗಶಾಲೆಯಂತಾಗಿರುವ ದಕ್ಷಿಣ ಕನ್ನಡದ ಖತರ್‌ನಾಕ್ ಕೋಮುವಾದದ ಅನಾಹುತಕಾರಿ ಅಡ್ಡ ಪರಿಣಾಮವಿದು. ಎತ್ತಿಂದೆತ್ತ ಲೆಕ್ಕ ಹಾಕಿ ತಾಳೆ ನೋಡಿದರೂ ಮೊನ್ನೆ ಮಂಗಳೂರಿನ ಜಿಲ್ಲಾ ಕಾರಾಗೃಹದಲ್ಲಾದ ಜೋಡಿ ಕೊಲೆಯಿದೆಯಲ್ಲ, ಅದು ಹಿಂದೂತ್ವಕ್ಕಾದ ಆಹುತಿಯಾ ಎಂಬ ಅನುಮಾನ ಮೂಡದೇ ಇರದು. ತಲವಾರು ಮತ್ತು ಕೋಳಿಬಾಕುಗಳ ಮೊರೆತಕ್ಕೆ ಕರಾವಳಿಗೆ ಕರಾವಳಿಯೇ ಬೆಚ್ಚಿಬಿದ್ದಿದೆ!!

ಮತಾಂಧ ರೋಗದ ಸೋಂಕು ಕರಾವಳಿ ಪಾತಕ ಪ್ರಪಂಚಕ್ಕೆ ತಗುಲಿ ಅದ್ಯಾವುದೋ ಕಾಲವಾಗಿ ಹೋಗಿದೆ. ತಾಪಂ ಅಧ್ಯಕ್ಷನಾಗಿದ್ದ ಜಬ್ಬಾರ್, ಮಾಡೂರು ಇಸುಬು, ಚಿಡ್ಡಿ ಪರಿವಾರದೊಂದಿಗೆ ಗುರುತಿಸಿಕೊಂಡಿದ್ದ ಪೊಳಲಿ ಅನಂತು, ಕ್ಯಾಂಡಲ್ ಸಂತು, ಸುಖಾನಂದ ಶೆಟ್ಟಿ, ಪ್ರಶಾಂತ ಪೂಜಾರಿ.... ವಗೈರೆ ಸಣ್ಣ ಸೈಜಿನ ಡಾನ್‌ಗಳು ಯಾವಾಗ ಕೋಮು ನೆಲೆಯಲ್ಲಿ ಭೂಗತ ರಾಜಕೀಯ-ಸಾಮಾಜಿಕ ಪಾತಕ ಶುರು ಹಚ್ಚಿಕೊಂಡರೋ ಆಗ ದೊಡ್ಡ ಸದ್ದು ಸುದ್ದಿ ಮಾಡತೊಡಗಿದ್ದರು. ಧರ್ಮಾಧಾರಿತ ರೌಡಿಗಿರಿಯ ಹುಲಿ ಸವಾರಿ ಹೊರಟಿದ್ದ ಈ ಪುಂಡರನ್ನೆಲ್ಲ ಅದೇ ಹುಲಿ ತಿಂದು ತೇಗಿದ್ದು ಇತಿಹಾಸ. ಕರಾವಳಿ ಮೂಲದ ವಿದೇಶವಾಸಿ ಭೂಗತಜೀವಿಗಳಾದ ವಿಕ್ಕಿ ಶೆಟ್ಟಿ ಯಾನೆ ವಿಕ್ರಮ್ ಶೆಟ್ಟಿ ಮತ್ತು ಹೇಮಂತ ಪೂಜಾರಿ, ರವಿ ಪೂಜಾರಿ ನಡುವೆ ಹಿಂದೂ ಡಾನ್‌ಗಿರಿಗಾಗಿ ಜಿದ್ದಾಜಿದ್ದಿನ ಮೇಲಾಟ ಇವತ್ತಿಗೂ ನಡೆದೇ ಇದೆ.

ಡಬ್ಬಲ್ ಮರ್ಡರ್

ಕಳೆದ ಸೋಮವಾರ (2 ನವೆಂಬರ್ 2015) ಮುಂಜಾನೆ ಮಂಗಳೂರಿನ ಸಬ್ ಜೈಲ್‌ನಲ್ಲಾದ ರೌಡಿಗಳ ಗ್ಯಾಂಗ್‌ವಾರ್ ಕೋಮು ದ್ವೇಷದ್ದಲ್ಲವೆಂದು ಮಂಗಳೂರು ಪೊಲೀಸ್ ಕಮೀಷನರ್ ಮುರುಗನ್ ಸಾಹೇಬರು ಹೇಳಿದ್ದಾರೆ. ಆದರೆ ಹತ್ಯೆಗೀಡಾದ ಮಾಡೂರು ಇಸುಬು ಮತ್ತು ಗಣೇಶ್ ಶೆಟ್ಟಿ ಹಾಗೂ ಹತ್ಯೆ ಮಾಡಿಸಿದ್ದೇ ತಾನೆಂದು ಹೇಳಿಕೊಳ್ಳುತ್ತಿರುವ ವಿಕ್ಕಿ ಶೆಟ್ಟಿಗಳ ಜಾತಕ ಜಾಲಾಡಿದರೆ ಅದ್ಯಾಕೋ ಕೋಮು ಹಗೆಯ ಹೊಗೆ ಗೋಚರಿಸುತ್ತದೆ. ಮಾಡೂರು ಇಸುಬು ಮತ್ತು ಗಣೇಶ್ ಶೆಟ್ಟಿ ಇಬ್ಬರೂ ಛೋಟಾ ಶಕೀಲ್ ಗ್ಯಾಂಗಿನ ಪಂಟರ್‌ಗಳಾದರೆ, ಬರ್ಬರವಾಗಿ ಕೊಚ್ಚಿ ಕೊಂದಿರುವ ನಾಲ್ಕೈದು ವಿಚಾರಣಾಧೀನ ಕೈದಿಗಳಿಗೆ ದೊರೆ ಆಕಾಶಭವನ ಶರಣ್ ಎಂಬ ಪಾತಕಿ. ಈ ಶರಣ್‌ಗೆ ಗುರು ಡಾನ್ ವಿಕ್ಕಿ ಶೆಟ್ಟಿ. ಮೂಲದಲ್ಲಿ ದಾವೂದ್ ಇಬ್ರಾಹಿಂ ಮತ್ತು ವಿಕ್ಕಿ ಶೆಟ್ಟಿ ಪರಮ ವೈರಿಗಳು. ಈ ಶತ್ರುತ್ವದ ಜಾಡು ಹಿಡಿದು ಹೊರಟರೆ ಮತ್ತದೇ ಕೋಮು ವಿದ್ವೇಷದ ಪಾತಕ ಪ್ರಪಂಚವೇ ತೆರೆದುಕೊಳ್ಳುತ್ತದೆ....

ಮುಸ್ಲಿಮ್ ರೌಡಿ ಮಾಡೂರು ಇಸುಬು ಮಂಗಳೂರು ಜೈಲಿಗೆ ಬಂದಾಗಿಂದಲೂ ಆತನ ಮೇಲೆ ಹಿಂದೂ ಪಾತಕಿಗಳ ಕಣ್ಣು ಬಿದ್ದಿತ್ತು. ಚಿಡ್ಡಿ ಗ್ಯಾಂಗಿನ ಪ್ರಮುಖ ಸದಸ್ಯನಂತಿದ್ದ ರೌಡಿ ಪೊಳಲಿ ಅನಂತುನ ಹತ್ಯೆಗಾರ ಈತನೆಂಬ ದ್ವೇಷ ಹಿಂದೂತ್ವದ ಕೈದಿಗಳಲ್ಲಿ ಬುಸುಗುಡುತ್ತಿತ್ತು. ಇಸುಬುನೂ ಕಮ್ಮಿ ಕುಳವಲ್ಲ. ಆತ ಜೈಲಿನೊಳಗೇ ಮುಸ್ಲಿಮ್ ಗ್ಯಾಂಗ್ ಕಟ್ಟಿಕೊಂಡಿದ್ದ. ಬಾಸ್ ದಾವೂದ್ ಪಡೆಯ ಶಾರ್ಪ್ ಶೂಟರ್ ಗಣೇಶ್ ಶೆಟ್ಟಿಯಂಥ ಹಿಂದೂಗಳೂ ಆತನ ಸಹಚರರಾಗಿದ್ದರು. ಮಂಗಳೂರಿನ ಸಬ್‌ಜೈಲಿನಲ್ಲಿ



ಹಿಂದೂ-ಮುಸ್ಲಿಮ್ ಗ್ಯಾಂಗ್‌ವಾರ್ ಬಿಟ್ಟೂಬಿಡದೆ ನಡೆಯುತ್ತಿತ್ತು. ಈ ಕೋಮು ಕ್ರೌರ್ಯ ಅದ್ಯಾವ ಮಟ್ಟಕ್ಕೆ ಹೋಗಿತ್ತೆಂದರೆ ಊಟ-ತಿಂಡಿ ವಿತರಣೆಯಿಂದ ಮಾತು-ನೋಟದವರೆಗೂ ಜಿದ್ದಾಜಿದ್ದಿ ಒಳಗೊಳಗೇ ನಡೆಯುತ್ತಿತ್ತು.

ಇಸುಬುಗೆ ಸ್ಕೆಚ್?

ಶರಣ್ ಮತ್ತು ಇಸುಬು ನಡುವೆ ಹಗೆ ಮೊದಲಿಂದಲೂ ಇತ್ತು. 2010 ರಲ್ಲಿ ಇಂಟರ್‌ಪೋಲ್ ನೆರವಿನಿಂದ ಇಸುಬುನನ್ನು ಸೌದಿ ಅರೇಬಿಯಾದಿಂದ ಎತ್ತಾಕಿಕೊಂಡು ಬಂದಿದ್ದರು ಪೊಲೀಸರು. 2008 ರಲ್ಲಿ ರಿಕ್ಷಾ ಡ್ರೈವರ್ ಒಬ್ಬನ ಕೊಲೆ ಹಾಗು ಸುಳ್ಯದ ಕುರುಂಜಿ ವೆಂಕಟರಮಣ ಗೌಡರ ಮೆಡಿಕಲ್ ಕಾಲೇಜಿನ ಮ್ಯಾನೇಜರಾಗಿದ್ದ ಬ ಬ್ರಾಹ್ಮಣನ ಹತ್ಯೆ ಕೇಸಲ್ಲಿ ಶರಣ್ ಜೈಲು ಪಾಲಾಗಿ ಇಬ್ಬರೂ ಮಂಗಳೂರು ಸಬ್ ಜೈಲ್‌ಮೇಟ್‌ಗಳಾಗಿದ್ದರು. ಇಬ್ಬರ ನಡುವಿನ ಸೇಡು-ಸೆಡುವು ವಿಪರೀತವಾಗಿ ಹೋಯ್ತು. ಪರಸ್ಪರ ಮುಯ್ಯಿ ತೀರಿಸಿಕೊಳ್ಳಲು ಇಬ್ಬರೂ ಸ್ಕೆಚ್ ಹಾಕುತ್ತಲೇ ಇದ್ದ

ಕೆಲವು ದಿನಗಳ ಹಿಂದೆ ಕೊಲೆ ಕೇಸೊಂದರಲ್ಲಿ ಫಿಕ್ಸ್ ಆಗಿದ್ದ ಯುವಕರ ತಂಡವನ್ನು ಸಬ್‌ಜೈಲ್‌ಗೆ ತಂದಿಡಲಾಗಿತ್ತು. ಇವರಿಗೆಲ್ಲಾ ನಾಯಕನಾದವನು ಶರಣ್ ಆಕಾಶ ಭವನ್. ಈ ಪಡೆಯ ಶೋಭರಾ ಪ್ರದೀಪ್ ವಾಮಂಜೂರು, ಯುವರಾಜ್, ಲತೀಫ್ ಮುಂತಾದವರಿಗೆ ಮಾಡೂರು ಇಸುಬುನ ಕಂಡರೆ ರೋಷ ಕೆರಳುತ್ತಿತ್ತು. ಸಣ್ಣ-ಪುಟ್ಟ ಸಂಗತಿಗೆಲ್ಲ ಜಗಳ-ಜಿದ್ದು ನಡೆಯುತ್ತಿತ್ತು. ಕಳೆದೊಂದು ವಾರದಿ ಮಾಡೂರು ಇಸುಬು ಮತ್ತು ಶರಣ್ ಆಕಾಶ್‌ಭವ ಪಡೆಯ ಕಿತ್ತಾಟ ಜೋರಾಗಿ ಹೋಗಿತ್ತು. ಹೀಗಾಗಿ ಶರಣ್‌ನನ್ನು ಶಿವಮೊಗ್ಗ ಜೈಲಿಗೆ ಸ್ಥಳಾಂತರಿಸಿದ್ದರೆ, ಇಸುಬುನ ಬೇರೆ ಕಡೆ ಒಯ್ಯಲು ಜೈಲು ಅಧಿಕಾರಿಗಳು ತಯಾರಿ ನಡೆಸಿದ್ದರು.

ಸೋಮವಾರ ಬೆಳಗ್ಗೆ

ಶರಣ್‌ಗೆ ತನ್ನನ್ನು ಶಿವಮೊಗ್ಗ ಜೈಲಿಗೆ ಕಳಿಸಿದ ಕೆರಳಿಸಿತ್ತು. ಆತ ಅಲ್ಲಿಂದಲೇ ವೈರಿ ಇಸುಬುನ ತ ತೆಗೆಯುವ ಸಂಚು ರೂಪಿಸಿ ಸಹಚರರ ನಿಭಾಯಿಸ ತೊಡಗುತ್ತಾನೆ. ಶರಣ್ ಪಡೆಯನ್ನು ಬೇರೆ ಕೋಣೆಯಲ್ಲಿ ಇಡಲಾಗಿತ್ತು. ಆದರೂ ಅವರ ಕ ಮಾತ್ರ ಇಸುಬುನ ಮೇಲೇ ಇತ್ತು. ಸೋಮವಾರ ಮುಂಜಾನೆಯ ಉಪಾಹಾರದ ಸಮಯಕ್ಕೆ ಇಸುಬ ಖತಮ್ ಮಾಡಲು ಶರಣ್ ಪಡೆ ಮುಹೂರ್ತ ಇಟ್ಟಿದೆ. ಪ್ರತಿದಿನ ಉಪಾಹಾರದ ಮೊದಲು ಇಸ ವಾಕ್ ಮಾಡುತ್ತಿದ್ದ. ಇದನ್ನು ಗಮನಿಸಿದ್ದ ಶರಣ್ ತಂಡ ಅಂದು ಬಟ್ಟೆಯನ್ನು ಗೋಡೆಗೆ ಕಟ್ಟಿ ಅದ ನೆರವಿಂದ ಇಸುಬುನ ಬಳಿಗೆ ಹಾರಿದೆ. ಕೈಯ್ಯಲ್ಲಿ ಕೋಳಿಬಾಕು, ತಲವಾರುಗಳಿಂದ ಸಿಕ್ಕಸಿಕ್ಕಲ್ಲಿ ಕೊ ಆರಂಭಿಸಿದೆ.

ಆಗ ಇಸುಬುನ ಪರಮಾಪ್ತ ಗಣೇಶ ಶೆಟ್ಟಿ, ಆಸಿಫ್, ಇಕ್ಬಾಲ್ ಮತ್ತಿತರ ಗ್ಯಾಂಗಸ್ಟರ್‌ಗಳು ವೈ ಪಡೆಗೆ ತಿರುಗಿ ಬಿದ್ದಿದ್ದಾರೆ. ಆದರೆ ಮಾರಕಾಯುಧ ಶರಣ್ ತಂಡ ಯದ್ವಾತದ್ವಾ ಕಡಿದು ಕೆರೆ ಹಾಕಿ ಇಸುಬು ಜೈಲಲ್ಲೇ ಜೀವ ಬಿಟ್ಟಿದ್ದಾನೆ. ಗಣೇಶ್ ಆಸ್ಪತ್ರೆಯಲ್ಲಿ ಸತ್ತಿದ್ದಾನೆ. ದಾಳಿ ತಪ್ಪಿಸಲು ಬಂದ ಜೈಲರ್ ಓಬಳೇಶಪ್ಪ ಮತ್ತಿತರ ಜೈಲು ಸಿಬ್ಬಂದಿ ಮೇಲೂ ತಲವಾರು ಪ್ರಯೋಗವಾಗಿದೆ. ಇಸುಬು ಹತನಾಗಿದ್ದು ಖಾತ್ರಿಯಾದಾಗಲೇ ಹಂತಕ ಪಡೆಯ ಆವೇಶ ಇಳಿದಿದೆ. ಅಂಥ ಘನಘೋರ ಪಾತಕ ಜೈಲಲ್ಲಿ ನಡೆದುಹೋಗಿದೆ. ರಕ್ತದ ಕೋಡಿಯೇ ಹರಿದಿದೆ.

ಕಾರಾಗೃಹ ಬದಲಾಗಿದ್ದೇಕೆ?

ಮಂಗಳೂರಿನ ಹೊಸ ಸಬ್‌ಜೈಲಿನಲ್ಲಿ ಎ ಮತ್ತು ಬಿ ಎಂಬ ಎರಡು ಬ್ಲಾಕ್‌ಗಳಿವೆ. ಇಷ್ಟು ದಿನ ಎ ಬ್ಲಾಕ್‌ನ ಮುಸ್ಲಿಂ ಕೈದಿಗಳನ್ನಿರಿಸಿದರೆ, ಬಿ ಬ್ಲಾಕ್‌ನಲ್ಲಿ ಹಿಂದೂ ಕೈದಿಗಳನ್ನು ಇರಿಸಲಾಗುತ್ತಿತ್ತು. ಹಾಗಾಗಿಯೇ ಇಲ್ಲಿಯವ ಇಂತಹ ಮಾರಣಾಂತಿಕ ಘರ್ಷಣೆಗಳು ನಡೆದಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಮುಸ್ಲಿಂ ಕೈದಿಗಳ ಎ ಬ್ಲಾಕ್‌ ಹಿಂದೂ ಕೈದಿಗಳನ್ನೂ ಬಂಧಿಸಿಡಲಾಗುತ್ತಿದೆ. ಮಂಗಳೂರಿನ ಹಿಂದೂತ್ವ ಹಿಸ್ಟರಿಯ ಅರಿವಿದ್ದೂ ಇಂತಹ ಅಪಾಯಕ ಬದಲಾವಣೆಗೆ ಕಾರಣವೇನೆಂಬುದೇ ಅರ್ಥವಾಗಿಲ್ಲ.

ಈಗ ಹತ್ಯೆಯಾಗಿರುವ ಮಾಡೂರು ಇಸುಬುನನ್ನು ಮುಸ್ಲಿಂ ಕೈದಿಗಳ ಎ ಬ್ಲಾಕ್‌ನ 5ನೇ ಬ್ಯಾರಾಕ್‌ನಲ್ಲಿರಿಸಲಾಗಿ ಗಣೇಶ್ ಶೆಟ್ಟಿ ಹಿಂದೂವಾಗಿದ್ದರೂ ಛೋಟಾ ಶಕೀಲ್ ಗುಂಪಿನವ ಎಂಬ ಕಾರಣಕ್ಕೆ ಆತನನ್ನೂ ಎ ಬ್ಲಾಕ್‌ನ 6 ಬ್ಯಾರಾಕ್‌ನಲ್ಲಿ ಇರಿಸಲಾಗಿತ್ತು. ಹಿಂದೂ ಕೈದಿಗಳನ್ನು ಎ ಬ್ಲಾಕ್‌ಗೆ ತಂದು ತುಂಬುತ್ತಿರುವುದನ್ನು ಗಮನಿಸಿದ್ದ. ಮ ಶರಣ್ ಜೊತೆಗಿನ ದುಶ್ಮನಿಯ ಭೀಕರತೆ ಅರಿತಿದ್ದ ಮಾಡೂರು ಇಸುಬು ತನ್ನನ್ನು ಇಲ್ಲಿಂದ ಬೇರೆಡೆಗೆ ವರ್ಗಾಯಿಸುವ ಜೈಲರ್‌ಗೆ ಮನವಿ ಮಾಡಿಕೊಂಡಿದ್ದ. ಆತನನ್ನು ಸುರಕ್ಷಿತ ಜೈಲಿಗೆ ವರ್ಗಾಯಿಸುವ ಬದಲು ಪಕ್ಕದಲ್ಲೇ ಇರುವ ಹ ಬಂಧಿಖಾನೆಗೆ ವರ್ಗಾವಣೆ ಮಾಡಿದ್ದು ಅಚ್ಚರಿ ಮೂಡಿಸುತ್ತದೆ.

ಇಸುಬು ಮನವಿ ಮಾಡಿಕೊಂಡಿದ್ದರಿಂದ ಆತನನ್ನು ಎ ಬ್ಲಾಕ್‌ನಿಂದ ವರ್ಗಾವಣೆ ಮಾಡಿದ್ದೇನೊ ಸರಿ, ಆ ತನ್ನನ್ನು ಬೇರೆಡೆ ಸ್ಥಳಾಂತರಿಸುವಂತೆ ಮನವಿಯನ್ನೇ ಮಾಡಿಕೊಂಡಿರದಿದ್ದ ಗಣೇಶ್ ಶೆಟ್ಟಿಯನ್ನೂ ಎ ಬ್ಲಾಕ್‌ನಿ ಹಳೇ ಜೈಲಿಗೆ ವರ್ಗಾಯಿಸಿದ್ದು ಯಾಕೆ?

ಕೊಲೆಗೆ ಹತಾರಾಗಳನ್ನು ಸಲೀಸಾಗಿ ಸಾಗಿಸಬಹುದಾಗಿದ್ದ ಹಳೇ ಜೈಲಿನ ಆವರಣದಲ್ಲಿ ಅವರಿಬ್ಬರೂ ಏಕಕಾ ಹೆಣವಾದದ್ದಕ್ಕೂ, ಈ ಸ್ಥಳಾಂತರಕ್ಕೂ ನಂಟಿರಬಹುದೆ....!

ಗಣೇಶ್ ಶೆಟ್ಟಿ 'ಪಾತಕ' ಮುಖದ ವೈರುಧ್ಯಗಳು

ಮಂಗಳೂರು ಸಬ್‌ಜೈಲಿನಲ್ಲಿ ಆವತ್ತು ಬೆಳ್ಳಂಬೆಳಗ್ಗ ನಡೆದ ಗ್ಯಾಂಗ್‌ವಾರ್‌ಗೆ ಚೆಲ್ಲಿಕೊಂಡ ಎರಡು ಹೆಣಗಳನ್ನು ಎತ್ತಿಂದೆತ್ತ ಹೊರಳಿಸಿ ನೋಡಿದರೂ ಕೋಮು ರೌಡಿಸಂನ ದ್ವೇಷವೇ ರಾಚುತ್ತದೆ. ಆಕಾಶ್ ಭವನ್ ಹುಡುಗರು ಬೀಸಿದ ತಲವಾರುಗಳಿಗೆ ಗುರಿ ಇದ್ದದ್ದು ಮಾಡೂರು ಇಸುಬುನ ನೆತ್ತರಿನ ಮೇಲಷ್ಟೆ, ಅದೂ ಆತ ಪೊಳಲಿ ಅನಂತು, ಕ್ಯಾಂಡಲ್ ಸಂತು, ಸುಖಾನಂದ ಶೆಟ್ಟಿಯಂತಹ ಹಿಂದೂ ರೌಡಿಗಳ ಹತ್ಯೆಯ ಸಂಚುಗಾರ ಎಂಬ ಕಾರಣಕ್ಕೆ. ಆದರೆ ಇಸುಬುನ ಜೊತೆ ಹೆಣವಾದದ್ದು ಗಣೇಶ್ ಶೆಟ್ಟಿಯೆಂಬ ಛೋಟಾ ಶಕೀಲ್ ಗ್ಯಾಂಗಿನ ಮತ್ತೊಬ್ಬ ಶಾರ್ಪ್ ಶೂಟರ್.

ಈ ಗಣೇಶ್ ಶೆಟ್ಟಿ ಸಾಚಾ ಏನೂ ಅಲ್ಲ, ಆದ್ರೆ ಪಾತಕ ಲೋಕದ ಸಭ್ಯಸ್ಥ! ಈತನ ವ್ಯಕ್ತಿತ್ವವನ್ನು ಕೆದಕುತ್ತಾ ಹೋದಂತೆ ಭೂಗತ ಜಗತ್ತಿನ ಸೂತ್ರಗಳನ್ನೇ ಬುಡಮೇಲು ಮಾಡುವಂತ ಅಚ್ಚರಿಗಳು ತೆರೆದುಕೊಳ್ಳುತ್ತಾ ಸಾಗುತ್ತವೆ. ಈತ ಹೇಳಿಕೇಳಿ ಶಾರ್ಪ್ ಶೂಟರ್. ಹಣಕ್ಕಾಗಿ ಎಂತವರ ದೇಹಕ್ಕೂ ಗುಂಡು ನುಗ್ಗಿಸಿ ಪ್ರಾಣ ತೆಗೆಯುವ ನಿರ್ದಯಿ ಕಾಯಕದವ. ಆದರೆ ತನ್ನ ಪಾತಕ ಪಾತ್ರದಿಂದ ಹೊರಬಂದರೆ ಶೆಟ್ಟಿ ಅಷ್ಟೇನೂ ಕಟುಕ ಮನಸ್ಸಿನವನಲ್ಲ, ಹೇಳಬೇಕೆಂದರೆ, ಸ್ನೇಹ ಪ್ರೀತಿ ವಿಶ್ವಾಸಗಳಿಗೆ ಜೋತುಬೀಳುವಂತವನು. ಅಸಲಿಗೆ ಅವತ್ತು ಆಕಾಶ್ ಭವನ್ ಹುಡುಗರು ಇಸುಬುನನ್ನು ಅಡ್ಡಡ್ಡ ಕೊಚ್ಚುತ್ತಿರುವಾಗ, ಆ ಪೈಶಾಚಿಕ ಏಟುಗಳ ಅರಿವಿದ್ದೂ ಶೆಟ್ಟಿಯ ದೇಹ ಅಡ್ಡ ಹೋದದ್ದೇ ತನ್ನ ಜೊತೆಗಾರ ಇಸುಬನನ್ನು ಹಲ್ಲೆಯಿಂದ ರಕ್ಷಿಸಬೇಕೆಂದು.

ಸುಮಾರು ಎರಡು ವರ್ಷದ ತನ್ನ ಜೈಲುವಾಸದಲ್ಲಿ ಎಂದಿಗೂ ಆತ ತನ್ನ ನಟೋರಿಯಸ್ ಬ್ಯಾಕ್‌ಗ್ರೌಂಡ್ ಬಳಸಿಕೊಂಡು ಸಹಕೈದಿಗಳ ಮೇಲೆ ಏರಿಹೋದವನಲ್ಲ, ಎಷ್ಟೋ ಬಾರಿ ತನ್ನ ಪಾತಕ ಲೋಕದೊಂದಿಗೆ ಸಂಬಂಧವೇ ಇಲ್ಲದ ಖೈದಿಗಳ ನೆರವಿಗೆ ಧಾವಿಸಿ, ತನ್ನ ಸ್ವಂತ ಹಣದಿಂದ ಅಂತವರ ಅಪೇಕ್ಷೆಗಳನ್ನು ಈಡೇರಿಸಿದ್ದಿದೆ. ಅವನನ್ನು ಹತ್ತಿರದಿಂದ ಕಂಡವರು 'ಇಂತಹ ಸಾಫ್ಟ್ ವ್ಯಕ್ತಿ ಅದ್ಹೇಗೆ ಮತ್ತೊಬ್ಬರ ಜೀವ ತೆಗೆಯಬಲ್ಲ?' ಎಂಬಚ್ಚರಿಯನ್ನೂ ಹೊರಹಾಕುತ್ತಾರೆ. ಆದರೆ ತನ್ನ ದಂಧೆಯ ವಿಚಾರಕ್ಕೆ ಬಂದರೆ ಬಲು ಟಫ್!

ಗಣೇಶ್ ಶೆಟ್ಟಿ ಅಪ್ಪಟ ದೈವಭಕ್ತ, ಜೈಲಿನ ತನ್ನ ದಿನಚರಿಯಲ್ಲಿ ಬೆಳಗ್ಗೆ ೫ ಗಂಟೆಗೆ ಎದ್ದನೆಂದರೆ ಒಂದರ್ಧ ಗಂಟೆ ಧ್ಯಾನ ಮಾಡಿದ ಮೇಲಷ್ಟೆ ಇತರೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ. ದುರ್ಗಾ ಪರಮೇಶ್ವರಿ ಅವನ ಆರಾಧ್ಯ ದೈವ. ಪರಮೇಶ್ವರಿ ಫೋಟೊವನ್ನು ತನ್ನ ಜೈಲುಕೋಣೆಯಲ್ಲೂ ಇಟ್ಟುಕೊಂಡಿದ್ದ. ಅಷ್ಟೇ ಅಲ್ಲ ದಿನಂಪ್ರತಿ ಅದಕ್ಕೆ ಪುಷ್ಪಾರ್ಚನೆ, ಪೂಜೆ ಎಲ್ಲವೂ ನಡೆಯುತ್ತಿತ್ತು. ದೇವಿ ಫೋಟೊದ ಮುಂದೆ ಪೂಜೆಗೆಂದು ಹಣ್ಣು ಹಂಪಲುಗಳನ್ನಿಟ್ಟರೆ ಒಂದಿದೀ ದಿನ ಅವುಗಳನ್ನು ಮುಟ್ಟುತ್ತಿರಲಿಲ್ಲ. ಇನ್ನು ಆಗಿಂದಾಗ್ಗೆ ದೇವರ ಹೆಸರಲ್ಲಿ ಉಪವಾಸ, ವ್ರತಗಳನ್ನೂ ಮಾಡುತ್ತಿದ್ದ!

ಆದರೆ ಎಂದೂ ತನ್ನ ಭಕ್ತಿಗೆ ಕೋಮು ಮದ ಏರಿಸಿಕೊಂಡವನಲ್ಲ. ಆವನಿಗೆ ಹಿಂದೂಗಳಿಗಿಂತ ಮುಸ್ಲಿಂ ಸಹಚರರೇ ಹೆಚ್ಚಾಗಿದ್ದರು. ತಾನು ಪೂಜೆ ಮಾಡಿದಷ್ಟೇ ಪ್ರೀತಿಯಿಂದ ಸ್ನೇಹಿತರ ನಮಾಜುಗಳಿಗೆ ನೆರವಾಗುತ್ತಿದ್ದ. ಮಂಗಳೂರು ಜೈಲಿನಲ್ಲಿ ಹಿಂದೂ ಖೈದಿಗಳು ಮುಸ್ಲಿಂ ಖೈದಿಗಳ ಮೇಲೆ ಹಲ್ಲೆ ಮಾಡುವುದು, ಗೂಂಡಾಗಿರಿ ನಡೆಸುವುದು ಸಾಮಾನ್ಯ. ಅಂತಹ ವೇಳೆಯಲ್ಲೆಲ್ಲ ಗಣೇಶ್ ಶೆಟ್ಟಿ ಮಧ್ಯ ಪ್ರವೇಶಿಸಿ ಮುಸ್ಲಿಂ ಖೈದಿಗಳನ್ನು ಬಚಾವು ಮಾಡುತ್ತಿದ್ದ. ಮೊನ್ನೆ ಆತ ಸತ್ತದ್ದು ಕೂಡಾ ಅಂತದ್ದೇ ಒಂದು ಪ್ರಯತ್ನದಲ್ಲಿ!

ಮುಂಬೈನ ಮಹೇಂದ್ರ ಪ್ರತಾಪ್ ಹತ್ಯೆ ಆರೋಪದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಗಣೇಶ್ ಶೆಟ್ಟಿ ಇನ್ನು ಎರಡ್ಮೂರು ದಿನದಲ್ಲಿ ಬಿಡುಗಡೆ ಆಗಬೇಕಿತ್ತು. ಅದಕ್ಕೂ ಮೊದಲೇ ಹೆಣವಾಗಿ ಹೋಗಿದ್ದಾನೆ. ಅದು ಅವನೇ ತುಳಿದ ಹಾದಿಯ ಅಂತ್ಯ!

ಅಂದಹಾಗೆ, ಗಣೇಶ್ ಶೆಟ್ಟಿಯ ಮತ್ತೊಂದು ಅಚ್ಚರಿಯೆಂದರೆ ನೆತ್ತರು ಹೀರುವ, ಹಿಂಸೆ ಕಾರುವ ಪಾತಕ ಬದುಕಿನಲ್ಲಿದ್ದರೂ ಆತ ಪಕ್ಕಾ ಸಸ್ಯಾಹಾರಿ!!

ಪಾತಕಿಗಳ ಪಾತ್ರ ಪರಿಚಯ!

ಮಂಗಳೂರಿನ ಸಬ್ ಜೈಲಲ್ಲಿ ಎರಡು ಹೆಣ ಬೀಳುತ್ತಿದ್ದಂತೆಯೇ ವಿದೇಶದಲ್ಲಿರುವ ಡಾನ್ ವಿಕ್ಕಿ ಶೆಟ್ಟಿ ತಾನೇ ಕೊಲೆ ಮಾಡಿಸಿದ್ದೇನೆಂದು ಮಾಧ್ಯಮದವರಿಗೆ ಫೋನಾಯಿಸಿ ಹೇಳಿದ್ದಾನೆ. ಕರಾವಳಿಯ ಪಾತಕ ಲೋಕದ ಸಕಲ ...ರುಪತ್ಯ ತನ್ನಿಚ್ಛೆಯಂತೆಯೇ ನಡೆಯಬೇಕೆಂಬ ಹಠದಲ್ಲಿರುವ ವಿಕ್ಕಿ ಶೆಟ್ಟಿ ದಾವೂದ್ ಬಳಗದ ಹಿಂದೆ ಬಿದ್ದಿದ್ದಾನೆ. ...ದುರಾಳಿಗಳನ್ನು ಮುಗಿಸಲು ಆತ ಮಂಗಳೂರು-ಉಡುಪಿ ಜೈಲುಗಳ ಆಗು-ಹೋಗು ನಿಭಾಯಿಸುವ ತಂತ್ರಗಳನ್ನು ...ಡುತ್ತಿದ್ದಾನೆ.


ವಿಕ್ಕಿ ಶೆಟ್ಟಿ ತಾನೇ ಮಾಡೂರು ಇಸುಬು ಮತ್ತು ಗಣೇಶ್ ಶೆಟ್ಟಿ ತಲೆ ತೆಗೆಸಿದ್ದೆಂದು ಎಷ್ಟೇ ಹೇಳಿದರೂ ...ಲೀಸರಿಗೆ ರಶೀದ್ ಮಲಬಾರಿ ಎಂಬ ಪಾತಕಿ ಮೇಲೂ ಅನುಮಾನಗಳಿವೆ. ಈ ರಶೀದ್ ಮಲಬಾರಿ ಮತ್ತು ...ಡೂರು ಯೂಸೂಫ್ ಮಂಗಳೂರು ಜೈಲಲ್ಲಿ ಗ್ಯಾಂಗ್‌ವಾರ್ ಜೋರಾಗೇ ನಡೆಸಿದ್ದರು. ಈಗ ಹೊರಹೋಗಿರುವ ...ೀದ್‌ಗೆ ಇಸುಬುನ ತಲೆ ತಗೆವ ಜರೂರು ಏನಿತ್ತೆಂಬುದೇ ಪೊಲೀಸರಿಗೆ ಅರ್ಥವಾಗುತ್ತಿಲ್ಲ. ಕಮ್ಯುನಲ್ ಡಾನ್‌ಗಿರಿಗಾಗಿ ... ಶೆಟ್ಟಿ ಈ ಕುಕೃತ್ಯ ಮಾಡಿದನಾ ಎಂದರೆ ಇಲ್ಲವೆಂದು ಹೇಳುವ ಧೈರ್ಯವೂ ಯಾರಿಗೂ ಇಲ್ಲ.


ವಿಕ್ಕಿ ಶೆಟ್ಟಿಗೆ ಆಕಾಶ್ ಭವನ ಶರಣ್‌ನ ಸಂಪರ್ಕ ಇರುವುದು ಪೊಲೀಸರಿಗೂ ಗೊತ್ತಿದೆ. ಅದ್ಯಾಕೋ ಜೈಲು ...ದ ದಿನದಿಂದಲೇ ಈ ಶರಣ್ ಇಸುಬು ಜೊತೆ ಕಾಲು ಕೆರೆದು ಜಗಳ ಕಾಯುತ್ತಲೇ ಇದ್ದ. ಕಳೆದೊಂದು ...ದಿಂದ ಶರಣ್ ಮತ್ತು ಇಸುಬು ಪಡೆಯ ನಡುವೆ ಸಂಘರ್ಷ ಜೋರಾಗಿತ್ತು. ಮಂಗಳೂರಿನ ಕಾವೂರು ...ದೇಶದ ಶರಣ್ ರಿಕ್ಷಾ ಡ್ರೈವರ್ ಒಬ್ಬನ ಕೊಲೆ ಮಾಡಿ ಪ್ರವರ್ಧಮಾನಕ್ಕೆ ಬಂದಿದ್ದ. ಆನಂತರ ಆತ ಭೂಗತ ದೊರೆ ... ಶೆಟ್ಟಿಯ ಸಂಪರ್ಕ ಸಾಧಿಸಿಕೊಂಡಿದ್ದ. ಸುಳ್ಯದ ಕುರುಂಜಿ ವೆಂಕಟರಮಣ ಗೌಡರ ಕುಟುಂಬ ಕಲಹದಲ್ಲಿ ಈತ ...ಹಾಕಿದ್ದ. ಗೌಡರ ಹಿರಿಯ ಮಗನಿಂದ ಸುಪಾರಿ ಪಡೆದು ಮೆಡಿಕಲ್ ಕಾಲೇಜಿನ ಮ್ಯಾನೇಜರ್‌ನನ್ನು ಈತ ಕೊಲೆ ...ಡಿದ್ದ. ಕುರುಂಜಿ ಕುಟುಂಬದ ಆಸ್ತಿ ಪ್ರಕರಣದಲ್ಲಿ ಭಾಗವಹಿಸಿ ಸಿಕ್ಕಿಬಿದ್ದಿದ್ದ ಶರಣ್ ಜೈಲು ಪಾಲಾಗಿದ್ದ.

ಶರಣ್ ಅಕೌಂಟ್‌ನಲ್ಲಿ ಮೂರು ಕೊಲೆ, ಐದು ಕೊಲೆ ಪ್ರಯತ್ನ ಮತ್ತು ಸುಲಿಗೆಯಂಥ ಗಂಭೀರ ಪ್ರಕರಣಗಳಿವೆ. ...ಕ್ತೀತ ಶಿವಮೊಗ್ಗ ಜೈಲೂಟ ತಿನ್ನುತ್ತಿದ್ದಾನೆ. ಕೆಲವು ದಿನಗಳ ಹಿಂದಷ್ಟೇ ಮಂಗಳೂರು ಜೈಲಿಗೆ ಕೊಲೆ ಆರೋಪದಿಂದ ...ದಿದ್ದ ಐದಾರು ಹುಡುಗರ ಗ್ಯಾಂಗಿಗೆ ಲೀಡರ್ ಆಗಿದ್ದ ಶರಣ್ ಈ ಹುಡುಗರಿಂದಲೇ ಇಸುಬು ಹಾಗು ಗಣೇಶ್ ...ಯ ಮೇಲೆ ದಾಳಿ ಮಾಡಿಸಿದ್ದಾನೆ.

ಮಡೂರು ಯೂಸೂಫ್ ಯಾನೆ ಮಾಡೂರು ಇಸುಬು ತನ್ನ 26ನೇ ವಯಸ್ಸಿಗೇ ರೌಡಿ ಲೋಕಕ್ಕೆ ಎಂಟ್ರಿ ...ದಾತ. ಸಾಯುವ ಹೊತ್ತಿಗೆ ಆತನ ಮೇಲೆ ಬರೋಬ್ಬರಿ 27 ಕ್ರಿಮಿನಲ್ ಕೇಸುಗಳಿದ್ದವು. ಕೋಮು ಗಲಭೆ, ...ಲೆ, ಕೊಲೆ ಯತ್ನ, ಅಪಹರಣ, ಹಫ್ತಾ ವಸೂಲಿ ಪ್ರಕರಣಗಳಲ್ಲಿ ಈತ ಪ್ರವರ್ಧಮಾನಕ್ಕೆ ಬಂದಿದ್ದ. ಒಮ್ಮೆ ಜೈಲು ...ಪಾಗಿದ್ದ ಈತ ನಂತರ ಜಾಮೀನು ಪಡೆದು ಹೊರಬಂದಿದ್ದ. ಹೊರಬಂದವನೇ ಕೊಲೆ ಕೇಸಲ್ಲಿ ಸಿಕ್ಕಿಬಿದ್ದು ...ಬಾದ್‌ಗೆ ಪರಾರಿಯಾಗಿದ್ದ. ಅಲ್ಲಿಂದಲೇ ಕರಾವಳಿಯ ಭೂಗತ ಚಟುವಟಿಕೆ ನಿಭಾಯಿಸುತ್ತಿದ್ದ. ದುಬೈ ಪೊಲೀಸರು ...ನ ಬಂಧಿಸಿ 2010 ಡಿಸೆಂಬರ್ 8 ರಂದು ಮಂಗಳೂರು ಪೊಲೀಸರಿಗೆ ಹಸ್ತಾಂತರಿಸಿದ್ದರು. ಹಿಂದೂ ರೌಡಿಗಳಾದ ...ಳಲಿ ಅನಂತು, ಕ್ಯಾಂಡಲ್ ಸಂತು ಮತ್ತು ಮುಲ್ಕಿಯ ಸುಖಾನಂದ ಶೆಟ್ಟಿಗಳ ಹತ್ಯೆ ಸಂಚುಗಾರ ಈತನೆಂಬ ಸಿಟ್ಟು ...ಘ ಪರಿವಾರದ ರೌಡಿಗಳಿಗೆ ಇತ್ತು.

ಛೋಟಾ ಶಕೀಲ್ ಗ್ಯಾಂಗ್‌ಸ್ಟರ್ ಆಗಿದ್ದ ಇಸುಬಿಗೆ ಜೈಲಲ್ಲಿ ಪರಿಚಯವಾದವನು ಕರಾವಳಿಯವನಾದ ಶಾರ್ಪ್ ...ಟರ್ ಗಣೇಶ್ ಶೆಟ್ಟಿ. ಈ ಶೆಟ್ಟಿ ಬಾಸ್ ಛೋಟಾ ಶಕೀಲ್ ಆದೇಶದಂತೆ ರವಿ ಪೂಜಾರಿ ಪಡೆಯ ಕೆಲವರ ...ಗೆಂದು ಮುಂಬೈನಿಂದ ಮಂಗಳೂರಿಗೆ ಬಂದಿದ್ದ. ಮಹೇಂದ್ರ ಪ್ರತಾಪ್ ಎಂಬ ಉದ್ಯಮಿಯ ಹತ್ಯೆಗೆ ಸ್ಕೆಚ್ ಹಾಕಿ ...ಹಾಕಿಕೊಂಡ ಗಣೇಶ್ ಜೈಲು ಪಾಲಾಗಿದ್ದ. ಜೈಲಲ್ಲಿ ಇಸುಬುನ ಜೊತೆಗೇ ಹೆಚ್ಚು ಸಮಯ ಕಳೆಯುತ್ತಿದ್ದ. ...ಬಲ್ಲಿದ್ದರೂ ಒಳಗಿಂದಲೇ ಪಾತಕಲೋಕದ ಮೇಲೆ ಹಿಡಿತ ಸಾಧಿಸಿ ಅನೇಕ ಪ್ರಕರಣ ಮಾಡಿದ್ದಾನೆ. ಇಸುಬು-...ಣೇಶ್ ಜೋಡಿ ಜೈಲೊಳಗಿಂದಲೇ ಹಫ್ತಾ ಕಾರ್ಯಾಚರಣೆ ನಡೆಸುತ್ತಿದ್ದರು. ಇದು ವಿಕ್ಕಿ ಶೆಟ್ಟಿ ಶಿಷ್ಯ ಆಕಾಶ್ ಭವನ ...ಣ್‌ನ ಕಣ್ಣು ಕೆಂಪಾಗಿಸಿತ್ತು. ಜೊತೆಗೆ ವಿಕ್ಕಿ ಶೆಟ್ಟಿ ಛೋಟಾ ಶಕೀಲ್ ನಡುವಿನ ಡಾನ್‌ಗಿರಿ ಲೆಕ್ಕಾಚಾರವೂ ವೈರತ್ವಕ್ಕೆ ...ಣವಾಗಿತ್ತು. ಹೀಗಾಗಿ ಶರಣ್ ಮೂಲಕ ಇಸುಬು-ಗಣೇಶ್ ತಲೆ ತೆಗೆಸಿದ್ದಾನೆ ವಿಕ್ಕಿ ಶೆಟ್ಟಿ ಎಂಬ ತರ್ಕ ಪೊಲೀಸ್ ...ತ್ತು ಪಾತಕ ಲೋಕದ್ದು!





ಮಾರಕಾಸ್ತ್ರ ಎಲ್ಲಿಂದ ಬಂತು?

ಮಂಗಳೂರು ಜೈಲಲ್ಲಿ ಕೈದಿಗಳ ಕುಸ್ತಿ ...ಯುತ್ತಿರುವುದು ಇದೇ ಮೊದಲೇನಲ್ಲ, ಜೀವ ...ಹೋಗಿದ್ದು ಮಾತ್ರ ಮೊದಲು. 2013ರಲ್ಲಿ ಇಸುಬು ...ತ್ತು ಪಾತಕಿ ರಶೀದ್ ಮಲ್ಬಾರಿ ತಂಡದ ನಡುವೆ ...ಕರ ಕಾದಾಟ ನಡೆದಿತ್ತು. ಆಕಾಶಭವನ ಶರಣ್ ...ತ್ತು ಇಸುಬು ಗ್ಯಾಂಗ್‌ಗಳವಾರ್ ದಿನದಿನವೂ ...ಬಂತೆ ನಡೆಯುತ್ತಲೇ ಇತ್ತು. ಕೋಮು ಕಾರಣಕ್ಕೆ ...ಘರ್ಷ ನಡೆದದ್ದಕ್ಕೆ ಬಹುಶಃ ಜೈಲು ...ಧಿಕಾರಿಗಳಿಗೇ ಲೆಕ್ಕ ಇಡಲಾಗಿರಲಿಕ್ಕಿಲ್ಲ.


ಮಂಗಳೂರು ಜೈಲಲ್ಲಿ ಬೀಡಿ, ಸಿಗರೇಟು, ...ಟ್ಕಾ, ಮದ್ಯ, ಗಾಂಜಾ, ಮೊಬೈಲ್, ಮಾನಿನಿ ...ೇಸಾಗಿ ಸಿಗುತ್ತದೆಂಬ ಪುಕಾರು ಲಾಗಾಯ್ತಿನಿಂದಲೂ ...ದೆ. ಇದೆಲ್ಲ ನಿಲ್ಲಿಸುವ ತಾಕತ್ತು ಜೈಲು ...ಧಿಕಾರಿಗಳಿಗಿಲ್ಲ, ಕೈದಿಗಳೆಲ್ಲ ಒಂದಾಗಿ ಜೈಲು ...ಬ್ಬಂದಿಗಳ ಮೇಲೆರಗುವ ಭೀತಿ. ...ಕು-ಚೂರಿ-ತಲವಾರು-ಕತ್ತಿಯಂಥ ಮಾರಕ ...ಯುಧಗಳು ಇಲ್ಲಿ ಬೇಕೆಂದಾಗ ಕೈದಿಗಳಿಗೆ ಸಿಗುತ್ತವೆ. ...ಷೇಧಿತ ವಸ್ತು, ಅಸ್ತ್ರ ಮೊಬೈಲ್, ಹೆಂಡ, ಹೆಣ್ಣು ...ಲ್ಲಿಸ ರಾಜಮಾರ್ಗದಲ್ಲೇ ಒಳಗೆ ಬರುತ್ತವೆ. ಇದೆಲ್ಲ ...ನೂ ಕಾಣದಂತಿರುತ್ತಾರೆ ಜೈಲು ಅಧಿಕಾರಿಗಳು. ...ಗೆ ಸಿಕ್ಕಷ್ಟು ಕಿಸೆಗಿಳಿಸಿ ಕೈದಿಗಳಿಗೆ ಸಕಲ ...ಸಂತೋಷ ಅನುಭವಿಸಲು ಅವಕಾಶ ಕೊಡುತ್ತಾರೆ. ಲಂಚ ಕೊಡಲಾಗದ ಕೈದಿಗಳು ಅಡ್ಡ ದಾರಿ ಮೂಲಕ ತಮಗೆ ಬೇಕಾದ್ದು ತರಿಸಿಕೊಳ್ಳುತ್ತಿದ್ದಾರೆ. ಜೈಲಿನ ಪಕ್ಕವೇ ಶಿಕ್ಷಕ ತರಬೇತಿ ಕೇಂದ್ರವಿದೆ. ಇದರ ಆವರಣದಿಂದ ಮೋಜು-ಮಜಾ-ಮಸ್ತಿಯ ವಸ್ತು ಸಲಕರಣೆ, ಮಾರಾಕಾಯುಧಗಳನ್ನು ಜೈಲಿನ ಆವರಣದ ಒಳಗಡೆ ಎಸೆಯಲು ಅವಕಾಶವಿದೆ. ಇದನ್ನು ಕೈದಿಗಳ ಬಂಧುಗಳು, ಅಂಡರ್‌ವರ್ಲ್ಡ್ ಪುಂಡರು ಬಳಸಿಕೊಳ್ಳುತ್ತಿದ್ದಾರೆ. ಮೊನ್ನೆಯೂ ಹಾಗೇ ಆಗಿದೆ. ಆಕಾಶ್ ಶರಣ್‌ನ ಹಂತಕ ತಂಡದ ಕೈಗೆ ಸಿಗುವಂತೆ ತಲವಾರು-ಕೋಳಿ ಬಾಕುಗಳನ್ನು ಡಯಟ್ ಆವರಣದಿಂದಲೇ ಎಸೆಯಲಾಗಿದೆ ಎಂದು ಪೊಲೀಸರೇ ಹೇಳುತ್ತಿದ್ದಾರೆ. ಮಾರಕಾಯುಧ ಆ ಹಾದಿಯಿಂದೊಂದೇ ಬರಬೇಕೆಂದೇನೂ ಇಲ್ಲ, ಪ್ರಧಾನ ಬಾಗಿಲಿಂದಲೇ ನಿರಾತಂಕ-ನಿರ್ಭೀತಿಯಿಂದ ಅನಾಹುತಕಾರಿ ವಸ್ತುಗಳು ಬಂದರೂ ಅಚ್ಚರಿಪಡುವಂತಿಲ್ಲ, ಬಿಡಿ.

ಆಗಾಗ ರಕ್ತವಷ್ಟೇ ಚೆಲ್ಲಾಡುತ್ತಿದ್ದ ಮಂಗಳೂರು ಜೈಲಲ್ಲೀಗ ಎರಡೆರಡು ಹೆಣವೂ ಬಿದ್ದಿದೆ. ಇನ್ನಾದರೂ ಗೃಹ ಇಲಾಖೆಯ ಪ್ರಭೃತಿಗಳು ಎಚ್ಚೆತ್ತುಕೊಂಡಾರಾ? ಜೈಲಿನೊಳಗಿನ ಪಾತಕ, ಕೋಮು ಕ್ರೌಯಕ್ಕೆ ಕಡಿವಾಣ ಹಾಕುವ ತಾಕತ್ತು ಹೊಸ ಗೃಹಮಂತ್ರಿ ಪರಮ್‌ಗೆ ಇದೆಯಾ?

■ ವರದಿಗಾರ

ಚೆಡ್ಡಿ ಚೆನ್ನಬಸಪ್ಪ ಅರೆಸ್ಟ್!

"ಶಿವಮೊಗ್ಗದ ಗೋಪಿ ಸರ್ಕಲ್‌ಗೆ ಬಂದು ಗೋಮಾಂಸ ತಿನ್ನಲಿ, ಆಗ ಮುಖ್ಯಮಂತ್ರಿ ಸಿದ್ದರಾಮಯ್ಯನ ರುಂಡ ಚೆಂಡಾಡುತ್ತೇನೆ" ಎಂದು ಠೇಂಕಾರ ಮಾಡಿದ್ದ ಚೆನ್ನಬಸಪ್ಪ ಎಂಬ ಬಿಜೆಪಿ ಲೀಡರನ್ನು ಕಾಂಗ್ರೆಸ್ ನಾಯಕರ ದೂರಿನನ್ವಯ ದೊಡ್ಡಪೇಟೆ ಪೊಲೀಸರು ಹಿಡಿದು ತಂದು ಠಾಣೆಯಲ್ಲಿ ಕೂರಿಸಿದಾಗ ನಿಜಕ್ಕೂ ಆತ ಹೆದರಿಹೋಗಿದ್ದ. ಏಕೆಂದರೆ ಈ ಬಿಜೆಪಿಗಳು ಒಂಟಿಯಾಗಿದ್ದಾಗ ತುಂಬ ಹೆದರುತ್ತವೆ. ಅದೇ ಸಮೂಹದಲ್ಲಿದ್ದಾಗ ಸಮೂಹಸನ್ನಿಗೆ ತುತ್ತಾಗಿ ಹುಂಬ ಧೈರ್ಯದಿಂದ ಏನೇನೋ ಮಾತನಾಡಿಬಿಡುತ್ತವೆ.



ಇಂತಹದ್ದೊಂದು ಪಜೀತಿಗೆ ಸಿಕ್ಕಿದ ಚೆನ್ನಬಸಪ್ಪ ಒಂದು ರೀತಿ ಕಂಗಾಲಾಗಿದ್ದ. ಅವನನ್ನು ನೋಡಿದರೆ ಒಂದು ಕಡೆಯಿಂದ ಯಡಿಯೂರಪ್ಪನಂತೆಯೂ ಮತ್ತೊಂದು ಕಡೆಯಿಂದ ಈಶ್ವರಪ್ಪನಂತೆಯೂ ಕಾಣುತ್ತಾನೆ. ಕಣ್ಮುಚ್ಚಿಕೊಂಡು ಆತನ ಭಾಷಣ ಕೇಳುತ್ತಿದ್ದರೆ ಯಡಿಯೂರಪ್ಪನ ದನಿಯಂತೆ ಕೇಳುತ್ತದೆ. ಆದರೆ ಮಾತು ಮಾತ್ರ ಈಶ್ವರಪ್ಪನ ಮಾತಿನಂತಿರುತ್ತವೆ. ಇದರ ಫಲವೇ ಆತ ನಿರೀಕ್ಷಿಸದೇ ಇದ್ದ ಪೊಲೀಸ್ ಕೇಸು.

ಆದರೇನು ಬಿಜೆಪಿಗಳು ಇಂತಹ ಪ್ರಕರಣದೊಳಕ್ಕೆ ಸಿಕ್ಕಿದವನನ್ನು ಹೀರೋ ಮಾಡಿಬಿಡುತ್ತವೆ. ಈಗಾಗಲೇ ಈತನ ಅಗ್ರಜನಂತಿರುವ ಈಶ್ವರಪ್ಪ ಸಿದ್ದರಾಮಯ್ಯ ಆಡಿರುವ ಮಾತಿಗೆ ಕ್ಷಮೆ ಕೇಳಲು ಗಡುವು ಕೊಟ್ಟಿದ್ದಾನೆಯೇ ಹೊರತು ಚೆನ್ನಬಸಪ್ಪನ ಮಾತಿಗೆ ಏನನ್ನೂ ಹೇಳಿಲ್ಲ. ಅದು ತನ್ನದೇ ಮಾತು ಎಂಬಂತೆ ಠೇಂಕರಿಸುತ್ತಲೇ ಇದ್ದಾನೆ.

ವಾಸ್ತವವಾಗಿ ಇದುವರೆಗೆ ಮುಖ್ಯಮಂತ್ರಿಯ ಮೇಲೆ ಮುಗಿಬೀಳಲು ಬಿಜೆಪಿಗೆ ಯಾವ ಅಸ್ತ್ರಗಳೂ ಇರಲಿಲ್ಲ. ದನದ ಮಾಂಸದ ತುಣುಕೊಂದು ಅವರನ್ನು ಹುಚ್ಚೆಬ್ಬಿಸಿದೆ. ಈ ಹುಚ್ಚು ಮಾತಿನ ಯಾರ ಮನೆಗಳಲ್ಲೂ ದನಗಳಿಲ್ಲದಿರುವುದೊಂದು ವಿಶೇಷ. ಕರ್ನಾಟಕದಲ್ಲಿ ದನಗಳನ್ನು ಕಟ್ಟಿರುವ ಲಕ್ಷಾಂತರ ಜನಗಳ್ಯಾರೂ ಈ ಬಿಜೆಪಿಗಳಂತೆ ಮಾತನಾಡುತ್ತಿಲ್ಲ.

ಇನ್ನು ಜಗದೀಶ್ ಶೆಟ್ಟರ್ ಎಂಬ ನಾಯಕ "ಹಾಗಾದರೆ ಸಿದ್ದರಾಮಯ್ಯ ಹಂದಿ ತಿನ್ನುತ್ತೇನೆ ಎಂದು ಹೇಳುತ್ತಾರಾ" ಎಂಬುದನ್ನು ಭೀಕರ ಸವಾಲೆಂಬಂತೆ ಹೇಳಿದ್ದಾರೆ. ಇವರಿಗೆ ಸ್ಫೂರ್ತಿ ಅವರ ಜಗದ್ಗುರುಗಳಾದ ಪೇಜಾವರ ಶ್ರೀಗಳು. ಶ್ರೀಗಳು ತಮ್ಮ ನಿತ್ರಾಣದ ದನಿಯಲ್ಲೂ "ಮಸೀದಿ ಎದುರಿಗೆ ಹಂದಿ ಮಾಂಸ ಭಕ್ಷಣೆ ಮಾಡುತ್ತಾರಾ" ಎಂದು ಕೇಳಿದ್ದಾರೆ. ಇವರ ಮುಂದುವರಿಕೆಯೇ ಶೆಟ್ಟರ್ ಉವಾಚ.

ಶ್ರೀಗಳಲ್ಲಿ ಹಂದಿ ಮಾಂಸದ ಬಗ್ಗೆ ಇರುವ ಇಂತಹ ತುಚ್ಛ ಭಾವನೆಯನ್ನರಿತ ಚಿಕ್ಕಮಗಳೂರು ಬಿಜೆಪಿಯ ಮುಖಂಡನೊಬ್ಬ ಬಾಡಿಗೆ ಜನರನ್ನು ಕರೆಸಿ ಮಸೀದಿ ಮುಂದೆ ಹಂದಿ ಮಾಂಸ ಹಾಕಿಸಿದ್ದ. ವಾಸ್ತವವಾಗಿ ಹಂದಿ ಮಾಂಸ ಪೇಜಾವರ ಶ್ರೀಗಳಿಗೆ ಪವಿತ್ರವಾಗಿ ಕಾಣಬೇಕು! ಶ್ರೀಕೃಷ್ಣನ ಅವತಾರಗಳಲ್ಲಿ ವರಾಹ ಅವತಾರವೂ ಒಂದು. ಹತ್ತು ಅವತಾರದ ಫೋಟೊಗೆ ಊದುಬತ್ತಿ ಬೆಳಗಿ ಕೈಮುಗಿಯುವಾಗ ಈ ಹಂದಿಯ ಅವತಾರದ ಚಿತ್ರವೂ ಎದ್ದು ಕಾಣುತ್ತದೆ. ಹೀಗೆ ನಾವು ಸೇವಿಸುವ ವರಾಹದ ಖಾದ್ಯ ದೇವರ ಪ್ರಸಾದ.

ಕರ್ನಾಟಕದ ಹಾಸನ, ಸಕಲೇಶಪುರ, ಕೊಡಗು, ಮಂಡ್ಯದ ಕಡೆಯ ಕುಬೇರರೂ ಹಂದಿ ಮಾಂಸ ಸೇವಿಸುತ್ತಾರೆ. ಅಂತಹ ಯಾವುದಾದರೂ ಕುಬೇರರ ಮನೆಗೆ ಹೋಗಿದ್ದರೆ ಈ ಪೇಜಾವರ ಹೋಗಿದ್ದ ಮನೆಯ ಫ್ರಿಡ್ಜಿನಲ್ಲಿ ವರಾಹ ಖಾದ್ಯ ಶೈತ್ಯೀಕರಣಗೊಂಡಿರುವುದು ಇವರ ಅರಿವಿಗೆ ಬರಲು ಸಾಧ್ಯವಿಲ್ಲ. ಅಷ್ಟಕ್ಕೂ ಈ ಪೇಜಾವರರು ಎಸ್ಸೆಂ ಕೃಷ್ಣನಂತವರ ಮನೆಗೆ ಹೋಗುತ್ತಾರೆಯೇ ಹೊರತು ಸಾಮಾನ್ಯರ ಮನೆಗೆ ಹೋಗಲಾರರು.

ಶಿವಮೊಗ್ಗದ ಬಿಜೆಪಿಗಳಿಗೆ ತಕ್ಕ ಉತ್ತರ ಕೊಡಲು ತಡವಾಗಿಯಾದರೂ ಕಾಂಗ್ರೆಸ್‌ನವು ಎಚ್ಚೆತ್ತುಕೊಂಡಿವೆ. ಮುಖ್ಯಮಂತ್ರಿಯ ರುಂಡ ಚೆಂಡಾಡುವ ಭಾಷಣ ಬಿಗಿದು ಪರಾಕ್ರಮ ತೋರುತ್ತಿದ್ದ ಚೆನ್ನಬಸಪ್ಪನ ಮೇಲೆ ಇಲ್ಲಿನ ಕಾಂಗ್ರೆಸ್‌ನ ಯುವಪಡೆ ಮತ್ತು ಜಿಲ್ಲಾ ನಾಯಕರು ದೂರು ಕೊಡಲಾಗಿ ಚೆನ್ನಬಸಪ್ಪ ಅರೆಸ್ಟಾಗಿದ್ದಾನೆ.

ಈತನಿಗೆ ಹಿಂದೊಮ್ಮೆ ದಕ್ಷ ಪೊಲೀಸ್ ಅಧಿಕಾರಿಯಾಗಿದ್ದ ಹಾದಿಮನಿ ಕೆನ್ನೆಗೆ ಬಾರಿಸಿ ಶಾಕ್ ನೀಡಿದ್ದರು. ಹುತ್ತಪ್ಪ ಮತ್ತು ಯೋಗಪ್ಪ ಎಂಬ ಹುಲಿಗಳ ಕಾಲದಲ್ಲಿ ಬಿಜೆಪಿಗಳು ಬಹಳ ಹೆದರುತ್ತಿದ್ದವು. ಕೆಂಪಯ್ಯನ ಕಾಲದಲ್ಲೂ ಇವರು ಬಾಲ ಬಿಚ್ಚಲು ಹೆದರುತ್ತಿದ್ದರು. ಅದರಲ್ಲೂ ಹುತ್ತಪ್ಪ ಈಶ್ವರಪ್ಪನ ಮನೆ ಬಾಗಿಲಿಗೆ ಹೋಗಿ ಅರೆಸ್ಟ್ ಮಾಡಲು ನಿಂತಿದ್ದರು.

ಆ ಕಾಲದಲ್ಲಿ ಪೊಲೀಸರಿಗೆ ಹೆದರಿ ಕಾಲ ಹಾಕುತ್ತಿದ್ದ ಬಿಜೆಪಿ ಲೀಡರುಗಳು ಈಶ್ವರಪ್ಪನ ಕಾಲದಲ್ಲಿ ತುಂಬ ಹಚ್ಚಿಕೊಂಡಿದ್ದರು. ಆ ಉಮೇದಿನಲ್ಲಿಯೇ ಈಗ ಚೆನ್ನಬಸಪ್ಪ ಠೇಂಕಾರ ಮಾಡಿ ಅರೆಸ್ಟಾಗಿದ್ದಾನೆ. ಸಾಮಾನ್ಯವಾಗಿ ಈ ಬಿಜೆಪಿಗಳು ಹೆದರುವುದು ತಮಗಿಂತಲೂ ಶಕ್ತಿವಂತರಿಗೆ ಮಾತ್ರ. ಇನ್ಯಾವ ವಾದಗಳಿಗೂ ಅವು ಸೋಲುವುದಿಲ್ಲ. ಆದ್ದರಿಂದ ಕಾಂಗ್ರೆಸ್ಸಿಗರು ಶೂದ್ರಶಕ್ತಿಯನ್ನು ಒಗ್ಗೂಡಿಸಿ ಬೆದರಿಕೆ ಹಾಕದಿದ್ದರೆ ನಮ್ಮ ಆಹಾರವನ್ನೇ ನಾವು ಅಂಜಿಕೊಂಡು ತಿನ್ನಬೇಕಾಗುತ್ತದೆ.

ಅಷ್ಟಕ್ಕೂ ಮುಖ್ಯಮಂತ್ರಿ ಹೇಳಿರುವ ಮಾತು ಅನಿವಾರ್ಯವಾದವೇ ಹೊರತು ತಿನ್ನುತ್ತಿದ್ದೇನೆ ಎಂದಲ್ಲ ಎಂಬುದು ಜಗದ್ಗುರುಗಳಿಗೂ ಗೊತ್ತಾಗದಿದ್ದದ್ದು ಒಂದು ವಿಪರ್ಯಾಸ!

■ ವರದಿಗಾರ

ಲಂಕೇಶ್ ಪ್ರಕಾಶನದ ಪುಸ್ತಕಗಳು

ಕರ್ನಾಟಕದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದೆ.
ಹೆಚ್ಚಿನ ಮಾಹಿತಿಗಾಗಿ ಫೋನ್: 080-26676427

ಪಿ.ಲಂಕೇಶರ ಕೃತಿಗಳು

ಕತೆ-ಕಾದಂಬರಿ	
ಮುಸ್ಸಂಜೆಯ ಕಥಾ ಪ್ರಸಂಗ	250.00
ಬಿರುಕು	60.00
ಅಕ್ಕ	80.00
ಮಂಜು ಕವಿದ ಸಂಜೆ	85.00
ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00
ಕಲ್ಲು ಕರಗುವ ಸಮಯ	125.00
ನಾನಲ್ಲ	60.00
ಕೆರೆಯ ನೀರನು ಕೆರೆಗೆ ಚೆಲ್ಲಿ	50.00
ಉಲ್ಲಂಘನೆ	80.00


ಲೇಖನಗಳ ಸಂಗ್ರಹಗಳು	
ಟೀಕೆ-ಟಿಪ್ಪಣಿ 1	200.00
ಟೀಕೆ-ಟಿಪ್ಪಣಿ 2	200.00
ಟೀಕೆ-ಟಿಪ್ಪಣಿ 3	200.00
ಮರೆಯುವ ಮುನ್ನ-ಸಂಗ್ರಹ 1	150.00
ಮರೆಯುವ ಮುನ್ನ-ಸಂಗ್ರಹ 2	150.00
ಮರೆಯುವ ಮುನ್ನ-ಸಂಗ್ರಹ 3	150.00
ಮನಕೆ ಕಾರಂಜಿಯ ಸ್ಪರ್ಶ	150.00
ಈ ನರಕ ಈ ಪುಲಕ	125.00
ಆಟ-ಜೂಜು-ಮೋಜು!	150.00
ಸಾಹಿತಿ ಸಾಹಿತ್ಯ ವಿಮರ್ಶೆ	300.00
ರೂಪಕ ಲೇಖಕರು	70.00
ಕಂಡದ್ದು ಕಂಡಹಾಗೆ	100.00
ಪ್ರಸ್ತುತ	80.00
ಪಾಂಚಾಲಿ	150.00

ಲಂಕೇಶ್‌ರ ಕವನ ಸಂಗ್ರಹಗಳು	
ನೀಲು ಕಾವ್ಯ -ಸಂಗ್ರಹ 1	150.00
ನೀಲು ಕಾವ್ಯ -ಸಂಗ್ರಹ 2	150.00
ನೀಲು ಕಾವ್ಯ -ಸಂಗ್ರಹ 3	200.00
ಚಿತ್ರ ಸಮೂಹ	90.00
ಅಕ್ಷರ ಹೊಸ ಕಾವ್ಯ	250.00
ಪಾಪದ ಹೂಗಳು	60.00

ಆತ್ಮಕಥನ	
ಹುಳಿಮಾವಿನ ಮರ	250.00

ಲಂಕೇಶ್‌ರ ನಾಟಕಗಳು	
ಬಿರುಕು	40.00
ಸಂಕ್ರಾಂತಿ	45.00
ತೆರೆಗಳು	50.00
ಈಡಿಪಸ್ ಮತ್ತು ಅಂತಿಗೊನೆ	60.00
ಟಿ. ಪ್ರಸನ್ನನ ಗೃಹಸ್ಥಾಶ್ರಮ	50.00
ಗುಣಮುಖ	30.00
ಕ್ರಾಂತಿ ಬಂತು ಕ್ರಾಂತಿ	40.00

ಪರಿಷತ್ತಿಗೆ ಸುಜಾ ಕುಶಾಲಪ್ಪ?



ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆ ಬಹುತೇಕ ಡಿಸೆಂಬರ್ ತಿಂಗಳಿನಲ್ಲಿ ನಡೆಯುವ ಸಾಧ್ಯತೆ ಇದೆ. ಹಾಲಿ ಸದಸ್ಯರ ಅವಧಿ ಜನವರಿ 5ರಂದು ಮುಕ್ತಾಯಗೊಳ್ಳಲಿದೆ. ಅದಕ್ಕೂ ಮುನ್ನವೇ ಚುನಾವಣೆ ನಡೆಯುತ್ತದೋ ಅಥವ ವಿಳಂಬವಾಗುತ್ತದೋ ಎಂಬುದನ್ನು ಹೇಳಲು ಸಾಧ್ಯವಿಲ್ಲ, ಇದರ ಜೊತೆಯಲ್ಲಿಯೇ ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿಗಳ ಚುನಾವಣೆಯೂ ನಡೆಯುತ್ತಿದ್ದು, ಯಾವ ಚುನಾವಣೆ ಮೊದಲು ಎಂಬುದು ತಿಳಿದಿಲ್ಲ.

ಆದರೂ ವಿಧಾನ ಪರಿಷತ್ ಚುನಾವಣೆಗೆ ತಾಲೀಮು ನಡೆಯುತ್ತಿದೆ. ಬಜೆಪಿ ಪಕ್ಷ ತನ್ನ ಅಭ್ಯರ್ಥಿಗಳನ್ನು ಅನಧಿಕೃತವಾಗಿ ಘೋಷಿಸಿಕೊಂಡಿದೆ. ಆದರೆ ಕಾಂಗ್ರೆಸ್ ಪಕ್ಷ ಎಂದಿನಂತೆ ನಿದ್ರಾವಸ್ಥೆಯಲ್ಲಿಯೇ ಇದೆ.

ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಬಿಜೆಪಿ ಪಕ್ಷದ ಅಭ್ಯರ್ಥಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಮಂಡೇಪಂಡ ಸುಜಾ ಕುಶಾಲಪ್ಪ ಎಂಬುದಾಗಿ ಈಗಾಗಲೇ ಅನಧಿಕೃತವಾಗಿ ಪ್ರಕಟಿಸಿದೆ. ಈಗಾಗಲೇ ಕುಶಾಲಪ್ಪ ತಮ್ಮ ಪ್ರಚಾರ ಕಾರ್ಯವನ್ನು ಆರಂಭಿಸಿದ್ದಾರೆ. ಸುಮಾರು 1300ರಷ್ಟು ಮತದಾರರು ಇರುವ ಕೊಡಗು ಕ್ಷೇತ್ರದಲ್ಲಿ, ಜಾತ್ಯತೀತ ಜನತಾದಳ ಸ್ಪರ್ಧಿಸುವ ಮತಗಳನ್ನು ಹೊಂದಿಲ್ಲ, ಆದ್ದರಿಂದ ಇಲ್ಲಿ ಚುನಾವಣೆ ಏನಿದ್ದರೂ ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆಯೇ ನಡೆಯಬೇಕಾಗಿದೆ. ಬಿಜೆಪಿ ಪಕ್ಷಕ್ಕೆ ಸುಮಾರು 610 ಮತಗಳು ಇದ್ದರೆ, ಕಾಂಗ್ರೆಸ್ ಪಕ್ಷಕ್ಕೆ 590 ಮತಗಳು ಇವೆ ಎಂಬ ಅಂದಾಜು ಇದೆ. ಸುಮಾರು 95 ಮತದಾರರು ಸ್ವತಂತ್ರರಾಗಿ ಇರುವವರಾಗಿದ್ದರೆ, 100ರಷ್ಟು ಮಂದಿ ಜಾತ್ಯತೀತ ಜನತಾದಳದೊಂದಿಗೆ ಗುರುತಿಸಿಕೊಂಡಿದ್ದಾರೆ.

ವಿಧಾನ ಪರಿಷತ್ತಿನ ಚುನಾವಣೆ ಪಕ್ಷದ ಆಧಾರದಲ್ಲಿ ನಡೆದರೂ ಇಲ್ಲಿ ಹಣಕ್ಕೆ ಪ್ರಾಮುಖ್ಯತೆ ಎಂಬುದು ಗೌಪ್ಯವಾಗಿ ಉಳಿದಿಲ್ಲ. ಕಳೆದ ನಾಲ್ಕು ಚುನಾವಣೆಯಲ್ಲಿ ಹಣವೇ ಪ್ರಧಾನವಾಗಿತ್ತು. ಚುನಾವಣೆಯಿಂದ ಚುನಾವಣೆಗೆ ಹಣದ ಪ್ರಮಾಣ ಬಡ್ತಿ ಪಡೆಯುತ್ತಿತ್ತು, ಪಕ್ಷದ ಆಧಾರದಲ್ಲಿ ಬಿಜೆಪಿಗೆ ಹೆಚ್ಚಿನ ಮತಗಳು ಇದ್ದರೂ ಜಾತ್ಯತೀತ ಜನತಾದಳದ ಮತಗಳು ಮತ್ತು ಸ್ವತಂತ್ರ ಮತಗಳು ಈ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಲಿದೆ. ಈ ಮತಗಳನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಿದಾಗ ಕಾಂಗ್ರೆಸಿನಿಂದ ಸಮರ್ಥ ಅಭ್ಯರ್ಥಿ ಸ್ಪರ್ಧಿಸಿದರೆ ಬಿಜೆಪಿಗೆ ಗೆಲುವು ಸುಲಭವಲ್ಲ ಎಂದು ಅರ್ಥವಾಗುತ್ತದೆ.

ಇಲ್ಲಿಯವರೆಗೆ ನಡೆದ ನಾಲ್ಕು ಚುನಾವಣೆಯಲ್ಲಿ ಎರಡು ಬಾರಿ ಕಾಂಗ್ರೆಸ್ ಗೆದ್ದಿದ್ದರೆ, ಒಮ್ಮೆ ಕಾಂಗ್ರೆಸಿನ ಬಂಡಾಯ ಅಭ್ಯರ್ಥಿ ಹಾಗೂ ಒಮ್ಮೆ ಬಿಜೆಪಿ ಇಲ್ಲಿ ಗೆದ್ದಿದೆ.

ಬಿಜೆಪಿಯ ಸುಜಾ ಕುಶಾಲಪ್ಪ ಹಾಲಿ ಶಾಸಕ ಅಪ್ಪಚ್ಚು ರಂಜನ್‌ರವರ ಸಹೋದರ. ಆರ್ಥಿಕವಾಗಿ ಪ್ರಬಲರಾಗಿದ್ದರೂ ಜನಸಾಮಾನ್ಯರೊಂದಿಗೆ ಉತ್ತಮವಾದ ಬಾಂಧವ್ಯಗಳನ್ನು ಇಟ್ಟುಕೊಂಡಿರದ ವ್ಯಕ್ತಿ, ತನ್ನ ವ್ಯವಹಾರ ಮತ್ತು ದಂಧೆಗಳ ಮೂಲಕ ತನ್ನ ಸಾಮ್ರಾಜ್ಯವನ್ನು ಬಲಪಡಿಸುವುದರಲ್ಲಿಯೇ ಮಗ್ನರಾಗಿದ್ದು, ಅಗತ್ಯ ಬಿದ್ದಾಗ ಪಕ್ಷ, ಅಗತ್ಯವಿಲ್ಲದಿದ್ದರೆ ತನ್ನ ಪಟಿಂವಾಟು ಎಂಬಂತೆ ಇರುವ ವ್ಯಕ್ತಿ, ಕಳೆದ ಗ್ರಾಮ ಪಂಚಾಯತಿ ಚುನಾವಣೆಯ ಸಂದರ್ಭದಲ್ಲಿ ನ್ಯಾಯಾಲಯವೊಂದು ಪತ್ರಕರ್ತರಿಗೆ ಬೆದರಿಕೆ ಹಾಕಿದ ಪ್ರಕರಣದಲ್ಲಿ ಎರಡು ವರ್ಷ ಜೈಲುಶಿಕ್ಷೆಯನ್ನು ಸುಜಾ ಕುಶಾಲಪ್ಪನವರಿಗೆ ವಿಧಿಸಿದ್ದ ಕಾರಣ ಅವರಿಗೆ ಸ್ಪರ್ಧಿಸಲು ಅವಕಾಶವಿರುವುದಿಲ್ಲ ಎಂಬ ಮಾತು ಕೇಳಿಬಂದಿತ್ತು, ಇದರ ಜೊತೆಯಲ್ಲಿ ಅವರು ಅಕ್ರಮ-ಸಕ್ರಮ ಸಮಿತಿಯ ಅಧ್ಯಕ್ಷರಾಗಿದ್ದ ವೇಳೆಯಲ್ಲಿ ಬಹಳಷ್ಟು ಜಮೀನುಗಳನ್ನು ನೇರವಾಗಿ ತಮ್ಮ ಕುಟುಂಬ ವರ್ಗದವರಿಗೆ ಮಂಜೂರು ಮಾಡಿದ್ದರು. ಈ ಹಗರಣದಲ್ಲಿ ಸಾಕಷ್ಟು ದಾಖಲಾತಿಗಳು ತಿದ್ದಲ್ಪಟ್ಟಿದ್ದವು. ಇದನ್ನು ಎ.ಕೆ. ಸುಬ್ಬಯ್ಯನವರು ಸ್ವತಃ ತನ್ನ ಹೆಸರಿನಲ್ಲಿಯೇ ಲೋಕಾಯುಕ್ತಕ್ಕೆ ಪುಕಾರು ನೀಡಿದ್ದರಿಂದ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು. ಇದರ ಕುರಿತು ತನಿಖೆಯೂ ನಡೆದಿತ್ತು. ತನಿಖೆಯಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿರುವುದನ್ನು ಲೋಕಾಯುಕ್ತ ಪೊಲೀಸರು ಪತ್ತೆಹಚ್ಚಿದ್ದರು. ಚಾರ್ಜ್ ಶೀಟ್ ಸಲ್ಲಿಸಲಾಗುವುದು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದರು. ಆದರೆ ತನಿಖೆಗಳು ಪೂರ್ಣಗೊಂಡು ಒಂದೆರಡು ವರ್ಷಗಳು ಉರುಳಿದ್ದರೂ ಚಾರ್ಜ್ ಶೀಟ್ ಸಲ್ಲಿಕೆಯಾಗಿಲ್ಲ. ಕಡತಗಳು ಮಾಯವಾಗುತ್ತಿವೆ, ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಅನುಮತಿ ದೊರೆಯುತ್ತಿಲ್ಲ, ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ಲೋಕಾಯುಕ್ತ ಪೊಲೀಸರು ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ.

ಪಕ್ಷದಲ್ಲಿ ಕೂಡ ಈ ವ್ಯಕ್ತಿಯ ಬಗ್ಗೆ ಹೆಚ್ಚಿನ ಒಲವು ಏನೂ ಇಲ್ಲ, ತನ್ನ ಸ್ವಾರ್ಥಕ್ಕೆ ಎಲ್ಲರನ್ನೂ ಬಳಸಿಕೊಳ್ಳುತ್ತಾರೆ; ಆ ನಂತರ ಕ್ಯಾರೇ ಅನ್ನುವುದಿಲ್ಲ ಎಂಬ ಆರೋಪಗಳು ಅವರ ಮೇಲೆ ಇದೆ. ಕಳೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ತನಗೆ ಟಿಕೆಟು ಸಂಶಯ ಎಂಬ ಮಾಹಿತಿ ಬಂದಾಗ, ಚುನಾವಣೆಯಲ್ಲಿ ಸಕ್ರಿಯವಾಗಿ ಇರಲಿಲ್ಲ, ಅಭ್ಯರ್ಥಿಗಳಿಗೆ ಆರ್ಥಿಕವಾಗಿ ಜಿಲ್ಲಾ ಅಧ್ಯಕ್ಷರಾಗಿ ಸಹಕಾರ ನೀಡಲಿಲ್ಲ ಎಂಬುದು ಸಾಕಷ್ಟು ಮಂದಿಯ ಆರೋಪವಾಗಿತ್ತು, ಇಷ್ಟೆಲ್ಲದರ ನಡುವೆ ಸಂಸದ ಪ್ರತಾಪ ಸಿಂಹರ ಜೊತೆಯಲ್ಲಿ ಗುರುತಿಸಿಕೊಂಡು, ಟಿಕೆಟಗಾಗಿ ಪ್ರಯತ್ನಗಳನ್ನು ನಡೆಸುತ್ತಾ ಬಂದಿದ್ದರು. ಪ್ರತಾಪ ಸಿಂಹ ತನ್ನ ಕ್ಷೇತ್ರದಲ್ಲಿ ಯಾವುದೇ ಶಾಸಕರುಗಳ ಜೊತೆಯಲ್ಲಿ ಉತ್ತಮ ಬಾಂಧವ್ಯವನ್ನು ಇಟ್ಟುಕೊಂಡಿಲ್ಲ, ಕೊಡಗಿನಲ್ಲಂತೂ ಶಾಸಕ ಕೆ.ಜಿ. ಬೋಪಯ್ಯನವರೊಂದಿಗೆ ಸಂಘರ್ಷದ ಹಾದಿಯಲ್ಲಿ ಇರುವಂತಹ ವ್ಯಕ್ತಿ, ಈ ಸಂಘರ್ಷ ಯಾವ ಮಟ್ಟದಲ್ಲಿ ಇದೆ ಎಂದರೆ, ಮುಂದಿನ ಚುನಾವಣೆಯ ವೇಳೆಯಲ್ಲಿ ಬೋಪಯ್ಯನವರಿಗೆ ಟಿಕೆಟು ಸಿಗದಂತೆ ಮಾಡುವ ಮಟ್ಟದಲ್ಲಿ ಇದೆ. ಆದರೆ ಅಪ್ಪಚ್ಚು ರಂಜನ್ ಹಾಗೂ ಅವರ ಸಹೋದರರು ಮಾತ್ರ ಪ್ರತಾಪ ಸಿಂಹನೊಂದಿಗೆ ಒಳ್ಳೆಯ ಬಾಂಧವ್ಯವನ್ನು ತಮ್ಮ ಸ್ವಾರ್ಥಕ್ಕಾಗಿ ಇಟ್ಟುಕೊಂಡಿದ್ದಾರೆ. ಹಾಗಾಗಿಯೇ ಎಲ್ಲಾ ಆಕ್ಷೇಪಗಳು ಮತ್ತು ಆರೋಪಗಳ ನಡುವೆ ಸುಜಾ ಕುಶಾಲಪ್ಪನವರೇ ಬಿಜೆಪಿಯ ಅಭ್ಯರ್ಥಿ ಎಂದು ಅನಧಿಕೃತವಾಗಿ ಘೋಷಿಸಲ್ಪಟ್ಟಿದೆ.

ವಿಧಾನ ಪರಿಷತ್ತಿಗೆ ಬಿಜೆಪಿಯಿಂದ ಯಾರು ಎಂಬ ಪ್ರಶ್ನೆ ಬಂದಾಗ ಸುಜಾ ಕುಶಾಲಪ್ಪ ಅಥವ ಅವರ ಮತ್ತೋರ್ವ ಸಹೋದರ ಸುನಿಲ್ ಸುಬ್ರಹ್ಮಣಿಯವರ ಹೆಸರು ಕೇಳಿಬರುತ್ತಿತ್ತು, ಇದು ಬಿಜೆಪಿ ಕಾರ್ಯಕರ್ತರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಈ ಮೂವರು ಸಹೋದರರು ಕೊಡಗು ಜಿಲ್ಲೆಯ ಮೂರೂ ತಾಲೂಕುಗಳಲ್ಲಿ ತಮ್ಮ ಪ್ರಾಬಲ್ಯವನ್ನು ಇಟ್ಟುಕೊಂಡು, ಪಕ್ಷವೇ ಅವರ ಅಡಿಯಾಳು ಎಂಬಂತೆ ವರ್ತಿಸುತ್ತಾರೆ ಎಂಬ ಕೂಗು ಕಾರ್ಯಕರ್ತರಲ್ಲಿ ಇದೆ. ಹಾಗಾಗಿ ಕೊಡಗಿನಲ್ಲಿ ಇವರ ಕಾರ್ಯವೈಖರಿಯ ಬಗ್ಗೆ ಅತೃಪ್ತರು ಇದು ಬಿಜೆಪಿ ಅಲ್ಲ, ಎಂ.ಜೆ.ಪಿ. ಅಂದರೆ ಮಂಡೇಪಂಡ ಜನತಾ ಪಕ್ಷ ಎಂದು ಲೇವಡಿ ಮಾಡುತ್ತಾರೆ.

ಅರುಣ್ ಮಾಚಯ್ಯ ವಿಧಾನ ಪರಿಷತ್ ಸದಸ್ಯರಾಗಿದ್ದು, ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿದ ವೇಳೆಯಲ್ಲಿ ಒಂದು ವರ್ಷದ ಅವಧಿಗೆ ನಡೆದ ಚುನಾವಣೆಯ ಸಂದರ್ಭದಲ್ಲಿ ಎಸ್.ಜಿ. ಮೇದಪ್ಪ ಬಿಜೆಪಿಯಿಂದ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಕಾಂಗ್ರೆಸಿನ ಮಿಟ್ಟು ಚಂಗಪ್ಪ ಸೋತಿದ್ದರು. ಒಂದು ವರ್ಷದ ನಂತರ ನಡೆದ ಚುನಾವಣೆಯಲ್ಲಿ ಅದೇ ಮತದಾರರು ಇದ್ದರೂ ಕೂಡ ಎಸ್.ಜಿ. ಮೇದಪ್ಪನವರಿಗೆ ಗೆಲ್ಲಲು ಸಾಧ್ಯವಾಗಲಿಲ್ಲ, ಕಾಂಗ್ರೆಸಿನ ಟಿ.ಜಾನ್ ಆಯ್ಕೆಯಾಗಿದ್ದರು. ಎಸ್.ಜಿ. ಮೇದಪ್ಪನವರನ್ನು ಅವರ ಪಕ್ಷದವರೇ ಸೋಲಿಸಿದರು ಎಂಬುದು ಮೇದಪ್ಪನವರ ಮತ್ತು ಅವರ ಬೆಂಬಲಿಗರ ಅನಿಸಿಕೆಯಾಗಿತ್ತು.


ಈ ಬಾರಿಯೂ ಅವರು ಸ್ಪರ್ಧಿಸಲು ಅವಕಾಶವನ್ನು ಕೋರಿದ್ದರು. ಆದರೆ ಅವರಿಗೆ ಟಿಕೆಟು ನಿರಾಕರಿಸಲಾಗಿದೆ ಎಂದು ಹೇಳಲಾಗಿದೆ. ತನ್ನ ಸೋಲಿಗೆ ಈ ಹಿಂದೆ ಕಾರಣಕರ್ತರು ಯಾರು ಎಂಬುದು ಎಸ್.ಜಿ. ಮೇದಪ್ಪನವರಿಗೆ ಸ್ಪಷ್ಟವಾಗಿ ತಿಳಿದಿರುವುದರಿಂದ ಅವರು ಖಂಡಿತವಾಗಿಯೂ ಈ ಚುನಾವಣೆಯಲ್ಲಿ ಬಿಜೆಪಿಯ ಅಭ್ಯರ್ಥಿಯ ವಿರುದ್ಧ ತನ್ನ ಶಕ್ತಿ ಪ್ರದರ್ಶನವನ್ನು ಮಾಡುತ್ತಾರೆ ಎಂಬುದು ಜನಜನಿತವಾಗಿರುವ ವಿಚಾರವಾಗಿದೆ. ಹಾಗೊಂದು ವೇಳೆ ಆದರೆ ಬಿಜೆಪಿಯ ಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ.

ಸುಜಾ ಕುಶಾಲಪ್ಪ ಉತ್ತಮವಾದ ಚಾರಿತ್ರ್ಯವನ್ನು ಇಟ್ಟುಕೊಂಡಂತಹ ವ್ಯಕ್ತಿ ಅಲ್ಲ, ಇತ್ತೀಚೆಗಷ್ಟೇ ಅವರ ಮೇಲೆ ಕೊಲೆಯ ಯತ್ನ ನಡೆದಿತ್ತು, ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದ ಅಬ್ದುಲ್ ಲತೀಫ್‌ರವರ ಕೊಲೆಯ ಹಿಂದೆ ಇವರ ಕೈವಾಡವಿದೆ ಎಂದು ಹೇಳಿಕೊಂಡು, ಲತೀಫ್ ಸಹೋದರರೇ ಇವರನ್ನು ಮುಗಿಸಲು ಯತ್ನಿಸಿದ್ದರು. ಇದಾದನಂತರ ಕೆಲವು ಸಭೆಗಳಲ್ಲಿ ಕಾಣಿಸಿಕೊಳ್ಳುವುದು ಬಿಟ್ಟರೆ, ಎಲ್ಲಿಯೂ ಬಹಿರಂಗವಾಗಿ ಈ ವ್ಯಕ್ತಿ ಕಾಣಿಸಿಕೊಳ್ಳುತ್ತಿಲ್ಲ, ಆದರೆ ಚುನಾವಣೆಗೆ ಮಾತ್ರ ತಾನೇ ಅಭ್ಯರ್ಥಿಯಾಗಿರುವುದರಿಂದ ಸಕಲ ತಂತ್ರಗಳನ್ನು ಈ ವ್ಯಕ್ತಿ ಮಾಡಬಲ್ಲ ಎಂಬುದು ಜಿಲ್ಲೆಯಲ್ಲಿನ ಪ್ರಜ್ಞಾವಂತರ ಅಭಿಪ್ರಾಯವಾಗಿದೆ.

ಕಾಂಗ್ರೆಸಿನ ಮಟ್ಟಿಗೆ ಅಭ್ಯರ್ಥಿ ಯಾರು ಎಂಬುದು ಇನ್ನೂ ಬಗೆಹರಿಯದ ಗೊಂದಲವಾಗಿದೆ. ಹಾಲಿ ವಿಧಾನ ಪರಿಷತ್ ಸದಸ್ಯ ಟಿ. ಜಾನ್ ಸ್ಪರ್ಧಿಸುವುದಿಲ್ಲ ಎಂದು ಹೇಳುತ್ತಿದ್ದವರು, ಈಗ ಮತ್ತೊಮ್ಮೆ ಸ್ಪರ್ಧಿಸಿದರೆ ಹೇಗೆ ಎಂಬ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಕಾಂಗ್ರೆಸಿನಲ್ಲಿ ಲೆಕ್ಕಕ್ಕೆ ಬಾರದ ಸಾಕಷ್ಟು ಮಂದಿ ಈ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ಇವರಲ್ಲಿ ಪ್ರಮುಖರು ಕೆ.ಪಿ. ಚಂದ್ರಕಲಾ, ಪದ್ಮಿನಿ ಪೊನ್ನಪ್ಪ ನಾಪಂಡ ಮುತ್ತಪ್ಪ ಮುಂತಾದವರು. ಇನ್ನು ಕಾಂಗ್ರೆಸಿನಲ್ಲಿ ಕಾಯಂ ಖಜಾಂಚಿಯಾಗಿದ್ದ ಮಿಟ್ಟು ಚಂಗಪ್ಪ ಈ ಸ್ಥಾನಕ್ಕೆ ಯೋಗ್ಯ ಅಭ್ಯರ್ಥಿಯಾದರೂ ಒಮ್ಮೆ ಸೋಲಿನ ರುಚಿಕಂಡಿರುವುದರಿಂದ ಅವರೀಗ ಸ್ಪರ್ಧಿಸುವ ಧೈರ್ಯವನ್ನು ತೋರುತ್ತಿಲ್ಲ.

ಈ ಹಿಂದೆ ನಾವು ಬರೆದಂತೆ ಮಾಜಿ ಸಂಸದ ಅಡಗೂರು ವಿಶ್ವನಾಥ್ ಈಗಲೂ ಈ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ದಾಖಲಾಗಿದ್ದರೂ ತಮ್ಮ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ತನ್ನ ಸ್ವಯಂ ಕೃತ್ಯ ಅಪರಾಧದಿಂದಾಗಿ ಸೋಲನ್ನು ಅನುಭವಿಸಿದ್ದ ವಿಶ್ವನಾಥ್, ಈ ತಪ್ಪುಗಳನ್ನು ಇಂದಿಗೂ ತಿದ್ದಿಕೊಂಡಿಲ್ಲ, ತನ್ನ ತಪ್ಪು ಏನು ಎಂಬುದು ಅವರಿಗೆ ತಿಳಿಯುತ್ತಿಲ್ಲ, ಅವರ ಸುತ್ತ ಇರುವ ಕೋಟೆ ಅವರ ತಪ್ಪನ್ನು ತಿಳಿದುಕೊಳ್ಳಲು ಅವರಿಗೆ ಅವಕಾಶ ಮಾಡಿಕೊಡುತ್ತಿಲ್ಲ, ಹಾಗಿದ್ದರೂ ವಿಶ್ವನಾಥ್ ಕಾಂಗ್ರೆಸಿನ ಮಟ್ಟಿಗೆ ಓರ್ವ ಉತ್ತಮ ಅಭ್ಯರ್ಥಿಯಾಗಿದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ, ಅವರು ಲೋಕಸಭಾ ಸದಸ್ಯರಾಗಿದ್ದ ವೇಳೆಯಲ್ಲಿ ಕೊಡಗು ಜಿಲ್ಲೆಯಾದ್ಯಂತ ಪ್ರವಾಸ ಮಾಡಿದ್ದಾರೆ ಮತ್ತು ಕಾಂಗ್ರೆಸಿನ ಮೇಲೆ ಹಿಡಿತವನ್ನು ಸಾಧಿಸಿದ್ದಾರೆ. ಜನರೊಂದಿಗೆ ಸುಲಭವಾಗಿ ಬೆರೆಯುವ ಮತ್ತು ಜನಸಾಮಾನ್ಯರಿಗೆ ಸುಲಭವಾಗಿ ನಿಲುಕಬಲ್ಲ ವ್ಯಕ್ತಿಯಾಗಿ ವಿಶ್ವನಾಥ್ ಇರುವುದರಿಂದ ಅವರು ಅಭ್ಯರ್ಥಿಯಾದರೆ ಕಾಂಗ್ರೆಸಿಗೆ ಹೆಚ್ಚಿನ ಲಾಭವಾಗಲಿದೆ ಎನ್ನುವುದರಲ್ಲಿ ಸಂಶಯವಿಲ್ಲ.

ಆದರೆ ಇತ್ತೀಚೆಗಷ್ಟೇ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನೂ ಸೇರಿದಂತೆ ಕಾಂಗ್ರೆಸ್ ನಾಯಕತ್ವವನ್ನು ಬಹಿರಂಗವಾಗಿ ಟೀಕಿಸಿದ್ದರಿಂದ ಅವರಿಗೆ ಟಿಕೆಟು ಸಿಗುವುದು ಅಷ್ಟು ಸುಲಭವೇ ಎಂಬ ಪ್ರಶ್ನೆ ಇದೆ. ಜೊತೆಯಲ್ಲಿಯೇ ಅವರ ಹೇಳಿಕೆಯ ಹಿಂದೆ ಪ್ರಬಲವಾದ ಲಾಬಿ ಇದೆ ಎಂಬ ಭಾವನೆ ಕೂಡ ಇದೆ. ಏಕೆಂದರೆ ಪಕ್ಷದ ನಾಯಕತ್ವದ ವಿರುದ್ಧ ಬಹಿರಂಗವಾಗಿ ಹೇಳಿಕೆ ನೀಡಿದ ನಂತರವೂ ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದಾದಾಗ, ಇದರ ಹಿಂದೆ ಬೇರೆ ಯಾವುದೋ ಉದ್ದೇಶ ಇದೆ ಮತ್ತು ಪ್ರಬಲವಾದ ವ್ಯಕ್ತಿಗಳು ಅವರಿಗೆ ಗಾಡ್‌ಫಾದರ್‌ಗಳಾಗಿ ಇದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡು ಬರುವ ಅಂಶವಾಗಿದೆ. ಇದು ನಿಜವೇ ಆದರೆ ಅವರಿಗೆ ಟಿಕೆಟು ಸಿಗುವುದು ಕಷ್ಟವಲ್ಲದ ವಿಚಾರವಾಗಿರುತ್ತದೆ.



ಹಾಗೊಂದು ವೇಳೆ ಅವರಿಗೆ ಸ್ಪರ್ಧಿಸಲು ಅವಕಾಶ ದೊರೆತರೆ ಅವರು ಜಿಲ್ಲೆಯವರಲ್ಲ ಎಂಬ ಕೂಗನ್ನು ಬಿಟ್ಟರೆ, ಬೇರೆ ಯಾವುದೇ ಆರೋಪಗಳನ್ನು ಅವರ ವಿರುದ್ಧ ಮಾಡಲು ಸಾಧ್ಯವಾಗುವುದಿಲ್ಲ, ಜಾತಿರಾಜಕಾರಣ ಸ್ವಲ್ಪ ಪ್ರಮಾಣದಲ್ಲಿ ಈ ಬಾರಿ ಕೆಲಸ ಮಾಡುತ್ತದೆ. ಶಾಸಕ ಕೆ.ಜಿ. ಬೋಪಯ್ಯನವರ ವಿರುದ್ಧ ಆರೋಪ ಮಾಡುವ ಭರಾಟೆಯಲ್ಲಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಬ್ರಿಟಿಷರಿಂದ ಗಲ್ಲಿಗೇರಿಸಲ್ಪಟ್ಟಿದ್ದ ಗುಡ್ಡೆಮನೆ ಅಪ್ಪಯ್ಯಗೌಡರ ವಿರುದ್ಧ ಹೇಳಿಕೆಗಳು ಜಿಲ್ಲೆಯ ಅರೆಭಾಷೆ ಒಕ್ಕಲಿಗರ ಕೋಪಕ್ಕೆ ಕಾರಣವಾಗಿದೆ. ಗುಡ್ಡೆಮನೆ ಅಪ್ಪಯ್ಯಗೌಡರು ಸ್ವಾತಂತ್ರ್ಯ ಹೋರಾಟಗಾರರಲ್ಲ, ಅವರೊಬ್ಬ ದರೋಡೆಕೋರ ಎಂದು ಹೇಳಿರುವುದು ಈ ಸಮುದಾಯವನ್ನು ಕೆರಳಿಸಿದೆ: ಇದನ್ನು ಶಮನಗೊಳಿಸಲು ಬಿಜೆಪಿ ಇನ್ನಿಲ್ಲದ ಯತ್ನವನ್ನು ಮಾಡುತ್ತಿದೆ. ಪ್ರತಿನಿತ್ಯ ಪತ್ರಿಕಾ ಹೇಳಿಕೆಗಳು ಬರುತ್ತಿವೆ. ಇದರ ಜೊತೆಯಲ್ಲಿ ಟಿಪ್ಪು ಸುಲ್ತಾನ್ ಜನ್ಮದಿನೋತ್ಸವವನ್ನು ಕರಾಳ ದಿನಾಚರಣೆಯಾಗಿ ಆಚರಿಸುತ್ತೇವೆ ಎಂದು ಬೋಪಯ್ಯ ಹೇಳಿರುವುದು ಅಲ್ಪಸಂಖ್ಯಾತರನ್ನು ಕೆರಳಿಸಿದೆ ಎನ್ನುವುದರಲ್ಲಿ ಸಂಶಯವಿಲ್ಲ, ಜಿಲ್ಲೆಯಲ್ಲಿ ಎರಡು ಸಂಘಟನೆಗಳು ಇಲ್ಲಿಯ ಪ್ರಮುಖ ಜನಾಂಗವಾದ ಕೊಡವ ಜನಾಂಗದ ವಿಚಾರಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸುತ್ತಿದೆ. ಸಾಕಷ್ಟು ಸಮಯದಿಂದ ಕೊಡಗು ಪ್ರತ್ಯೇಕ ರಾಜ್ಯದಿಂದ ಮೊದಲ್ಗೊಂಡು, ಕೊಡವರಿಗೆ ಸ್ವಾಯತ್ತತೆ ಎಂಬ ವಿಚಾರದ ಹೋರಾಟಗಳನ್ನು ಮಾಡುತ್ತಿರುವ ಎನ್.ಯು. ನಾಚಪ್ಪ ಈಗ ಬಿಜೆಪಿ ಜೊತೆಯಲ್ಲಿ ಗುರುತಿಸಿಕೊಂಡಿದ್ದಾರೆ. ಇವರಿಂದ ಸಿಡಿದು ರಚಿಸಿಕೊಂಡ ಮತ್ತೊಂದು ಗುಂಪು ಜಿಲ್ಲೆಯ ಡೋಂಗಿ ಪರಿಸರವಾದಿಗಳ ಕೈಗೊಂಬೆಯಾಗಿ ಕಾಂಗ್ರೆಸ್ ಜೊತೆಯಲ್ಲಿ ಗುರುತಿಸಿಕೊಂಡಿದೆ. ಇವರ ಗುದ್ದಾಟಗಳು ಈ ಚುನಾವಣೆಯ ಮೇಲೆ ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ.

ಏನೇ ಆದರೂ ಬಿಜೆಪಿಯ ಅಭ್ಯರ್ಥಿಯ ಹಿನ್ನೆಲೆಯನ್ನು ಗಮನಿಸಿದಾಗ ಕಾಂಗ್ರೆಸಿನಿಂದ ಈಗ ಚಲಾವಣೆಯಲ್ಲಿರುವ ಹೆಸರುಗಳು ಉತ್ತಮ ಎಂಬುದರಲ್ಲಿ ಸಂಶಯವಿಲ್ಲ, ಸುಜಾ ಕುಶಾಲಪ್ಪ ಬಿಜೆಪಿ ಅಧ್ಯಕ್ಷರಾಗಿ ಘೋಷಣೆಯಾದ ಸಂದರ್ಭದಲ್ಲಿ, ತಾನು ಅಧ್ಯಕ್ಷನಾಗಿದ್ದಂತಹ ಪಕ್ಷದ ಅಧ್ಯಕ್ಷನಾಗಿ ಸುಜಾ ಕುಶಾಲಪ್ಪ ಆಯ್ಕೆಯಾಗಿರುವುದು ಬಿಜೆಪಿಯ ಅವನತಿಯ ಸಂಕೇತ ಎಂದು ಎ.ಕೆ. ಸುಬ್ಬಯ್ಯ ಪ್ರತಿಕ್ರಿಯಿಸಿದ್ದರು. ಅದೇ ರೀತಿ ಅವರ ಮೇಲೆ ಗುಂಡಿನ ದಾಳಿ ನಡೆದಾಗ, ಬೇರೆ ಯಾವುದೇ ಪಕ್ಷದ ಅಧ್ಯಕ್ಷರ ಮೇಲೆ ಅಥವ ಶಾಸಕರುಗಳ ಮೇಲೆ ಇಂತಹ ಪ್ರಯತ್ನ ನಡೆಯದೇ ಇರುವಾಗ, ಕೇವಲ ಸುಜಾ ಕುಶಾಲಪ್ಪನವರ, ಮೇಲೆ ನಡೆದಿದೆ ಎಂದರೆ ಅವರ ಚರಿತ್ರೆ ಎಂತಹದು ಎಂಬುದನ್ನು ನಾವು ಅಂದಾಜಿಸಬಹುದು ಎಂದು ಎ.ಕೆ. ಸುಬ್ಬಯ್ಯ ಹೇಳಿದ್ದರು.


ಗೋಮಾಂಸ ವಿಚಾರವೂ ಸೇರಿ ಜಿಲ್ಲೆಯಲ್ಲಿ ಹಲವಾರು ವಿಚಾರಗಳು ಚುನಾವಣೆಗಾಗಿ ಬಳಕೆಯಾಗುತ್ತಿದ್ದು, ಇವೆಲ್ಲವೂ ಯಾವ ರೀತಿಯಲ್ಲಿ ಪರಿಣಾಮ ಬೀರುತ್ತದೆ ಎಂಬುದನ್ನು ಎರಡೂ ಪಕ್ಷದ ಅಧಿಕೃತ ಅಭ್ಯರ್ಥಿಗಳ ಘೋಷಣೆಯಾದ ನಂತರವಷ್ಟೇ ಹೇಳಬಹುದು.

■ ಬಿ.ಎನ್. ಮನು ಶೆಣೈ

ಮಾಯಕೊಂಡ: ಶಾಸಕ ಶಿವಮೂರ್ತಿಯ 'ದ್ರೋಹ'ಗಳು

ಮಾಯಕೊಂಡ ಶಾಸಕ ಶಿವಮೂರ್ತಿ ನಾಯ್ಕನ ...ಾತಪರಾಗಳಿಗೆಲ್ಲ ಬ್ರೇಕ್ ಬೀಳುವ ಸಾಧ್ಯತೆ ಸನಿಹ ...ಂತಿದೆ. ಯಾವ ಶಿಕ್ಷಣ ಸಂಸ್ಥೆಗಳನ್ನು ತನ್ನ ಆದಾಯದ ...ಲವಾಗಿಸಿಕೊಂಡಿದ್ದನೊ ಅದೇ ಶಿಕ್ಷಣ ಸಂಸ್ಥೆಯ ...ವಹಾರಗಳು ಅವನ ಕೊರಳಿಗೆ ಉರುಳಾಗುವ ಕಾಲ ...ರವಿಲ್ಲ. ಈಗಾಗಲೇ ನೂರಾರು ಶಿಕ್ಷಕರಿಗೆ ವೇತನ ...ಇದೆ. ಅವರ ಸೇವಾ ರಿಜಿಸ್ಟರನ್ನೂ ನೀಡದೆ ಶಿಕ್ಷಕ ...ಹಿಯೆಂಬ ಕಳಂಕ ಮೆತ್ತಿಸಿಕೊಂಡಿರುವ ಶಿವಮೂರ್ತಿ ...ನಿಗೆ ನ್ಯಾಯಾಲಯವೇ ಮೂಗುದಾರ ಹಾಕಲಿದೆ.

ಮಾಯಕೊಂಡ ಕ್ಷೇತ್ರಕ್ಕೆ ಶಾಪದಂತೆ ತಗುಲಿಕೊಂಡಿರುವ ...ಮೂರ್ತಿ ನಾಯ್ಕ 'ಮಾಜಿ ಮಂತ್ರಿ' ಎಂಬ ಲೇಬಲ್ ...ಂದಿದ್ದರೂ ತನ್ನ ಮತದಾರರ ಅಭ್ಯುದಯಕ್ಕೆ ...ಮಕೊಂಡ ನಯಾ ಪೈಸೆಯ ನಿದರ್ಶನವಿಲ್ಲ. ಜನರಿಗೆ ...ಕಾರ ಮಾಡುವುದು ಒತ್ತಟ್ಟಿಗಿರಲಿ, ಜನರ ಕೈಗೇ ...ದೆ ಬೆಂಗಳೂರು ಸೇರಿಕೊಳ್ಳುವ ಈ ಶಾಸಕನಿಗೆ ...ಾದರು ಮಾಯಕೊಂಡದಲ್ಲಿ ಒಂದು ವಾಸತಾಣ ...ವೆನ್ನುವುದು ವಿಪರ್ಯಾಸವಾದರೂ ಸತ್ಯ. ತನ್ನ ...ಟ್ಟೂರು ದೊಡ್ಡರಂಗವ್ವನ ಹಳ್ಳಿಯಲ್ಲಿ ಹೇಳಿಕೊಳ್ಳಲು ...ಮ ಸೂರನ್ನೂ ಉಳಿಸಿಕೊಳ್ಳದ ಇಂತವನಿಂದ ಇನ್ನೇನು ...ಕ್ಷಿಸಲಾದೀತು. ಈತನ ಹೆಂಡತಿ ಡಾ. ಗೀತಮ್ಮ ಸರ್ಕಾರಿ ...ದ್ಯೆಯಾಗಿದ್ದರೂ ಯಾವ ಲಂಗುಲಗಾಮಿಲ್ಲದೆ ಕೋಟ್ಯಂತರ ...ಯನ್ನು ಮಾಡಿಟ್ಟುಕೊಂಡಿದ್ದಾಳೆ. ಹಲವು ಶೈಕ್ಷಣಿಕ ...ಸ್ಥೆಗಳಿಗೆ ನಿರ್ದೇಶಕಿ ಎನಿಸಿಕೊಂಡಿದ್ದಾಳೆ.


ಬಂಗಾರಪ್ಪ

...ಶಿವಮೂರ್ತಿನಾಯ್ಕ ಮಾಯ...ಂಡದ ಶಾಸಕನಾದದ್ದೇ ಆದದ್ದು ...ತ್ರವೇ ಅನಾಥವಾದಂತಾಯಿತು. ...ಅಭಿವೃದ್ಧಿ ಯೆಂಬುದೇ ಇಲ್ಲಿ ...ರೀಚಿಕೆಯಾಗಿದೆ. ರಸ್ತೆ ಕಾಮಗಾರಿ, ...ಕಾರಿ ಬಿಲ್ಡಿಂಗ್‌ಗಳ ನಿರ್ಮಾಣ ...ತಹ ಕಾಂಟ್ರ್ಯಾಕ್ಟ್‌ಗಳನ್ನು ಭ್ರಷ್ಟ ...ಟಗಳಾದ ನಿರ್ಮಿತಿ ಕೇಂದ್ರ, ...ಸೇನಾ ನಿಗಮದ ಕಡುಭ್ರಷ್ಟರ ...ತ್ತು ಒಂದಷ್ಟು ಕಮಿಷನ್ನು ಗುಂಜಿ ...ಗಳೂರು ಸೇರಿದರೆ ಮುಗಿದೇ ...ಹೋಯಿತು, ಮತ್ತೆ ಶಿವಮೂರ್ತಿ ...ಮುಖ ಕಾಣುವುದು ಇನ್ನೊಂದು ಕಾಂಟ್ರ್ಯಾಕ್ಟ್ ಬಂದಾಗಲೇ. ...ಶಿವಮೂರ್ತಿಗಿದು ಕೊನೆಯ ಶಾಸಕಗಿರಿ ಎನ್ನುವುದು ...ಖಾತ್ರಿಯಾಗಿ ಹೋಗಿದೆ. ಜನ ಅದಾಗಲೇ ಈ ತೀರ್ಮಾನಕ್ಕೆ ...ಬಂದಾಗಿದೆ. ಇದರ ಸುಳಿವು ಸಿಕ್ಕಿದ್ದರಿಂದಲೋ, ಏನೊ ...ಶಿವಮೂರ್ತಿ ಬಿಟ್ಟೂಬಿಡದಂತೆ ಉಣ್ಣಲು ಕೂತಿದ್ದಾನೆ.

ಶಿವಮೂರ್ತಿಯ ರಾಜಕಾರಣ ಮೊಳಕೆಯೊಡೆದದ್ದು ಹಿಂದಿದ್ದ ಬರಮಸಾಗರ ಮತಕ್ಷೇತ್ರದಲ್ಲಿ. ...ಕಲಪನಹಳ್ಳಿಯಲ್ಲಿ ನಡೆದ ಗೌರೀಬಾಯಿಯ ಮರ್ಡರ್ ...ಕರಣ 80ರ ದಶಕದಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದ ...ಶಿವಮೂರ್ತಿ ನಾಯ್ಕನಿಗೆ ಮೈಲೇಜ್ ತಂದು ಕೊಟ್ಟಿತ್ತು. ...ಕೊಲೆಯನ್ನು ಪ್ರತಿಭಟಿಸಿ ನಡೆದ ಚಳವಳಿಯಲ್ಲಿ ...ಒಂದಷ್ಟು ಮುಖ ತೋರಿಸಿಕೊಂಡು ಲೀಡರ್ ಎನಿಸಿಕೊಂಡ ...ಶಿವಮೂರ್ತಿ ನಾಯ್ಕ ಎಂಬಿಎ ಓದುವುದಕ್ಕೆಂದು ...ಬೆಂಗಳೂರು ಹಾದಿ ಹಿಡಿದಿದ್ದ. ಆಗಲೇ ಅವನಿಗೆ ...ಬಂಗಾರಪ್ಪನ ಒಡನಾಟ ಒದಗಿಬಂದದ್ದು. ಅದೇ ವೇಳೆಗೆ ...1983ರಲ್ಲಿ ಕಾಂಗ್ರೆಸ್‌ನಿಂದ ಬಂಡೆದ್ದು ಕ್ರಾಂತಿರಂಗ ...ಪಾರ್ಟಿಯ ಪಾರ್ಟಿಯ ಮೂಲಕ ಸೆಡ್ಡು ಹೊಡೆದಿದ್ದ ...ಬಂಗಾರಪ್ಪನಿಗೂ ಹೊಸ ಉತ್ಸಾಹಿ, ಯುವ ಮುಖಗಳು ...ಬೇಕಾಗಿದ್ದವು. ಶಿವಮೂರ್ತಿಯಲ್ಲಿ ಅದ್ಯಾವ ಸೀಮೆಯ ...ನಾಯಕತ್ವ ಕಂಡಿತೋ ಏನೊ, ಆ ವರ್ಷದ ಚುನಾವಣೆಯಲ್ಲಿ ...ಬರಮಸಾಗರ ಕ್ಷೇತ್ರದಿಂದ ಕ್ರಾಂತಿರಂಗ ಪಾರ್ಟಿಯ ...ಅಭ್ಯರ್ಥಿಯನ್ನಾಗಿ ಅಖಾಡಕ್ಕಿಳಿಸಿದ್ದರು. ಬಂಗಾರಪ್ಪನಿಗಿದ್ದ ...ವರ್ಚಸ್ಸಿನ ಕಾರಣವೋ, ಶಿವಮೂರ್ತಿ ನಾಯ್ಕನ ಅದೃಷ್ಟವೋ ...ಂತೂ ದಾವಣಗೆರೆಯ ಡಾ|| ತಿಪ್ಪೇಸ್ವಾಮಿಯೆದುರು ...ದ್ದು ಮೊದಲ ಬಾರಿಗೆ ಶಾಸಕನೆನಿಸಿದ್ದ. ಎರಡು ವರ್ಷ ...ಯುವುದರೊಳಗಾಗಿ ಸಮ್ಮಿಶ್ರ ಸರ್ಕಾರ ರಚಿಸಿದ್ದ ...ರಾಮಕೃಷ್ಣ ಹೆಗ್ಗಡೆಯವರ ಸರ್ಕಾರ ಬಿದ್ದುಹೋದದ್ದರಿಂದ ...1985ರಲ್ಲಿ ಮತ್ತೊಮ್ಮೆ ವಿಧಾನಸಭಾ ಚುನಾವಣೆ ...ಎದುರಾಗಿತ್ತು.

ಕೇವಲ ಎರಡು ವರ್ಷದಲ್ಲಿ ತನ್ನ ಮತದಾರರಿಗೆ ಶಿವಮೂರ್ತಿ ನಾಯ್ಕ ಅದೆಷ್ಟು ಬೇಡವೆನಿಸಿದ್ದನೆಂದರೆ ...1985ರ ಚುನಾವಣೆಯಲ್ಲಿ ಜನತಾ ಪಕ್ಷದ ಡಾ. ...ತಿಪ್ಪೇಸ್ವಾಮಿಯನ್ನು ಗೆಲ್ಲಿಸಿದ ಮತದಾರ ನಾಯ್ಕನನ್ನು ...ಸೋಲಿಸಿ ಮನೆಗಟ್ಟಿದ್ದ. ಆ ಬಾರಿಯೂ ಸರ್ಕಾರ ತನ್ನ ...ಅವಧಿಯನ್ನು ಪೂರೈಸಲಿಲ್ಲ. ನಾಲ್ಕು ವರ್ಷ ತುಂಬುವ ...ದರೊಳಗಾಗಿ ಉಂಟಾದ ಅಸ್ಥಿರತೆಯಿಂದ ವಿಧಾನಸಭೆ ...ವಿಸರ್ಜನೆಗೊಂಡು ರಾಷ್ಟ್ರಪತಿ ಆಳ್ವಿಕೆ ಹೇರಲ್ಪಟ್ಟಿತ್ತು. ಇದೇ ...ವೇಳೆಗಾಗಲೇ ಕೊಂಚ ಮೆತ್ತಗಾಗಿದ್ದ ಬಂಗಾರಪ್ಪ ತನ್ನ ...ಕ್ರಾಂತಿರಂಗ ಪಾರ್ಟಿಯನ್ನು ಕಾಂಗ್ರೆಸ್‌ನೊಳಗೆ ವಿಲೀನಗೊಳಿಸಿ ಕೈ ಪಾಳೆಯದೊಳಕ್ಕೆ ನುಸುಳಿಕೊಂಡಿದ್ದರು. ಅವರ ಶಿಷ್ಯನಾಗಿದ್ದ ಶಿವಮೂರ್ತಿ ನಾಯ್ಕ ಕೂಡಾ ಬಂಗಾರಪ್ಪನನ್ನೇ ಹಿಂಬಾಲಿಸಿದ್ದ. ಇದರ ಬೆನ್ನಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ತನ್ನ ಹಿಂಬಾಲಕರಿಗೆಲ್ಲಾ ಕೈ ಟಿಕೆಟ್ ಕೊಡಿಸುವಲ್ಲಿ ಬಂಗಾರಪ್ಪ ಯಶಸ್ವಿಯಾಗಿದ್ದರು. ಹಾಗಾಗಿ ಶಿವಮೂರ್ತಿ ನಾಯ್ಕನಿಗೂ ಅನಾಯಾಸವಾಗಿ ಕಾಂಗ್ರೆಸ್ ಟಿಕೆಟ್ ಒಲಿದು ಬಂದಿತ್ತು. ಅಷ್ಟೇ ಅಲ್ಲ ಆ ಚುನಾವಣೆಯಲ್ಲಿ ಗೆದ್ದು ತಮ್ಮ ಶಾಸಕಗಿರಿಯ ಎರಡನೇ ಇನ್ನಿಂಗ್ಸ್ ಶುರು ಮಾಡಿದ್ದ.


ಕಾಂಗ್ರೆಸ್ ಬಹುಮತ ಪಡೆದ ಆ ಅವಧಿಯ ಆರಂಭದಲ್ಲಿ ಸರ್ಕಾರವನ್ನು ವೀರೇಂದ್ರ ಪಾಟೀಲ್ ಮುಖ್ಯಮಂತ್ರಿಯಾಗಿ ಮುನ್ನಡೆಸಿದರಾದರೂ ಬಂಗಾರಪ್ಪ ಸಿಎಂ ಆಗುವುದಕ್ಕೋಸ್ಕರ ಒಳಗಿಂದೊಳಗೇ ಪ್ರಯತ್ನ ನಡೆಸುತ್ತಲೇ ಇದ್ದರು. ವೀರೇಂದ್ರ ಪಾಟೀಲರ ಅನಾರೋಗ್ಯ ಅದಕ್ಕೊಂದು ಸದವಕಾಶ ಕಲ್ಪಿಸಿತ್ತು. ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ, ಪಟೇಲರ ಆರೋಗ್ಯ ವಿಚಾರಿಸಲು ಬಂದವರು ಹಾಗೇ ಹೋಗಲಿಲ್ಲ. ವೀರೇಂದ್ರ ಪಾಟೀಲರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ಬಂಗಾರಪ್ಪನನ್ನು ಮುಖ್ಯಮಂತ್ರಿ ಎಂದು ಘೋಷಿಸಿ ಹೋದರು. ಅಂತಹ ರಾಜಕೀಯ ಮೇಲಾಟದಲ್ಲಿ ಶಿವಮೂರ್ತಿನಾಯ್ಕನ ಅದೃಷ್ಟವೂ ಖುಲಾಯಿಸಿ ಬಿಟ್ಟಿತು.

ಬಂಗಾರಪ್ಪನ ಪಟಾಲಂನಲ್ಲಿ ಪ್ರಾಮಾಣಿಕ ಎಂಬ ಸೋಗು ಧರಿಸಿಕೊಂಡಿದ್ದ ಶಿವಮೂರ್ತಿಗೆ ಅಬಕಾರಿ ಇಲಾಖೆಯ ಭರ್ಜರಿ ಮಂತ್ರಿಗಿರಿಯನ್ನೇ 'ಬಂ' ದಯಪಾಲಿಸಿದರು. ಅಷ್ಟೊತ್ತಿಗಾಗಲೇ ಶಿವಮೂರ್ತಿ ನಾಯ್ಕ ಕ್ಷೇತ್ರದಲ್ಲಿ ಹೆಸರು ಕೆಡಿಸಿಕೊಂಡಿದ್ದ. ತೀರಾ ಹಿಂದುಳಿದ ಬರಗಾಲದ ಕ್ಷೇತ್ರವಾಗಿದ್ದ ಬರಮಸಾಗರ ಕ್ಷೇತ್ರದಲ್ಲಿ ಬಿಡಿಗಾಸಿನ ಕೆಲಸ ಮಾಡಲಿಲ್ಲ. ಶಿವಮೂರ್ತಿಯ ಹೆಂಡತಿ ಡಾ.ಗೀತಾ ಸರಕಾರಿ ವೈದ್ಯಾಧಿಕಾರಿಯಾಗಿದ್ದರೂ ಗಂಡನ ರಾಜಕಾರಣದಲ್ಲಿ ಮೂಗು ತೂರಿಸತೊಡಗಿ, ದೊರೆಸಾನಿ ಯಾಗಿ ಮೆರೆಯತೊಡಗಿದಳು. ಇಲ್ಲಿಂದಲೇ ಶಿವಮೂರ್ತಿಯ ರಾಜಕೀಯ ಇಳಿಮುಖದತ್ತ ಜಾರತೊಡಗಿತು.

ಬಂಗಾರಪ್ಪ ಶಿಷ್ಯ ಶಿವಮೂರ್ತಿ ನಾಯ್ಕನನ್ನು ಅದೆಷ್ಟು ನಂಬಿದ್ದರೆಂದರೆ ಕೇವಲ ಅಬಕಾರಿ ಖಾತೆಯನ್ನು ಮಾತ್ರವಲ್ಲ, ತಮ್ಮ ಸ್ವಂತ ಹಣಕಾಸಿನ ವ್ಯವಹಾರವನ್ನೆಲ್ಲಾ ಆತನ ಮಡಿಲಿಗೆ ಹಾಕಿದ್ದರು. ಅಸಲಿಗೆ, ಅಪಾರ ಆಮದನಿಯಿದ್ದ ಅಬಕಾರಿ ಇಲಾಖೆಯನ್ನು ಬೇರೆಯವರಿಗೆ ವಹಿಸುವುದು 'ಬಂ'ಗೆ ಸುತಾರಾಂ ಇಷ್ಟವಿರಲಿಲ್ಲ. ತನ್ನ ಬಳಿಯೇ ಅದನ್ನು ಇಟ್ಟುಕೊಳ್ಳಬೇಕೆಂದುಕೊಂಡಿದ್ದರು. ಅದ್ಯಾಕೊ ಶಿವಮೂರ್ತಿ ಮೇಲೆ ಸಿಕ್ಕಾಪಟ್ಟೆ ನಂಬಿಕೆ ಮೂಡಿದ್ದರಿಂದ ಆತನಿಗೆ ಬಿಟ್ಟುಕೊಟ್ಟು ಅವನ ಮೂಲಕ ಆದಾಯವನ್ನು ತನ್ನೆಡೆಗೆ ಸೆಳೆದುಕೊಳ್ಳುವುದು ಬಂಗಾರಪ್ಪನ ಉಪಾಯವಿತ್ತು. ಆದರೆ ಶಿವಮೂರ್ತಿ ಅಂತಹ ನಂಬಿಕೆಗೆ ಅರ್ಹನಲ್ಲ ಎಂಬುದು 'ಬಂ'ಗೆ ಮನದಟ್ಟಾಗುವ ವೇಳೆಗಾಗಲೇ ನಾಯ್ಕ ಭರ್ಜರಿಯಾಗೇ ಬಿಲ ತೋಡಿದ್ದ. ಬಂಗಾರಪ್ಪನ ಅರಿವಿಗೆ ಬಾರದಂತೆಯೇ ಇಲಾಖೆಯಲ್ಲಿ ಭ್ರಷ್ಟಾಚಾರ ಶುರುಮಾಡಿ ಬೆಂಗಳೂರಿನಲ್ಲಿ ಸಿಕ್ಕಾಪಟ್ಟೆ ಆಸ್ತಿ ಮಾಡಿಟ್ಟುಕೊಂಡ.

ಮಂತ್ರಿಯಾಗುವುದಕ್ಕೂ ಮುನ್ನ ಆತನಿಗೆ ಅಂತ ಇದ್ದದ್ದು ತಂದೆ ಕಪ್ಪಾನಾಯ್ಕನಿಂದ ಬಂದಿದ್ದ 3 ಎಕರೆ ಜಮೀನು ಮಾತ್ರ. ಅದು ಬಿಟ್ಟರೆ ಕ್ಷೇತ್ರದಲ್ಲೊಂದು ಸೂರೂ ಇರಲಿಲ್ಲ. ಮಂತ್ರಿಯಾದ ನಂತರ ಆತನ ಆಸ್ತಿಯ ಗಂಟು ದಿನದಿಂದ ದಿನಕ್ಕೆ ದುಂಡಗಾಗತೊಡಗಿತ್ತು (ಶಿವಮೂರ್ತಿ ಆಸ್ತಿ ವಿವರವನ್ನು ಮುಂದೆ ನೀಡಲಾಗಿದೆ). ಆತ ಮಂತ್ರಿಯಾಗಿ ಆರು ತಿಂಗಳಾಗಿದ್ದಾಗ 1992ರಲ್ಲಿ ಲೋಕಸಭಾ ಚುನಾವಣೆ ಎದುರಾಗಿತ್ತು. ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಬಂಗಾರಪ್ಪನ ಆಪ್ತ ಶಿವಪ್ಪ ಕೈ ಪಾರ್ಟಿಯಿಂದ ಕಣಕ್ಕಿಳಿದಿದ್ದರು. ಶಿವಪ್ಪನನ್ನು ಗೆಲ್ಲಿಸುವುದು ಮುಖ್ಯಮಂತ್ರಿಯಾಗಿದ್ದ ಬಂಗಾರಪ್ಪನ ಪ್ರತಿಷ್ಠೆಯ ವಿಚಾರವಾಗಿತ್ತು. ಅದಕ್ಕಾಗಿ ಭಾರೀ ತಂತ್ರವನ್ನೇ ರೂಪಿಸಿದ್ದರು. ಅಷ್ಟಲ್ಲದೆ ನೆಚ್ಚಿನ ಶಿಷ್ಯ ಅಬಕಾರಿ ಮಂತ್ರಿ ಶಿವಮೂರ್ತಿಗೆ ಶಿವಮೊಗ್ಗ ಕ್ಷೇತ್ರದ ಜವಾಬ್ದಾರಿ ನೀಡಿ ಹಣಕಾಸಿನ ವ್ಯವಹಾರವನ್ನೆಲ್ಲ ಆತನಿಗೆ ಒಪ್ಪಿಸಿದ್ದರು.

ಹಣ ನೋಡುತ್ತಿದ್ದಂತೆಯೇ ಶಿವಮೂರ್ತಿಯ ನಿಷ್ಠೆ ನೀರಾಗಿ ಹರಿದುಹೋಗಿತ್ತು. ಚುನಾವಣೆಗೆ ಖರ್ಚು ಮಾಡಲೆಂದು 'ಬಂ' ನೀಡಿದ ಕೋಟ್ಯಂತರ ರೂಪಾಯಿಯನ್ನು ಶಿವಪ್ಪನ ಗೆಲುವಿಗೆ ಬಳಸುವ ಬದಲು ಬೆಂಗಳೂರಿನಲ್ಲಿ ಆಸ್ತಿ ಖರೀದಿಸಲು ಬಳಸಿಕೊಂಡಿದ್ದ. ಪರಿಣಾಮವಾಗಿ ಫಲಿತಾಂಶ ಹೊರಬಿದ್ದಾಗ ಕೈ ಕಟ್ಟಾಳು ಶಿವಪ್ಪ ಬಂಗಾರಪ್ಪನ ವರ್ಚಸ್ಸಿನ ಸಮೇತ ಮಕಾಡೆ ಮಲಗಿದ್ದರು. ಶಿವಮೂರ್ತಿ ನಾಯ್ಕನ ನಮಕ್ ಹರಾಮ್ ಬುದ್ಧಿ 'ಬಂ'ಗೆ ಅರ್ಥವಾದದ್ದೇ ಆಗ. ಕೂಡಲೇ ತಮ್ಮ ಮಂತ್ರಿಮಂಡಲದಿಂದ ಶಿವಮೂರ್ತಿ ನಾಯ್ಕನನ್ನು ಹೊರಗಟ್ಟಿದ ಬಂಗಾರಪ್ಪ ಆತ ವಾಸವಾಗಿದ್ದ 'ಜಯಮಹಲ್' ಮೇಲೆ ಆದಾಯ ತೆರಿಗೆ ಇಲಾಖೆಯಿಂದ ರೇಡು ಮಾಡಿಸಿದ್ದರು.



ಮಂತ್ರಿಗಿರಿಯಿಂದ ಹೊರ ದಬ್ಬಿಸಿಕೊಂಡ ಸಮಯ ಸಾಧಕ ಶಿವಮೂರ್ತಿ ನಾಯ್ಕ ನೇರ ರಿಕಾಣಿ ಹೂಡಿದ್ದು ಅಷ್ಟೊತ್ತಿಗಾಗಲೇ ಕಾಂಗ್ರೆಸ್ ಪಾರ್ಟಿಯೊಳಗೆ 'ಬಂ' ವಿರೋಧಿ ಬಣವಾಗಿ ರೂಪುಗೊಂಡಿದ್ದ ಮಾರ್ಗರೆಟ್ ಆಳ್ವಾ ಪಟಾಲಮ್ಮಿನಲ್ಲಿ. 1994ರಲ್ಲಿ ಕೈಪಾರ್ಟಿಯಲ್ಲಿ ಮತ್ತೆ ಪೊಲಿಟಿಕಲ್ ಕ್ರೈಸಿಸ್ ಶುರುವಾಗಿತ್ತು. ಕಂಪ್ಯೂಟರ್ ಹಗರಣ ಮುಖ್ಯಮಂತ್ರಿ ಬಂಗಾರಪ್ಪನ ಅಧಿಕಾರಕ್ಕೆ ಉರುಳಾಯಿತು. ವೀರಪ್ಪ ಮೊಯ್ಲಿ ಸಿಎಂ ಆಗಿ ಅಧಿಕಾರ ಸ್ವೀಕರಿಸಿದರು. ವೀರಪ್ಪ ಮೊಯ್ಲಿ ಮುಖ್ಯಮಂತ್ರಿಯಾಗುತ್ತಿದ್ದಂತೆಯೇ 'ಬಂ' ಪರ ಶಾಸಕರನ್ನು ಮೂಲೆಗೆ ತಳ್ಳಿ, 'ಬಂ' ವಿರೋಧಿ ಶಾಸಕರಿಗೆ ಮಣೆ ಹಾಕುವ ಕಾಯಕಕ್ಕೆ ಚಾಲನೆ ನೀಡಲಾಗಿತ್ತು. ಇಂತಹ ತಂತ್ರಗಾರಿಕೆಯಿಂದಾಗಿ ಬಂಗಾರಪ್ಪ ವಿರೋಧಿ ಹಣೆಪಟ್ಟಿ ಕಟ್ಟಿಕೊಂಡಿದ್ದ ಶಿವಮೂರ್ತಿ ನಾಯ್ಕನಿಗೆ ಎರಡನೇ ಬಾರಿಗೆ ಮಂತ್ರಿಮಂಡಲದ ಭಾಗ್ಯ ಒಲಿದು ಬಂದಿತ್ತು. ಈ ಬಾರಿ ಆತ ಪ್ರವಾಸೋದ್ಯಮ ಮತ್ತು ವಾರ್ತಾ ಪ್ರಚಾರ ಇಲಾಖೆಯ ಮಂತ್ರಿಯಾಗಿ ಅಧಿಕಾರಕ್ಕೇರಿದ್ದ.

ಆಗಲಾದರೂ ಆತ ಕ್ಷೇತ್ರದತ್ತ ಮುಖ ಹಾಕಿ ಜನರಿಗೆ ಸ್ಪಂದಿಸುವ ಕೆಲಸ ಮಾಡಬಹುದಿತ್ತು. ಆದರೆ ಶಿವಮೂರ್ತಿ ನಾಯ್ಕ ಅಂತಹ ಸಾಹಸಕ್ಕೇ ಕೈ ಹಾಕಲಿಲ್ಲ. ಹೆಚ್ಚೆಂದರೆ ಚಿತ್ರದುರ್ಗ-ದಾವಣಗೆರೆ ಪ್ರವಾಸಿಮಂದಿರಗಳಷ್ಟೇ ಇವನ ಅಡ್ಡಗಳೆನಿಸಿದ್ದವು. ಹಾಗಾಗಿಯೇ ವೀರಪ್ಪ ಮೊಯ್ಲಿ ಸರಕಾರ ಬಿದ್ದನಂತರ, ರಾಜಕೀಯವಾಗಿ ಮಕಾಡೆ ಮಲಗಿದ ಶಿವಮೂರ್ತಿನಾಯ್ಕ ಮತ್ತೆ ಮೇಲೇಳಲು ಬರೋಬ್ಬರಿ 15 ವರ್ಷ ಕಾಯಬೇಕಾಯ್ತು. 2013ರ ವಿಧಾನಸಭಾ ಚುನಾವಣೆಯಲ್ಲಿ ಮತದಾರ ಮಗದೊಮ್ಮೆ ಗೆಲುವನ್ನು ಶಿವಮೂರ್ತಿಗೆ ಧಾರೆ ಎರೆದನಾದರೂ ಆತನಲ್ಲಿ ಅದರ ಕೃತಜ್ಞತೆ ಕಿಂಚಿತ್ತೂ ಕಾಣಿಸುತ್ತಿಲ್ಲ. ಈ ಹಿಂದಿನ ಛಾಳಿಯನ್ನೇ ಮುಂದುವರೆಸಿದ್ದಾನೆ.



ಏರಿತು ಆಸ್ತಿ

ರಾಜಕಾರಣಕ್ಕೆ ಬಂದು ಶಾಸಕ, ಮಂತ್ರಿಯಾಗುವ ಮುನ್ನ ಪಿತ್ರಾರ್ಜಿತವಾಗಿ ಬಂದ 3 ಎಕರೆ ಜಮೀನು ಬಿಟ್ಟರೆ ಶಿವಮೂರ್ತಿ ನಾಯ್ಕನಿಗೆ ಮತ್ತಾವ ಆಸ್ತಿಯೂ ಇರಲಿಲ್ಲ. ಆದರೆ ಬಂಗಾರಪ್ಪ ಮತ್ತು ವೀರಪ್ಪ ಮೊಯ್ಲಿಯ ಸರಕಾರದಲ್ಲಿ ಮಂತ್ರಿಯಾಗಿದ್ದ ಅವಧಿಯಲ್ಲಿ ಆತ ಮಾಡಿದ ಬೇನಾಮಿ ಆಸ್ತಿಯ ಲೆಕ್ಕ ಹತ್ತಾರು ಕೋಟಿಯನ್ನೂ ಮೀರುತ್ತದೆ.

ಮಂತ್ರಿಯಾಗಿದ್ದ ಅವಧಿಯಲ್ಲಿ ಆವರಗೆರೆ ಸರ್ವೆ ನಂ. 57ರಲ್ಲಿ 6 ಎಕರೆ ಜಮೀನು ಹೆಂಡತಿ ಡಾ.ಗೀತಾಳ ಹೆಸರಿಗೆ ಖರೀದಿಸಿದ್ದ. ಈ ಆರು ಎಕರೆ ಜಮೀನಿನಲ್ಲಿ ಎನ್.ಹೆಚ್.4ರ ಅಗಲೀಕರಣಕ್ಕೆಂದು 1 ಎಕರೆ 14 ಗುಂಟೆ ಜಾಗವನ್ನು ಹೆದ್ದಾರಿ ಪ್ರಾಧಿಕಾರ ವಶಪಡಿಸಿಕೊಂಡು 3 ಲಕ್ಷ ಪರಿಹಾರ ನೀಡಿತ್ತು. ತನ್ನ ಹೆಂಡತಿ ಡಾ.ಗೀತಾ ಸರ್ಕಾರಿ ವೈದ್ಯೆಯಾಗಿದ್ದರೂ, ಯಾವುದೇ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಳ್ಳದಿದ್ದರೂ ಆವರಗೆರೆ ಗ್ರಾಮಪಂಚಾಯ್ತಿಯಿಂದ ಕೃಷಿಕಳೆಂದು ಸುಳ್ಳು ದಾಖಲೆ ಸೃಷ್ಟಿಸಿ 2003-04ರಲ್ಲಿ ಅದೇ ಹೆದ್ದಾರಿ ಪ್ರಾಧಿಕಾರದಿಂದ 33 ಲಕ್ಷ ಪರಿಹಾರ ಲಪಟಾಯಿಸಿದ್ದಾನೆ. ಅಲ್ಲದೇ ಹೆದ್ದಾರಿ ಪ್ರಾಧಿಕಾರದ ವಶದಲ್ಲಿದ್ದ 1 ಎಕರೆ 14 ಗುಂಟೆ ಜಮೀನನ್ನೇ ಅಲೀನೇಷನ್ ಮಾಡಿಸಿ, ದಾವಣಗೆರೆ ನಗರ ಸಭೆಯಿಂದ ನಕಲಿ ಡೋರ್ ನಂಬರ್ ಮಾಡಿಸಿ ಸೈಟುಗಳಾಗಿ ಪರಿವರ್ತನೆ ಮಾಡಿ ಮಂಚಿಸಿದ್ದಾನೆ.


ಇನ್ನು ಮಂತ್ರಿಯಾಗಿದ್ದಾಗಲೇ ಶಿಕ್ಷಣ ಸಂಸ್ಥೆಗಳ ಹೆಸರಲ್ಲಿ ಶಿವಮೂರ್ತಿ ನಾಯ್ಕ ಮಾಡಿದ ಲೂಟಿ ಅಷ್ಟಿಷ್ಟಲ್ಲ. 'ಬಣಜಾರ ಲಂಬಾಣಿ ಸಮಾಜ ಶಿಕ್ಷಣ ಸಂಸ್ಥೆ'ಯ ಹೆಸರಲ್ಲಿ ಬೆಂಗಳೂರಿನ ಯಲಹಂಕಾ ನ್ಯೂಟೌನ್‌ನಲ್ಲಿ 1/2 ಎಕರೆ ಜಮೀನನ್ನು (ಕಾವೇರಿ) ಬಿ.ಡಿ.ಎ.ದಿಂದ ಮಂಜೂರು ಮಾಡಿಸಿಕೊಂಡಿದ್ದ. ನಿಯಮಗಳ ಪ್ರಕಾರ ಅಲ್ಲಿ ಶೈಕ್ಷಣಿಕ ಸಂಸ್ಥೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಮಾತ್ರ ನಡೆಸಬೇಕು. ಆದರೆ ತನ್ನ ಹೆಂಡತಿ ಡಾ.ಗೀತಾ ಫೌಂಡೇಶನ್ ಹೆಸರಿನಲ್ಲಿ ಟ್ರಸ್ಟ್ ಹುಟ್ಟಾಕಿ ಆ ಜಾಗವನ್ನು ಟ್ರಸ್ಟಿಗೆ ವರ್ಗಾಯಿಸಿಕೊಂಡಿದ್ದಾನೆ. ಮಕ್ಕಳ ಶಿಕ್ಷಣಕ್ಕಾಗಿ ಶಾಲೆಯನ್ನು ತೆರೆಯಬೇಕಾದ ಜಾಗದಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಭವ್ಯಬಂಗಲೆ ಕಟ್ಟಿಸಿಕೊಂಡಿದ್ದಾನೆ. ಅದಕ್ಕೆ ಎಲ್.ಜಿ.ಹೌಸ್ ಅಂತಾ ಹೆಸರಿಟ್ಟು 4 ತಿಂಗಳ ಹಿಂದಷ್ಟೇ ಗೃಹಪ್ರವೇಶವೂ ಮುಗಿದುಹೋಗಿದೆ.

ಜೀವನ ಭೀಮಾನಗರದ ಎಲ್.ಐ.ಸಿ ಹೌಸಿಂಗ್ ಕಾಲೋನಿಯಲ್ಲಿ ಡೋರ್ ನಂ. 136ರ ಎರಡಂತಸ್ತಿನ ಮನೆ ಖರೀದಿಸಿದ್ದು ಕೂಡಾ ಇಂತಹುದೇ ಅಡಬಿಟ್ಟಿ ದುಡ್ಡಿನಲ್ಲೆ. ಮಂತ್ರಿಯಾಗಿದ್ದಾಗಲೇ ಬೆಂಗಳೂರಿನ ಎಂ.ಜಿ. ರೋಡ್‌ನ ಮೆಯೋಹಾಲ್‌ನ ಹಿಂಬದಿಯಲ್ಲಿರುವ ಪ್ರೆಸ್ಟೀಜ್ ಪ್ಯಾರಾಡೈಸ್ ಎಂಬ ಅಪಾರ್ಟ್‌ಮೆಂಟ್ ಖರೀದಿಸಿದ್ದ. ಚಿತ್ರದುರ್ಗದ ಜೆ.ಡಿ. ಬಡಾವಣೆಯಲ್ಲಿ ಖರೀದಿಸಿದ 'ಲಕ್ಷ್ಮಿನಿಲಯ', ಚಿತ್ರದುರ್ಗದ ಮೆದೇಹಳ್ಳಿ ಸರ್ವೆ ನಂಬರ್ ಎನ್.ಹೆಚ್.4ರ ಬದಿಯಲ್ಲಿ 100x100 ರ ಅಳತೆಯ ನಿವೇಶನ, ಆವರಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಹೊನ್ನೂಲು ಗೊಲ್ಲರಹಟ್ಟಿಗ್ರಾಮದಲ್ಲಿ (ಬಾಡಾಕ್ರಾಸ್) ನೂರಾರು ಕೋಟಿ ಬೆಲೆಬಾಳುವ 12 ಎಕರೆ ಜಮೀನು, ದಾವಣಗೆರೆ ವಿನೋಬನಗರದ (ಮಂತ್ರಿಯಾಗಿದ್ದಾಗ) 3 ಮನೆಗಳು, ರಿಂಗ್ ರೋಡ್ ಪಕ್ಕ 100x100 ಅಳತೆಯ ಭರ್ಜರಿ ನಿವೇಶನ ಇವೆಲ್ಲವೂ ಶಿವಮೂರ್ತಿ ನಾಯ್ಕನ ಭ್ರಷ್ಟತೆಯ ಸಾಕ್ಷಿಗಳು!

ತನ್ನದೇ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡಿಕೊಂಡಿದ್ದ ಶಿಕ್ಷಕರಿಗೂ ಈತ ನೀಡಿರುವ ಕಿರುಕುಳ ಒಂದೆರಡಲ್ಲ. ಸರ್ಕಾರದಿಂದ ಮಾನ್ಯತೆ ಪಡೆಯದೆ ಶಾಲೆ ನಡೆಸಿ ಪೋಷಕರಿಂದ ಲಕ್ಷಾಂತರ ಡೊನೇಷನ್ ಪೀಕಿದ್ದಲ್ಲದೆ ಇತ್ತ ಕೆಲಸ ಮಾಡಿದ ಶಿಕ್ಷಕರಿಗೆ ಸಂಬಳವನ್ನೂ ನೀಡದೆ ಸತಾಯಿಸಿದ್ದ. ಕೊನೆಗೊಮ್ಮೆ ಏಕಾಏಕಿ ಶಾಲೆಗಳನ್ನು ಕ್ಲೋಸ್ ಮಾಡುವುದಾಗಿ ಘೋಷಿಸಿ ನೂರಾರು ಶಿಕ್ಷಕರ ಕುಟುಂಬಗಳನ್ನು ಬೀದಿಗೆ ತಂದು ನಿಲ್ಲಿಸಿದ್ದ. ಈತ 2013ರ ಚುನಾವಣೆಯಲ್ಲಿ ಸ್ಪರ್ಧಿಸುವ ವೇಳೆ, ಈ ಶಿಕ್ಷಕರೆಲ್ಲಾ ಹೋಗಿ ಕಡೇಪಕ್ಷ ತಮಗೆ ಸರ್ವಿಸ್ ರಿಜಿಸ್ಟಾರ್ ಆದರೂ ಕೊಡಿ ಅಂತ ಕೇಳಿದಾಗ 'ನನಗೆ ಕಾಂಗ್ರೆಸ್ ಪಾರ್ಟಿಯ ಟಿಕೆಟ್ ಸಿಗಲಿ, ನಂತರ ನಿಮ್ಮೆಲ್ಲರ ರಿಜಿಸ್ಟಾರ್ ಕೊಡುತ್ತೇನೆ' ಎಂಬ ನೆಪ ಹೇಳಿದ್ದ. ಒಂದೊಮ್ಮೆ ಆ ಶಿಕ್ಷಕರೆಲ್ಲಾ ಪ್ರತಿಭಟನೆಯ ರಾಡಿ ಎಬ್ಬಿಸಿದರೆ ಎಲ್ಲಿ ತನ್ನ ಟಿಕೆಟ್ ಕೈತಪ್ಪುತ್ತೋ ಎಂಬ ಭೀತಿ ಆತನದಾಗಿತ್ತು. ಕೊನೆಗೆ ಟಿಕೆಟ್ ಸಿಕ್ಕ ಮೇಲೆ ಹೋಗಿ ಕೇಳಿದರೆ 'ಅವುಗಳನ್ನೆಲ್ಲಾ ಕೋರ್ಟ್‌ನಲ್ಲಿ ಸಬ್‌ಮಿಟ್ ಮಾಡಿದ್ದೇನೆ, ಚುನಾವಣೆ ಮುಗಿದ ಮೇಲೆ ವಾಪಾಸ್ ಕೊಡುತ್ತೇನೆ' ಎಂಬ ಮತ್ತೊಂದು ಸುಳ್ಳು ಪೋಣಿಸಿದ್ದ. ಅಷ್ಟರಲ್ಲಾಗಲೆ ಶಿವಮೂರ್ತಿ ನಾಯ್ಕನ ಅಸಲಿಮುಖ ಶಿಕ್ಷಕರುಗಳಿಗೆ ಅರ್ಥವಾಗಿತ್ತು. ಶಿಕ್ಷಣ ಸಂಸ್ಥೆಗಳು ಒಳಪಡುವ ವ್ಯಾಪ್ತಿಯ ಎಲ್ಲಾ ಕೋರ್ಟ್‌ಗಳಲ್ಲಿ ವಿಚಾರಿಸಿದರೆ ಯಾವೊಂದು ಕೋರ್ಟ್‌ನಲ್ಲೂ ಆತ ರಿಜಿಸ್ಟಾರ್‌ಗಳನ್ನು ಸಬ್‌ಮಿಟ್ ಮಾಡಿರಲಿಲ್ಲ. ಕೊನೆಗೆ ಸಿಟ್ಟಿಗೆದ್ದ ಶಿಕ್ಷಕರು ತಮ್ಮ ತಾಳ್ಮೆ ಕಳೆದುಕೊಂಡು ಶಿವಮೂರ್ತಿ ನಾಯ್ಕನ ಮನೆಗೇ ನುಗ್ಗಿ ಆತನ ಅಂಗಿ ಅರಿದು ಗೂಸಾ ನೀಡಿದ್ದರು. ಗೆದ್ದ ಮೇಲೂ ತನ್ನ ಈ ಹಿಂದಿನ 'ಮಂತ್ರಿಗಿರಿ' ಹಿಸ್ಟರಿಗಳ ನೆಪದಲ್ಲಿ ಮತ್ತೊಮ್ಮೆ ಸಚಿವನಾಗುವ ಪ್ರಯತ್ನಕ್ಕೆ ಶಿವಮೂರ್ತಿ ನಾಯ್ಕ ಮುಂದಾಗಿದ್ದಾಗ ಅದೇ ನತದೃಷ್ಟ ಶಿಕ್ಷಕರು ಸಿಎಂ ಸಿದ್ದರಾಮಯ್ಯನಿಗೆ ಪತ್ರ ಬರೆದು ಯಾವುದೇ ಕಾರಣಕ್ಕೂ ಇಂತಹ ನೀಚನೊಬ್ಬನನ್ನು ಮಂತ್ರಿ ಮಾಡಬೇಡಿರೆಂದು ಗೋಗರೆದದ್ದು ಶಿವಮೂರ್ತಿ ನಾಯ್ಕನ ಯೋಗ್ಯತೆಯನ್ನು ಬಚ್ಚಿಡುತ್ತದೆ.

■ ಟಿ.ಎನ್.ಷಣ್ಮುಖ

ಕಂಟೆಂಪ್ಟ್ ಆಫ್ ಕೋರ್ಟ್?
ವರ್ಸಸ್
ಕಂಟೆಂಪ್ಟ್ ಆಫ್ ಕರಪ್ಷನ್?



ಆತ್ಮೀಯ ಓದುಗರೇ,

ಇದು ನ್ಯಾಯಾಂಗಕ್ಕೆ ಸಂಬಂಧಿಸಿದ ವಿಚಾರವಾದ್ದರಿಂದ ಮೊದಲೇ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಈ ಲೇಖನದಲ್ಲಿ ಸತ್ಯವನ್ನಷ್ಟೇ ಹೇಳಲಾಗಿದೆ ಮತ್ತು ಸತ್ಯವನ್ನಲ್ಲದೇ ಬೇರೇನನ್ನೂ ಹೇಳಲಾಗಿಲ್ಲ. ನಮ್ಮ ಘನ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವುದು ಮತ್ತು ನ್ಯಾಯಾಂಗದ ಘನತೆಯನ್ನು ಕಾಪಾಡುವುದು ಈ ಲೇಖನದ ಉದ್ದೇಶವೇ ಹೊರತು ಯಾರನ್ನಾದರೂ ನಿಂದಿಸುವ ಉದ್ದೇಶವನ್ನು ಹೊಂದಿಲ್ಲ. ಈ ಸ್ಪಷ್ಟೀಕರಣದ ನಂತರ ಈಗ ಅಸಲಿ ವಿಚಾರಕ್ಕೆ ಬರೋಣ.


ನಮ್ಮ ಪ್ರಜಾತಂತ್ರ ವ್ಯವಸ್ಥೆ ಮುಖ್ಯವಾಗಿ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ಮೂರು ಆಧಾರ ಸ್ತಂಭಗಳ ಮೇಲೆ ನಿಂತಿದೆಯೆಂಬುದು ಶಾಲಾಮಕ್ಕಳಿಗೂ ತಿಳಿದಿರುವ ಸಂಗತಿ. ಕಳೆದ 68 ವರ್ಷಗಳ ಇತಿಹಾಸದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗಗಳು ಕಂಠಪೂರ್ತಿ ಭ್ರಷ್ಟಾಚಾರದಲ್ಲಿ ಮುಳುಗಿ ಇಡೀ ವ್ಯವಸ್ಥೆ ಗಬ್ಬು ನಾರುತ್ತಿರುವುದು ಈಗ ಸರ್ವವಿಧಿತ. ಆದರೆ ನಮ್ಮ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಜನಸಾಮಾನ್ಯರು ಅನಾದಿ ಕಾಲದಿಂದಲೂ ಹೆಚ್ಚಿನ ನಿರೀಕ್ಷೆ ಇರಿಸಿಕೊಂಡು ಬಂದಿದ್ದಾರೆ. ಈ ವಿಶ್ವಾಸ ತೀರಾ ಅಕಾರಣವಾದುದಲ್ಲ. ನ್ಯಾಯಾಂಗ ವ್ಯವಸ್ಥೆ ಅಂದಿನಿಂದ ಕಾಪಾಡಿಕೊಂಡು ಬಂದಿರುವ ಸಾಂವಿಧಾನಿಕ ಮೌಲ್ಯಗಳು ಮತ್ತು ಭ್ರಷ್ಟ ವ್ಯವಸ್ಥೆಯೊಂದಿಗೆ ಕಾಯ್ದುಕೊಂಡು ಬಂದಿದ್ದ ಅಂತರ ಇದಕ್ಕೆ ಕಾರಣ.

ಇತ್ತೀಚಿನ ದಿನಗಳಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವ ಕೆಲವು ನ್ಯಾಯಾಧೀಶರು ಘನ ನ್ಯಾಯಾಂಗದ ಘನತೆಗೆ ಕಳಂಕ ಹಚ್ಚುವ ರೀತಿಯ ನಡವಳಿಕೆಯನ್ನು ಪ್ರದರ್ಶಿಸುತ್ತಿದ್ದಾರೆಂಬ ಆರೋಪಗಳು ಆಗಾಗ್ಗೆ ಕೇಳಿಬರುತ್ತಿವೆ. ಇವರಲ್ಲಿ ಕೆಲವರು ಭ್ರಷ್ಟಾಚಾರದ ಆರೋಪ ಹೊತ್ತವರಿದ್ದಾರೆ. ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ ಆರೋಪ ಎದುರಿಸಿದವರೂ ಇದ್ದಾರೆ. ತಮ್ಮ ವ್ಯಕ್ತಿಗತ ಒಲವು ನಿಲುವುಗಳನ್ನು ನ್ಯಾಯಾಂಗದ ನಡಾವಳಿಗಳಲ್ಲಿ ಪ್ರದರ್ಶಿಸಿದ ಆರೋಪವೂ ಇದೆ. ಇಂಥಾ ಹೆಚ್ಚೆಚ್ಚು ಪ್ರಕರಣಗಳು ಹೊರಬೀಳುತ್ತಿರುವುದರಿಂದ ಪ್ರಜೆಗಳು ನ್ಯಾಯಾಂಗದ ಬಗ್ಗೆ ಇರಿಸಿರುವ ವಿಶ್ವಾಸ ಸಡಿಲಗೊಳ್ಳುತ್ತಿರುವುದು ಇಂದಿನ ವಾಸ್ತವ ಸತ್ಯ.

ಇಂಥ ಸಂದರ್ಭದಲ್ಲಿ ಜವಾಬ್ದಾರಿಯುತ ನಾಗರಿಕರ ಕರ್ತವ್ಯವೇನು? ನ್ಯಾಯಾಂಗದ ಘನತೆಯನ್ನು ಕಾಪಾಡಲು ನಾವೇನು ಮಾಡಬೇಕು ಎಂಬುದು ಅತ್ಯಂತ ಮೂಲಭೂತ ಪ್ರಶ್ನೆ. ಪ್ರಜ್ಞಾವಂತ ಮತ್ತು ಕ್ರಿಯಾಶೀಲ ನಾಗರಿಕರ ಪಾಲ್ಗೊಳ್ಳುವಿಕೆಯಿಲ್ಲದೆ ಯಾವುದೇ ಪ್ರಜಾತಂತ್ರ ವ್ಯವಸ್ಥೆಯ ಏಳ್ಗೆ ಅಸಾಧ್ಯ. ಆದ್ದರಿಂದ ನಮ್ಮ ಕರ್ತವ್ಯಗಳ ಬಗ್ಗೆ ಜಾಗರೂಕರಾಗಬೇಕಾದ್ದು ಇಂದಿನ ತುರ್ತು ಅವಶ್ಯಕತೆ.


ನಮ್ಮ ಸಮಾಜದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗದ ಭ್ರಷ್ಟಾಚಾರ ಮತ್ತು ವೈಫಲ್ಯಗಳ ಬಗ್ಗೆ ಖಂಡತುಂಡವಾಗಿ ಖಂಡಿಸುವ ಸಾಮಾಜಿಕ ಕಾರ್ಯಕರ್ತರು, ಸಂಘ-ಸಂಸ್ಥೆಗಳು, ವಿರೋಧ ಪಕ್ಷಗಳು ಅದೇ ನ್ಯಾಯಾಂಗದ ವಿಚಾರ ಬಂದಾಗ ವಿಮರ್ಶೆ ಮಾಡುವುದಿರಲಿ, ತಮ್ಮ ಅಭಿಪ್ರಾಯ ವ್ಯಕ್ತಪಡಿಸಲೂ ಸಾಮಾನ್ಯವಾಗಿ ಹಿಂದೇಟು ಹಾಕುತ್ತಾರೆ. ಸರಿಯಾದ ಸಂದರ್ಭದಲ್ಲಿ ತಮ್ಮ ಸಾತ್ವಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾದ ಸಂದರ್ಭದಲ್ಲೂ ನಮ್ಮಲ್ಲಿ ಅನೇಕ ಸಜ್ಜನರು ಹಿಂಜರಿಯುವುದುಂಟು. ಯಾಕೆಂದರೆ ಸಮಾಜದಲ್ಲಿ 'ನ್ಯಾಯಾಂಗ ನಿಂದನೆ'ಯ ಕೇಸು ಬೀಳುತ್ತದೆ ಎಂಬ ಆತಂಕ ವ್ಯಾಪಕವಾಗಿ ಮನೆಮಾಡಿದೆ. ಇದೊಂದು ರೀತಿಯಲ್ಲಿ ಮೂಢನಂಬಿಕೆ ಇದ್ದಂತೆ; ನಮ್ಮ ಯಾವುದೇ ಸಾಂವಿಧಾನಿಕ ಅಂಗದಲ್ಲಿರುವ ಹುಳುಕುಗಳನ್ನು ಸರಿಪಡಿಸಲು ಅನುಕೂಲವಾಗುವಂಥ ರಚನಾತ್ಮಕವಾದ, ಸಕಾರಾತ್ಮಕವಾದ ವಿಮರ್ಶೆಗಳು ಇದ್ದಾಗಲೇ ಅಂಥ ತಪ್ಪುಗಳನ್ನು ಸರಿಪಡಿಸಲು ಸಾಧ್ಯ. ಇದು ನಮ್ಮ ಸಂವಿಧಾನದತ್ತವಾದ ಹಕ್ಕು ಹಾಗೂ ಕರ್ತವ್ಯ ಕೂಡ. ರಚನಾತ್ಮಕ ವಿಮರ್ಶೆ ಎಂಬುದು ನ್ಯಾಯಾಂಗಕ್ಕೂ ಅನ್ವಯಿಸುತ್ತದೆ.

ಕಳೆದ ವಾರ ಕರ್ನಾಟಕ ಹೈಕೋರ್ಟಿನಲ್ಲಿ ಒಂದು ಅಪರೂಪದ ಪ್ರಸಂಗ ನಡೆಯಿತು. ಇದು ಕೋರ್ಟುಗಳ ಸಾಮಾನ್ಯ ನಡವಳಿಕೆಗಳಿಗೆ ತೀರಾ ಭಿನ್ನವಾಗಿದ್ದು ಕುತೂಹಲ ಕೆರಳಿಸಿದೆ. ನಾಟಕೀಯ ಎನ್ನಬಹುದಾದ ಈ ಪ್ರಸಂಗ ನಡೆದದ್ದು ಜಸ್ಟೀಸ್ ರಾಮಮೋಹನ ರೆಡ್ಡಿಯವರ ಸಮ್ಮುಖದಲ್ಲಿ. ಇದು ಪ್ರೆಸ್ಟೀಜ್ ಕಂಪನಿ ಮತ್ತು ಜಾಯ್ ಐಸ್ ಕಂಪನಿಗಳು ಜತೆಗೂಡಿ ನೂರಾರು ಕೋಟಿ ಬೆಲೆಬಾಳುವ ಸರ್ಕಾರಿ ಸ್ವತ್ತನ್ನು ಲಪಟಾಯಿಸಿದ್ದಾರೆನ್ನಲಾದ ಪ್ರಕರಣಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆಯ ಸಂದರ್ಭ.



ಅಕ್ಟೋಬರ್ 30ರ ಬೆಳಗ್ಗೆ ಸುಮಾರು 11.00 ಗಂಟೆಯ ಸಮಯ. ಕೋರ್ಟ್ ಹಾಲಿಗೆ ಪ್ರವೇಶಿಸಿದ ನ್ಯಾಯಮೂರ್ತಿ ರಾಮ ಮೋಹನ ರೆಡ್ಡಿಯವರು ಸಂಖ್ಯೆ 35011-12/2015 ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡರು. ಪ್ರಕರಣದ ವಿಚಾರಣೆಗೆ ಹೋಗುವ ಮುನ್ನ ಸದರಿ ಪ್ರಕರಣದ ಬಗ್ಗೆ ಕನ್ನಡ ಪ್ರಭ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿಯನ್ನು ಉಲ್ಲೇಖಿಸಿ ನ್ಯಾಯಾಲಯದ ಬಗ್ಗೆ ನಿಂದನಾತ್ಮಕವಾಗಿರುವ ಆ ವರದಿಯನ್ನು ಓದಿದ್ದೀರಾ ಎಂದು ಪ್ರಕರಣದ ಪ್ರತಿವಾದಿಗಳಲ್ಲಿ ಒಬ್ಬರಾದ ಎಸ್ಆರ್ ಹಿರೇಮಠ್ ಅವರನ್ನು ಏರುದನಿಯಲ್ಲಿ ಪ್ರಶ್ನಿಸಿದರು. ಹೌದು ಸ್ವಾಮಿ, ಓದಿದ್ದೇನೆ ಎಂದು ಹಿರೇಮಠ್ ಶಾಂತವಾಗಿಯೇ ಉತ್ತರಿಸಿದರು. ಆದರೂ ಪರವಾಗಿಲ್ಲ, ಮತ್ತೊಮ್ಮೆ ಓದಿ ಎಂದು ನ್ಯಾಯಮೂರ್ತಿಗಳು ಆದೇಶಿಸಿದರು. ಅದರಂತೆ ಇಡೀ ವರದಿಯನ್ನು ಗಂಭೀರ ದನಿಯಲ್ಲಿ ಓದಿ ಮುಗಿಸಿದ ಹಿರೇಮಠ್‌ರನ್ನು ಉದ್ದೇಶಿಸಿ, ಹೀಗೆ ನ್ಯಾಯಾಲಯದ ಮೇಲೆ ನಿಂದನಾತ್ಮಕ ಆರೋಪ ಮಾಡುತ್ತಿರುವ ನಿಮ್ಮ ಮೇಲೆ ಯಾಕೆ ಕ್ರಮ ಜರುಗಿಸಬಾರದು?.... ನೀವು ಯಾವ ಜೈಲಿಗೆ ಹೋಗಲು ಇಷ್ಟಪಡುತ್ತೀರಿ... ... ಎಂದು ನ್ಯಾ. ರಾಮಮೋಹನ ರೆಡ್ಡಿಯವರು ಪ್ರಶ್ನಿಸಿದರು. ಇದಕ್ಕೆ ಅಷ್ಟೇ ಶಾಂತಚಿತ್ತರಾಗಿ ಉತ್ತರಿಸಿದ ಹಿರೇಮಠ್ ಅವರು 'ನಾನು ಸತ್ಯ ಮತ್ತು ನ್ಯಾಯಕ್ಕಾಗಿ ಹೋರಾಡುತ್ತಿದ್ದೇನೆ, ಆದ್ದರಿಂದ ಯಾವುದೇ ಜೈಲಿಗಾದರೂ ಹೋಗಲು ಸಿದ್ಧ' ಎಂದು ಮಾರುತ್ತರ ನೀಡಿದರು.

ಹೀಗೆ ಪ್ರಶ್ನೋತ್ತರಗಳ ವಿನಿಮಯ ಒಂದಷ್ಟು ಕಾಲ ನಡೆಯಿತು. ನಂತರ ನ್ಯಾಯಮೂರ್ತಿಗಳು ಈ ಬಗ್ಗೆ ತಮ್ಮ ಆದೇಶದ ಉಕ್ತಲೇಖನ ಕೊಡಲು ಆರಂಭಿಸಿದರು. ಆ ಉಕ್ತಲೇಖನದಲ್ಲಿ 'ನ್ಯಾಯಾಧೀಶರ ಹೆಸರನ್ನು ಉಲ್ಲೇಖಿಸದೆ ಗಂಭೀರ ಆರೋಪ ಮಾಡಿದ್ದಾರೆ' ಎಂಬರ್ಥದ ವಾಕ್ಯವೊಂದಿತ್ತು. ಆಗ ಮಧ್ಯಪ್ರವೇಶಿಸಿದ ಹಿರೇಮಠ್ ಅವರು 'ಪತ್ರಿಕೆಯವರು ವರದಿಯಲ್ಲಿ ಕೆಲವು ಅಂಶಗಳನ್ನು ಬಿಟ್ಟುಬಿಟ್ಟಿದ್ದಾರೆ ಸ್ವಾಮಿ, ನಾನು ಬಿಡುಗಡೆ ಮಾಡಿದ ಪತ್ರಿಕಾ ಟಿಪ್ಪಣಿಯಲ್ಲಿ ತಮ್ಮ ಹೆಸರನ್ನು ಎರಡು ಬಾರಿ ಉಲ್ಲೇಖ ಮಾಡಿದ್ದೆ, ಆ ಪತ್ರಿಕಾ ಟಿಪ್ಪಣಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ' ಎಂದು ಶಾಂತದನಿಯಲ್ಲೇ ವಿವರಣೆ ನೀಡಿದರು.


ANNEXURE-4

SALE DEED

THIS DEED OF SALE IS MADE AND EXECUTED ON THIS THE THIRTIETH DAY OF AUGUST, YEAR TWO THOUSAND SIX (30/08/2006):

BY

M/S. JOY ICECREAMS (BANGALORE) PVT LTD., A Company incorporated under the Companies Act, 1956, having its Office at No.55, 1st Cross, Ambedkar Nagar, Whitefield, Bangalore - 560 066, represented herein by its Managing Director, Mr. Om L. Java, hereinafter referred to as "SELLERS", (which expression wherever it so requires shall mean and include all its legal representatives, administrators, executors, successors-in-interest and assigns etc.) OF THE ONE PART:

AND

M/S. WILDFLOWER ESTATE & RESORTS PRIVATE LTD., A Company incorporated under the Companies Act, 1956, having its Office at No.301, Shali Sultan, No.17, Cunningham Road, Bangalore - 560 052, represented by its Managing Director, Mr. M N Chittappa, hereinafter referred to as "CONFIRMING PARTY" (which expression wherever it so requires shall mean and include all its successors-in-interest and assigns etc.,) OF THE SECOND PART:

IN FAVOUR OF

M/S. PRESTIGE ESTATES PROJECTS PVT. LTD., A Company incorporated under the Companies Act, 1956, having its Registered Office at "The Falcon House", No.1, Main Guard Cross Road, Bangalore - 560 001 represented herein by its Managing Director, Mr. Irfan Razack, hereinafter called the "PURCHASERS", (which expression wherever it so requires shall mean and include all its legal representatives, administrators, executors, successors-in-interest and assigns etc.) OF THE THIRD PART:

ನಂತರದಲ್ಲಿ ಸದರಿ ಪ್ರಕರಣದ ಬಗ್ಗೆ ಕನ್ನಡ ಪ್ರಭ ಪತ್ರಿಕೆಯ ಸಂಪಾದಕರು ಮತ್ತು ಹಿರೇಮಠ್ ಅವರುಗಳ ಮೇಲೆ ನ್ಯಾಯಾಂಗ ನಿಂದನೆ ಕೇಸು ದಾಖಲಿಸುವ ನೋಟಿಸ್ ಜಾರಿ ಮಾಡುವಂತೆ ಆದೇಶಿಸಿದ ನ್ಯಾಯಮೂರ್ತಿಗಳು ಈ ಕೇಸನ್ನು ನವೆಂಬರ್ 5ಕ್ಕೆ ಮುಂದೂಡಿದ್ದಾರೆ.

ನವೆಂಬರ್ 5ನೇ ತಾರೀಕು ಈ ಪ್ರಕರಣ ಯಾವರೀತಿಯ ತಿರುವು ಪಡೆದುಕೊಳ್ಳುತ್ತದೋ ಎಂಬುದು ರಾಜ್ಯದಾದ್ಯಂತ ಕುತೂಹಲ ಮೂಡಿಸಿದೆ. ಹಿರೇಮಠ್‌ರ ಈ ಪ್ರಕರಣದಿಂದ ನ್ಯಾಯಾಂಗ ನಿಂದನೆಯ ವ್ಯಾಖ್ಯಾನ ಮತ್ತು ವ್ಯಾಪ್ತಿಯ ಬಗ್ಗೆಯೂ ಒಂದಷ್ಟು ಚರ್ಚೆಗಳು ನಡೆಯುತ್ತಿವೆ. ಈ ಬಗ್ಗೆ ಪರಿಣಿತ ಅಭಿಪ್ರಾಯ ಕೊಡಲು ಈ ಲೇಖಕ ಕಾನೂನು ತಜ್ಞನಲ್ಲ. ಆದರೆ ಈ ಪ್ರಕರಣ ಸಾರ್ವಜನಿಕ ಹಿತಾಸಕ್ತಿಗೆ ನೇರವಾಗಿ ಸಂಬಂಧಿಸಿರುವುದರಿಂದ ಸದರಿ ಪ್ರಕರಣದ ಹಿನ್ನೆಲೆ ಮತ್ತು ಇದುವರೆಗೆ ಈ ಪ್ರಕರಣ ಹಾದುಬಂದ ಪ್ರಮುಖ ಘಟ್ಟಗಳ ಬಗ್ಗೆ ಒಂದಷ್ಟು ಪ್ರಾಥಮಿಕ ವಿವರಗಳನ್ನು ಒದಗಿಸುವುದು 'ಪತ್ರಿಕೆ'ಯ ಕರ್ತವ್ಯ.

ಪ್ರಕರಣದ ಹಿನ್ನೆಲೆ

ಬೆಂಗಳೂರು ಉತ್ತರ ತಾಲೂಕು ವರ್ತೂರು ಹೋಬಳಿ ಪಟ್ಟಂದೂರು ಅಗ್ರಹಾರ ಗ್ರಾಮದ ಸರ್ವೆ ನಂಬರ್ 42ರಲ್ಲಿ 3 ಎಕರೆ 23 ಗುಂಟೆ ಜಮೀನು ಮೂಲತಃ ಸರ್ಕಾರಿ ಗೋಮಾಳವಾಗಿತ್ತು. 1972ರ ಸುಮಾರಿನಲ್ಲಿ ಈ ಗೋಮಾಳ ಭೂಮಿಯಲ್ಲಿ ನಿವೇಶನಗಳನ್ನು ವಿಂಗಡಣೆ ಮಾಡಿದ ಸರ್ಕಾರ ಸ್ಥಳೀಯ ಬಡಬಗ್ಗರಿಗೆ ಹಂಚಿಕೆ ಮಾಡಿತ್ತು. ಅದಾಗಿದ್ದರೆ ಯಾವುದೇ ಸಮಸ್ಯೆಯಿರಲಿಲ್ಲ. ಆದರೆ 1980ರ ಸುಮಾರಿನಲ್ಲಿ ಇದೇ ಭೂಮಿಯನ್ನು ಮತ್ತೊಮ್ಮೆ ಜಾಯ್ ಐಸ್ ಕ್ರೀಮ್ ಕಂಪನಿಗೆ ಅಂದಿನ ಜಿಲ್ಲಾಧಿಕಾರಿಯವರು 30 ವರ್ಷಗಳ ಅವಧಿಗೆ ಲೀಸ್ ಮೂಲಕ ಮುಂಜೂರು ಮಾಡಿಬಿಟ್ಟರು. ಈ ಮಂಜೂರಾತಿಯ ಬಗ್ಗೆ ತಹಸೀಲ್ದಾರ್ ತಕರಾರು ಅರ್ಜಿ ಸಲ್ಲಿಸಿದ್ದರ ಪರಿಣಾಮವಾಗಿ ಉಪವಿಭಾಗಾಧಿಕಾರಿ(ಎಸಿ) ಕೋರ್ಟ್‌ನಲ್ಲಿ ವಿಚಾರಣೆ ನಡೆದು 2003ರಲ್ಲಿ ಆದೇಶ ಹೊರಬಿತ್ತು. ಅದರ ಪ್ರಕಾರ ಸದರಿ 3 ಎಕರೆ 23 ಗುಂಟೆ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಯಿತು.

ನಂತರ 2005ರಲ್ಲಿ ಜಾಯ್ ಐಸ್ ಕಂಪನಿ ಸರ್ಕಾರಕ್ಕೆ ಒಂದು ಮನವಿ ಸಲ್ಲಿಸಿ, ತಮ್ಮ ಕಂಪನಿ ಆರ್ಥಿಕ ಸಂಕಷ್ಟದಲ್ಲಿರುವುದರಿಂದ ತಮ್ಮ ಕಂಪನಿಯ ಎದುರುಗಡೆಯೇ ಇರುವ ಸದರಿ 3.23 ಗುಂಟೆ ಜಮೀನನ್ನು ಮಂಜೂರು ಮಾಡಬೇಕೆಂದೂ, ಸದರಿ ಜಾಗದಲ್ಲಿ ಸಾಫ್ಟ್‌ವೇರ್ ಕಂಪನಿ ಇತ್ಯಾದಿ ಸ್ಥಾಪನೆ ಮಾಡುತ್ತೇವೆಂದೂ ಒಂದು ಮನವಿಯನ್ನು ಸಲ್ಲಿಸಿತು. ಈ ಮನವಿಯನ್ನು 'ಪುರಸ್ಕರಿಸಿದ' ಅಂದಿನ ಜಿಲ್ಲಾಧಿಕಾರಿಗಳು ಸದರಿ ಜಮೀನನ್ನು ಜಾಯ್ ಐಸ್ ಕಂಪನಿಗೆ ಕೊಡುವ ಉದ್ದೇಶದಿಂದ ಕೆಐಎಡಿಬಿಗೆ ವರ್ಗಾವಣೆ ಮಾಡಿದರು. ಆಗ ಎಚ್‌ಡಿ ಕುಮಾರಸ್ವಾಮಿಯವರ ನೇತೃತ್ವದ ಸಮ್ಮಿಶ್ರ ಸರ್ಕಾರ ಆಡಳಿತದಲ್ಲಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಏನೆಲ್ಲಾ ಲಾಬಿ ಮಾಡಿ ಜಮೀನನ್ನು ಕೆಐಎಡಿಬಿಗೆ ವರ್ಗಾವಣೆ ಮಾ[illegible] ಕ್ಷಣವೇ ಆ ಭೂಮಿಯನ್ನು ಕೈಗಾರಿಕಾ [illegible] ನೆಪದಲ್ಲಿ ತನ್ನ ಕೈವಶ ಮಾ[illegible]ಕೊಂಡಿತು. ಅದೂ ಕೂಡ ದುಗ್ಗಾಣಿ ಬೆಲೆಗೆ! ಆ ಭೂಮಿಗೆ ಮಾರುಕಟ್ಟೆ ಬೆಲೆ ಕೊಡುವುದಿರಲಿ, ಸ[illegible] ಮಾರ್ಗದರ್ಶಿ ಮೌಲ್ಯವನ್ನೂ ಕೊಡಲಿಲ್ಲ. ಸ[illegible] ಮಾರ್ಗದರ್ಶಿ ಬೆಲೆಯ ಅರ್ಧಕ್ಕೆ ಅಂದರೆ 4.28 [illegible] ಬೆಲೆಗೆ ಕೆಐಎಡಿಬಿ ಅಧಿಕಾರಿಗಳು ಒಂದು ಕ್ರ[illegible] ನೋಂದಣಿ ಮಾಡಿಸಿಕೊಟ್ಟು ಕೃತಾರ್ಥರಾಗಿದ್ದಾರೆ[illegible] ಪ್ರದೇಶದ ಸುತ್ತಮುತ್ತ ನೂರಾರು ಐಟಿ ಕಂಪನಿಗ[illegible] ಹತ್ತಾರು ಬಗೆಯ ಅಪಾರ್ಟ್‌ಮೆಂಟ್‌ಗಳು ಇಲ್ಲಿ[illegible] ಎತ್ತಿವೆ. ಇದು ಐಟಿ ಪಾರ್ಕ್‌ಗೆ ಅನತಿದೂರದಲ್ಲಿದೆ. [illegible] ಜಮೀನಿನ ಮಾರುಕಟ್ಟೆ ಮೌಲ್ಯ ನೂರು ಕೋಟಿಗ[illegible] ಅಧಿಕ!

ಕೆಐಎಡಿಬಿ ವಿಶೇಷ ಪ್ರಕರಣಗಳನ್ನು ಹೊರತು[illegible] ಸಾಮಾನ್ಯವಾಗಿ ತಮ್ಮ ವಶದಲ್ಲಿರುವ ಭೂಮಿಯನ್ನು [illegible] ನಿಬಂಧನೆಗಳಿಗೆ ಒಳಪಡಿಸಿ, ಗುತ್ತಿಗೆ ಆಧಾ[illegible] ಕಂಪನಿಗಳಿಗೆ ಕೊಡುವುದು ವಾಡಿಕೆ.

ಹೀಗೆ ಕೈಗಾರಿಕಾಭಿವೃದ್ಧಿಯ ಉದ್ದೇಶಕ್ಕೆ ಮೀಸ[illegible] ಜಮೀನನ್ನು ತಮ್ಮ ವಶಕ್ಕೆ ಪಡೆದುಕೊಂಡ ಕೇವ[illegible] ದಿನಗಳಲ್ಲಿ ಅಂದರೆ 2006ರ ಆಗಸ್ಟ್‌ನಲ್ಲೇ ಜ[illegible] ಐಸ್ ಕಂಪನಿ ಸದರಿ ಭೂಮಿಯನ್ನು ಮರುಮಾ[illegible] ಮಾಡಿಬಿಟ್ಟಿತು. ಸದರಿ 3 ಎಕರೆ 23 ಗುಂಟೆ ಭೂಮಿ[illegible] ಪ್ರೆಸ್ಟೀಜ್ ಎಂಬ ರಿಯಲ್ ಎಸ್ಟೇಟ್ ಕಂಪನಿಗೆ ಮಾ[illegible] ಮಾಡಿ ಅನಾಮತ್ತಾಗಿ ಕೋಟ್ಯಾಂತರ ರೂಪಾಯಿ [illegible] ಬಾಚಿಕೊಂಡಿತು.

ಇಷ್ಟೆಲ್ಲಾ ಡೀಲಿಂಗ್‌ಗಳು ಬಹಿರಂಗ[illegible] ನಡೆಯುತ್ತಿರುವಾಗಲೇ ತೆರೆಮರೆಯಲ್ಲಿ ಮತ್ತೊಂದು [illegible] ಕೂಡ ನಡೆದಿತ್ತು. ಅದು ಜಾಯ್ ಐಸ್ ಕಂಪನಿ [illegible] ವೈಲ್ಡ್ ಫ್ಲವರ್ ಎಸ್ಟೇಟ್ಸ್ ಎಂಬ ಕಂಪನಿ ನಡುವೆ [illegible] ಒಳಒಪ್ಪಂದ. ಆ ಒಳಒಪ್ಪಂದದ ಪ್ರಕಾರ ಜಾಯ್ [illegible] ಕಂಪನಿಗೆ ಸದರಿ ಜಮೀನು ಮಂಜೂರಾಗುವ ಮೊ[illegible] ಈ ಜಮೀನನ್ನು ವೈಲ್ಡ್‌ಫ್ಲವರ್ ಕಂಪನಿಗೆ ಅಥವ ಅ[illegible] ಸೂಚಿಸುವ ವ್ಯಕ್ತಿ ಅಥವ ಕಂಪನಿಗೆ ಮಾ[illegible] ಮಾಡಬೇಕೆಂದು ಕರಾರುಪತ್ರವಾಗಿತ್ತು ಎಂದರೆ [illegible] ನಂಬುತ್ತೀರಾ? ನಂಬಲೇಬೇಕು. ಯಾಕೆಂದರೆ ಅಂತಿಮ[illegible] ಪ್ರೆಸ್ಟೀಜ್ ಕಂಪನಿಯವರ ನೋಂದಾಯಿತ ಕ್ರಯಪ[illegible] ಈ ಅಂಶ ನಮೂದಾಗಿದ್ದು, ತೆರೆಮರೆಯಲ್ಲಿ ನ[illegible] ಎಲ್ಲ ಅಕ್ರಮಗಳಿಗೆ ಸಾಕ್ಷಿ ಒದಗಿಸುತ್ತದೆ. ಇದರ ಮತ್ತೆ[illegible] ಸಾಕ್ಷಿಯಾಗಿ ಜಾಯ್ ಮತ್ತು ಪ್ರೆಸ್ಟೀಜ್ ಕಂಪನಿಗ[illegible] ಡೀಲ್‌ನಲ್ಲಿ ವೈಲ್ಡ್ ಫ್ಲವರ್ ಕಂಪನಿ ಕೂಡ [illegible] ಪಾರ್ಟಿಯಾಗಿ ಕ್ರಯದ ವ್ಯವಹಾರದಲ್ಲಿ ಭಾಗಿಯಾ[illegible]

ಇಷ್ಟೆಲ್ಲಾ ಹೇಳಿದ ಮೇಲೆ ಈ ವೈಲ್ಡ್ ಫ್ಲವರ್ [illegible] ಯಾವುದು? ಎಲ್ಲಿಂದ ಬಂತು? ಎಂಬ ಕುತೂಹ[illegible] ಪ್ರಶ್ನೆಗಳು ಹುಟ್ಟುವುದು ಸಹಜ. ಈ ಕ[illegible] ನೋಂದಣಿಯಾಗಿದ್ದು ಕೂಡ 2004ರ ಜುಲೈನಲ್ಲಿ[illegible] ಕಂಪನಿಗೆ ನಾಲ್ಕು ಮಂದಿ ಪಾಲುದಾರರಿದ್ದಾರೆ. ಅವ[illegible] ಮಾಮೂಲಿ ಆಸಾಮಿಗಳಲ್ಲ, ದೇಶದ ರಿಯಲ್ ಎ[illegible] ದೈತ್ಯ ಕಂಪನಿ ಎಂಬೆಸ್ಸಿ ಗ್ರೂಪ್‌ನ ಚೇರ್ಮನ್ ಜಿತ[illegible] ವಿರ್ವಾನಿಗೆ ವೈಲ್ಡ್ ಫ್ಲವರ್‌ನಲ್ಲಿ ಶೇಕಡ 37.5ರಷ್ಟು ಪಾ[illegible] ಮಾಜಿ ಗೃಹ ಸಚಿವ ಕೆಜೆ ಜಾರ್ಜ್ ಅವರಿಗೆ [illegible] 25ರಷ್ಟು, ಮತ್ತೊಬ್ಬ ರಿಯಲ್ ಎಸ್ಟೇಟ್ ಉದ್ಯಮಿ ಎ[illegible] ಚಿಟ್ಟಿಯಪ್ಪನಿಗೆ ಶೇಕಡ 25ರಷ್ಟು ಹಾಗೂ ಜಾರ್ಜ್ [illegible] ಸೋದರ ಕೆಜೆ ಕುರುವಿಲ್ಲಾ ಅವರಿಗೆ ಶೇಕಡ 12.5[illegible] ಪಾಲು ಇದೆ. ಹೀಗೆ ಈ ಬಲಾಢ್ಯ ಶಕ್ತಿಗಳೆಲ್ಲ [illegible] ಸೇರಿ ಸರ್ಕಾರಿ ಭೂಮಿಯನ್ನು ಪರಭಾರೆ ಮಾ[illegible] ಕಾರ್ಯದಲ್ಲಿ ಕೈಜೋಡಿಸಿರುವುದು ನಿಚ್ಚಳ[illegible] ಕಂಡುಬರುತ್ತಿದೆ.

ಹೀಗೆ ಬಲಾಢ್ಯ ಶಕ್ತಿಗಳು ಗೋಮಾಳದ ಭೂಮಿ[illegible] ಕಬಳಿಸುವ ಹುನ್ನಾರದಲ್ಲಿದ್ದಾಗಲೇ, ಇತ್ತ ಪಟ್ಟಂದ[illegible] ಘಾಸಲೆಯ ನಿವೇಶನ ಪಡೆದಿದ್ದ ಫಲಾನುಭವಿಗಳು [illegible] ಕೊಟ್ಟಿದ್ದ ತಮ್ಮ ನಿವೇಶನಗಳನ್ನು ಪರಭಾರೆ ಮಾಡು[illegible] ವಿರುದ್ಧ ಪ್ರತಿಭಟನೆಗೆ ಮುಂದಾದರು. ತಾಲೂಕು ಕ[illegible] ಜಿಲ್ಲಾಧಿಕಾರಿ ಕಚೇರಿ ಮುಂತಾದೆಡೆಗಳಲ್ಲಿ ಪ್ರತಿ[illegible] ನಡೆದವು. ಅಧಿಕಾರಿಗಳಿಂದ ಸೂಕ್ತ ಪ್ರತಿಸ್ಪಂದನೆ ಸಿಗ[illegible] ಮೈಮೇಲೆ ಮಲ ಸುರಿದುಕೊಂಡು ತಮ್ಮ ಅಸಹಾ[illegible] ವ್ಯಕ್ತಪಡಿಸಿದರು. ಉಹೂಂ. ಸರ್ಕಾರ ಜಪ್ಪೆನ್ನಲಿಲ್ಲ. ಇ[illegible] ರೋಸಿಹೋದ ರಫೀಕ್ ಅಹ್ಮದ್ ಎಂಬಾತ ಅಧಿಕ[illegible] ಎದುರೇ ವಿಷ ಕುಡಿದು ಆತ್ಮಹತ್ಯೆಗೆ ಪ್ರಯತ್ನಿಸಿ[illegible] ವಿಪರೀತದ ಕ್ರಮವೂ ನಡೆದುಹೋಯ್ತು.

ಇಲ್ಲಿ ನಾವು ಗಮನಿಸಲೇಬೇಕಾದ್ದ ಪ್ರ[illegible] ಅಂಶವೊಂದಿದೆ. ಅದೇನೆಂದರೆ ಸಾರ್ವಜನಿಕ ಸ್ವ[illegible] ಅತಿಕ್ರಮಣದ ಬಗ್ಗೆ ತನಿಖೆ ನಡೆಸಿದ್ದ ಎಟಿ ರಾಮ[illegible] ಆಯೋಗ ಮತ್ತು ಬಾಲಕೃಷ್ಣನ್ ಆಯೋಗಗಳೆರಡ[illegible] ಸದರಿ ಪಟ್ಟಂದೂರು ಗ್ರಾಮದ ಸರ್ವೆ ನಂಬರ್ 4[illegible] 3.23 ಎಕರೆ ಭೂಮಿ ಕೂಡ ಅತಿಕ್ರಮಣ ಆಗಿದೆಯ[illegible] ಉಲ್ಲೇಖವಾಗಿದೆ. ಈ ಅಕ್ರಮಕ್ಕೆ ಸಂಬಂಧಿಸಿದವರ [illegible] ಕಾನೂನುಕ್ರಮ ಕೈಗೊಳ್ಳುವಂತೆಯೂ ಶಿಫಾ[illegible] ಮಾಡಲಾಗಿದೆ.

ಈ ಎರಡೂ ವರದಿಗಳನ್ನು ಆಧರಿಸಿ ಎಸ[illegible] ಹಿರೇಮಠ್ ನೇತೃತ್ವದಲ್ಲಿ ಸಮಾಜ ಪರಿವ[illegible]



...ಪಾಯ(ಎಸ್‌ಪಿಎಸ್)ವು 2013ರಲ್ಲೇ ಸುಪ್ರೀಂ ...ರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ...ಲಿಸಿತು. ಪ್ರಖ್ಯಾತ ವಕೀಲರಾದ ಪ್ರಶಾಂತ ಭೂಷಣ್ ... ಈ ಕೇಸಿನ ಪರವಾಗಿ ವಾದ ಮಂಡಿಸಲು ಮುಂದೆ ...ದ್ದರು. ಆದರೆ ಈ ಪ್ರಕರಣದ ವ್ಯಾಪ್ತಿ ಸಂಪೂರ್ಣವಾಗಿ ...ಟಕದಲ್ಲೇ ಇರುವುದರಿಂದ ಈ ಪ್ರಕರಣವನ್ನು ...ಕೋರ್ಟ್‌ನಲ್ಲೇ ಇತ್ಯರ್ಥಪಡಿಸಿಕೊಳ್ಳುವಂತೆ ಸೂಚಿಸಿ ...ಂ ಕೋರ್ಟ್ ಆದೇಶಿಸಿತು. ಅದರಂತೆ ಈ ಪ್ರಕರಣ ... ಹೈಕೋರ್ಟ್ ಮೆಟ್ಟಿಲಿಗೆ ಬಂದಿದೆ. ಹೈಕೋರ್ಟ್‌ನ ...ಗೀಯ ಪೀಠ ಈ ಬಗ್ಗೆ ಒಂದು ಸ್ಪಷ್ಟ ಆದೇಶವನ್ನು ...ರಡಿಸಿ ಭೂಮಿಯನ್ನು ಸರ್ಕಾರದ ವಶಕ್ಕೆ ...ಕೊಳ್ಳುವಂತೆ ಸೂಚಿಸಿದೆ. ನಿವೇಶನರಹಿತರ ಪರವಾಗಿ ...ಮಾಡುತ್ತಿರುವ ರಫೀಕ್ ಅಹಮದ್ ಎಂಬುವವರು ... ಮತ್ತೊಂದು ಪಿಐಎಲ್ ದಾಖಲಿಸಿದ್ದು, ಅದೂ ... ವಿಚಾರಣೆಯ ಹಂತದಲ್ಲಿದೆ.

...ಇತ್ತ ಸಿದ್ದರಾಮಯ್ಯ ಸರ್ಕಾರ ಸರ್ಕಾರಿ ಭೂಮಿಯನ್ನು ...ವಶ ಮಾಡಿಕೊಂಡ ಸುದ್ದಿಗಳನ್ನು ಕಳೆದ ಒಂದೆರಡು ...ದಿಂದ ಆಗಾಗ್ಗೆ ನೋಡುತ್ತಲೇ ಇದ್ದೇವೆ. ಈ ಮಧ್ಯೆ ...ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ...ಖದಲ್ಲಿ ಒಂದು ವಿಚಾರಣೆ ನಡೆದು ಅಂತಿಮವಾಗಿ ...ಮ್ ಕಂಪನಿಯವರು ಎಲ್ಲ ಹಲವು ಕಾನೂನುಗಳನ್ನು ...ಘನೆ ಮಾಡಿ, ತಮಗೆ ಮಂಜೂರಾದ ಜಮೀನನ್ನು ...ಳಕೆ ಮಾಡಿಕೊಂಡಿರುವುದರಿಂದ ಸದರಿ ಪ್ರದೇಶವನ್ನು ...ರದ ವಶಕ್ಕೆ ಪಡೆಯಬೇಕೆಂಬ ಆದೇಶ ಹೊರಬಿತ್ತು. ... ಆಧಾರದಲ್ಲಿ ದಿನಾಂಕ 11-08-2015ರಲ್ಲಿ ಒಂದು ...ಕೃತ ಸರ್ಕಾರಿ ಆದೇಶವೂ ಹೊರಬಿದ್ದಿದೆ.

...ಇಂಥ ಗಂಭೀರ ಪ್ರಯತ್ನದ ಭಾಗವಾಗಿ 2015ರ ...ಬರ್‌ನಲ್ಲಿ ಸರ್ಕಾರದ ಸೂಚನೆ ಮೇರೆಗೆ ಜಿಲ್ಲಾಧಿಕಾರಿ ...ಲೀಸ್ ಬಂದೋಬಸ್ತ್‌ನೊಂದಿಗೆ ತೆರಳಿ ಸದರಿ ...ಮಿಯನ್ನು ಸರ್ಕಾರದ ವಶಕ್ಕೆ ಪಡೆದು ಅಲ್ಲೊಂದು ...ೀರ್ಡ್ ನೇತು ಹಾಕಿ ಬಂದಿದ್ದಾರೆ. ಆದರೆ ...ರ್ಥವೆಂದರೆ ಡಿಸಿ ಶಂಕರ್ ಆ ಪ್ರದೇಶಕ್ಕೆ ಭೇಟಿಕೊಡುವ ...ಗೆ ಅದು ಖಾಲಿ ನಿವೇಶನವಾಗಿರಲಿಲ್ಲ. ಅಲ್ಲಿ ...ಬ್ಬರಿ 14 ಅಂತಸ್ತಿನ ಅತ್ಯಾಧುನಿಕ ಅಪಾರ್ಟ್‌ಮೆಂಟ್ ...ತ್ತು ಕೆಲವು ವಿಲ್ಲಾಗಳು ತಲೆಯೆತ್ತಿದ್ದವು! ಆದರೂ ...ದ ಜಿಲ್ಲಾಧಿಕಾರಿ ಸರ್ಕಾರದ ಸ್ವತ್ತನ್ನು ವಶಪಡಿಸಿಕೊಳ್ಳಲು ...ವುದೇ ಹಿಂಜರಿಕೆ ತೋರದೇ, ಅಗತ್ಯ ಕ್ರಮ ...ಕೊಂಡಿದ್ದಾರೆಂಬುದನ್ನು ಇಲ್ಲಿ ನೆನೆಯಲೇಬೇಕು.

...ಸರ್ಕಾರದ ಈ ಆದೇಶವನ್ನು ಪ್ರಶ್ನಿಸಿ ಪ್ರೆಸ್ಟೀಜ್ ...ನಿಯವರು ಹೈಕೋರ್ಟ್ ಮೊರೆ ಹೋದರು. ಈ ...ರಣದಲ್ಲಿ ಸರ್ಕಾರದ ವಿವಿಧ ಇಲಾಖೆಗಳನ್ನು ಮತ್ತು ...ಧಿಕಾರಿ ಮುಂತಾದ ಅಧಿಕಾರಿಗಳನ್ನು ಪ್ರತಿವಾದಿಗಳನ್ನಾಗಿ ...ಸಲಾಗಿದೆ. ಈ ಪ್ರಕರಣ ಕೆಲವು ಬಾರಿ ವಿಚಾರಣೆಗೆ ...ನಂತರ ಎಸ್‌ಪಿಎಸ್ ಹೈಕೋರ್ಟ್ ಮನವಿ ಸಲ್ಲಿಸಿ ...ೂ ಕೂಡ ಈ ಪ್ರಕರಣದಲ್ಲಿ ಪಿಐಎಲ್ ಹಾಕಿ ...ರಾಟ ಮಾಡುತ್ತಿರುವುದರಿಂದ ತಮ್ಮನ್ನು ...ವಾದಿಯನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿದೆ. ...ನ್ನು ಅನುಮೋದಿಸಿದ ಘನ ನ್ಯಾಯಾಲಯ ಇವರನ್ನು ...ಪ್ರಕರಣದ 7ನೇ ಪ್ರತಿವಾದಿಯನ್ನಾಗಿಸಿದೆ.

... ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ ವಾದ ...ಮಂಡಿಸಲು ನಿಯೋಜಿತರಾಗಿರುವವರು ಅಸಿಸ್ಟೆಂಟ್ ...ಡ್ವೊಕೇಟ್ ಜನರಲ್ ಶಿವಣ್ಣ ಎಂಬುವವರು. ...ರ್ವಜನಿಕ ಸ್ವತ್ತನ್ನು ಸಂರಕ್ಷಿಸುವ ಹೊಣೆಗಾರಿಕೆ ಇರುವ ... ವ್ಯಕ್ತಿ ತನ್ನ ಕರ್ತವ್ಯವನ್ನು ನಿಭಾಯಿಸದೆ ಪ್ರೆಸ್ಟೀಜ್ ...ಪನಿಗೆ ಸಹಕರಿಸುತ್ತಿದ್ದಾರೆಂಬುದು ಎಸ್‌ಪಿಎಸ್ ...ಮಾಡುತ್ತಿರುವ ಆರೋಪ. ಇದಕ್ಕೆ ಪುರಾವೆ ಎಂಬಂತೆ ... ಸರ್ಕಾರಿ ವಕೀಲರು ಸರ್ಕಾರದ ಕಂದಾಯ ಇಲಾಖೆ ...ಕೋರ್ಟ್‌ಗೆ ಸಲ್ಲಿಸಲೆಂದು ಕಳಿಸಿಕೊಟ್ಟಿದ್ದ ಪತ್ರವನ್ನು ...ರ್ಟ್‌ಗೆ ಸಲ್ಲಿಸಲೇ ಇಲ್ಲ. ಸದರಿ ಪತ್ರದ ಒಕ್ಕಣೆಯೆಂದರೆ ...ಯ್ ಐಸ್‌ಕ್ರೀಂ ಮತ್ತು ಇತರೆ ಕಂಪನಿಗಳು ...ಸಿಕೆಯಲ್ಲಿ ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ. ...ನನ್ನು ಘೋಷಿತ ಉದ್ದೇಶಗಳಿಗೆ ಹೊರತಾಗಿ ಈ ...ಮಿಯನ್ನು ರಿಯಲ್ ಎಸ್ಟೇಟ್ ಉದ್ದೇಶಗಳಿಗೆ ಬಳಸಿಕೊಂಡಿರುವುದು ನಿಚ್ಚಳವಾಗಿರುವುದರಿಂದ ಆ ಕಂಪನಿಗಳಿಗೆ ಸರ್ಕಾರದ ಭೂಮಿಯನ್ನು ಹೊಂದಲು ಯಾವುದೇ ಅರ್ಹತೆಯಿಲ್ಲ, ಆದ್ದರಿಂದ ಈ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡಿರುವುದು ಕಾನೂನುಬದ್ಧವಾಗಿದೆ ಎಂಬುದಾಗಿದೆ.

ಕಂದಾಯ ಇಲಾಖೆಯ ಇಂಥ ಮಹತ್ವದ ಪತ್ರವನ್ನು ಸರ್ಕಾರದ ಪರ ವಕೀಲರು ಕೋರ್ಟ್‌ಗೆ ಸಲ್ಲಿಸದೆ ಇರುತ್ತಾರೆಂದರೆ ಏನರ್ಥ? ಸಹಜವಾಗಿಯೇ ಈ ಬಗ್ಗೆ ಅನುಮಾನ ವ್ಯಕ್ತಪಡಿಸಲು ಕಾರಣಗಳಿವೆ ತಾನೇ? ಹೀಗಾಗಿ ಎಸ್‌ಪಿಎಸ್ ಕೂಡ ಬಲವಾದ ಅನುಮಾನ ವ್ಯಕ್ತಪಡಿಸಿದೆ. ಈ ವಕೀಲರನ್ನು ಬದಲಾಯಿಸುವಂತೆ ಸರ್ಕಾರಕ್ಕೂ ಪತ್ರ ಬರೆದಿದ್ದಾರೆ. ಅದೇ ವಿಷಯವನ್ನು ತಮ್ಮ ಪತ್ರಿಕಾ ಟಿಪ್ಪಣಿಯಲ್ಲೂ ಉಲ್ಲೇಖಿಸಿದ್ದಾರೆ.

ಇಷ್ಟೇ ಆಗಿದ್ದರೆ ಯಾವುದೇ ಸಮಸ್ಯೆಯಿರಲಿಲ್ಲ, ಈ ಒಟ್ಟಾರೆ ಪ್ರಕರಣದಲ್ಲಿ ನ್ಯಾಯಮೂರ್ತಿ ರಾಮ ಮೋಹನ ರೆಡ್ಡಿ ಅವರ ಬಗ್ಗೆಯೂ ಅನುಮಾನ ವ್ಯಕ್ತಪಡಿಸಿರುವ ಹಿರೇಮಠ್ ಅವರು ಅದನ್ನೂ ಪತ್ರಿಕಾಹೇಳಿಕೆಯಲ್ಲಿ ತಿಳಿಸಿದ್ದಾರೆ. ಇಲ್ಲಿಂದಾಚೆಗೆ ಈ ಪ್ರಕರಣ ಮತ್ತೊಂದು ತಿರುವು ಪಡೆದುಕೊಂಡಿದೆ.

ನವೆಂಬರ್ 5ರ ವಿಚಾರಣೆಯ ವೇಳೆ ತಮ್ಮ ಇಂಥ ಅನುಮಾನಕ್ಕೆ ಕಾರಣಗಳೇನು ಎಂಬುದನ್ನು ವಿವರಿಸುವ ಅವಕಾಶ ಹೇಗೂ ಹಿರೇಮಠ್ ಅವರಿಗಿದೆ. ನಾಳೆ ಪ್ರಕರಣ ಯಾವ ರೀತಿಯ ತಿರುವು ಪಡೆದುಕೊಳ್ಳುತ್ತದೆಂಬುದೂ ಕೂಡ ಕುತೂಹಲದ ಸಂಗತಿಯೇ. ಆದರೆ ಇಲ್ಲಿ ಕೆಲವು ಗಹನವಾದ ಪ್ರಶ್ನೆಗಳು ಏಳುತ್ತಿವೆ. ಅದೇನೆಂದರೆ ಸದರಿ ಪ್ರಕರಣದಲ್ಲಿ ಜಾಯ್ ಐಸ್ ಕ್ರೀಮ್ ಮತ್ತು ಪ್ರೆಸ್ಟೀಜ್ ಕಂಪನಿ ಹಾಗೂ ಕೆಲವು ಪ್ರಭಾವಿ ವ್ಯಕ್ತಿಗಳು ಪರಸ್ಪರ ಶಾಮೀಲಾಗಿ ಈ ಅಮೂಲ್ಯವಾದ ಸರ್ಕಾರಿ ಸ್ವತ್ತನ್ನು ಕಬಳಿಸಿರುವುದು ಮೇಲುನೋಟಕ್ಕೆ ಕಂಡುಬರುತ್ತದೆ. ಎಟಿ ರಾಮಸ್ವಾಮಿ ಆಯೋಗ ಮತ್ತು ಬಾಲಕೃಷ್ಣನ್ ಆಯೋಗಗಳೂ ಈ ವಿಷಯವನ್ನು ಬಹಿರಂಗಪಡಿಸಿವೆ. ಕಂದಾಯ ಇಲಾಖೆಯ ಉನ್ನತ ಹಂತದ ವಿಚಾರಣೆಯಲ್ಲೂ ಇದು ಸಾಬೀತಾಗಿದೆ. ಮೇಲಾಗಿ ಹೈಕೋರ್ಟ್ ವಿಭಾಗೀಯ ಪೀಠ ಕೂಡ ಸರ್ಕಾರಿ ಭೂಮಿಯನ್ನು ಸಂರಕ್ಷಿಸುವುದರ ಪರವಾಗಿ ತೀರ್ಪು ನೀಡಿದೆ. ಇಷ್ಟೆಲ್ಲಾ ನಡೆದಿದ್ದರೂ ಪ್ರೆಸ್ಟೀಜ್ ಕಂಪನಿ ಮತ್ತೆ ಹೈಕೋರ್ಟ್ ಮೆಟ್ಟಿಲೇರುತ್ತದೆಂದರೆ ಏನರ್ಥ? ಒಂದುವೇಳೆ ಈ ಪ್ರಕರಣವನ್ನು ಸರ್ಕಾರದ ಹಂತದಲ್ಲಿ ಬಗೆಹರಿಸಿಕೊಳ್ಳಿ ಎಂದು ತೀರ್ಪು ಬಂದರೆ ಹೇಗೂ ಕೆಲ ಭ್ರಷ್ಟ ಅಧಿಕಾರಿಗಳನ್ನು ಹಿಡಿದುಕೊಂಡು ತಮ್ಮ ಕೆಲಸ ಸಾಧಿಸಿಕೊಳ್ಳಬಹುದೆಂಬುದು ಪ್ರೆಸ್ಟೀಜ್ ಹವಣಿಕೆಯಾಗಿತ್ತೆ? ಇತ್ಯಾದಿ ಪ್ರಶ್ನೆಗಳು ನಮ್ಮ ಮುಂದಿವೆ.

ಈ ಪ್ರಕರಣದ ವಿಚಾರಣೆಯ ಹಂತದಲ್ಲಿ ಸದರಿ ನ್ಯಾಯಾಧೀಶರು ಕಂಪನಿಗೆ ಅನುಕೂಲವಾಗುವಂಥ ತೀರ್ಪು ಕೊಡಬಹುದೆಂಬ ಎಸ್‌ಪಿಎಸ್ ಸಂಸ್ಥೆಯ ಆರೋಪ ನ್ಯಾಯಾಂಗನಿಂದನೆ ಎನಿಸಿಕೊಳ್ಳುತ್ತದೆಯೆ? ಇದರಲ್ಲಿ ಎಸ್‌ಪಿಎಸ್ ಸಂಸ್ಥೆಗೆ ಸಾರ್ವಜನಿಕ ಆಸ್ತಿಯನ್ನು ಉಳಿಸುವ ಉದ್ದೇಶವಲ್ಲದೆ ಬೇರೆ ಯಾವ ಉದ್ದೇಶ ಇರಲು ಸಾಧ್ಯ? ಇಂಥಾ ಆರೋಪವನ್ನು ಭ್ರಷ್ಟಾಚಾರದ ವಿರುದ್ಧದ ಸಾತ್ವಿಕ ದನಿ ಎನ್ನಬಹುದೆ? ಇತ್ಯಾದಿ ಹತ್ತು ಹಲವು ಪ್ರಶ್ನೆಗಳು ನಮ್ಮ ಮನಸ್ಸಿನಲ್ಲಿ ಮೂಡುವುದು ಸಹಜ.

ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಘನ ನ್ಯಾಯಾಲಯದ ಮುಂದಿನ ನಡಾವಳಿಗಳಲ್ಲಿ ಸಿಗಲಿದೆ ಎಂದು ಆಶಿಸೋಣ. ಒಂದು ವೇಳೆ ಆಗಲೂ ನಮಗೆ ಗೊಂದಲಗಳು ಬಗೆಹರಿಯದೆ ಹೋದರೆ ಸತ್ಯವನ್ನು ಅರಿಯುವ ನಮ್ಮ ಪಯಣವನ್ನಂತೂ ಖಂಡಿತಾ ಮುಂದುವರೆಸೋಣ.


ಈ ಸಂದರ್ಭದಲ್ಲಿ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳೊಬ್ಬರ ವಿವೇಕಯುತವಾದ ಮತ್ತು ಸಮತೋಲನದಿಂದ ಕೂಡಿದ ಮಾತು ನೆನಪಾಗುತ್ತದೆ. 2011ರಲ್ಲಿ ಒಂದು ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಂದಿನ ಸಿಜೆಐ ಎಸ್‌ಎಚ್ ಕಪಾಡಿಯ ಅವರು ಹೀಗೆ ಹೇಳಿದ್ದರು: "ನ್ಯಾಯಾಧೀಶರ ಕಪ್ಪು ಕೋಟುಗಳಲ್ಲಿ ನ್ಯಾಯಾಂಗದ ಸ್ವಾತಂತ್ರ ಮತ್ತು ಬದ್ಧತೆಗಳನ್ನು ಎತ್ತಿಹಿಡಿಯುವಂತಹ ಶುದ್ಧ ವ್ಯಕ್ತಿಗಳು ಇರಬೇಕು. ತೀರ್ಪುಗಳನ್ನು ಹೊರಡಿಸುವಾಗ ನ್ಯಾಯಾಧೀಶರ ವ್ಯಕ್ತಿಗತ ಒಲವು ನಿಲುವುಗಳು ಯಾವುದೇ ರೀತಿಯಲ್ಲಿ ತಲೆಹಾಕಬಾರದು.... ಇತರೆ ಅಂಗಗಳಂತೆ ನ್ಯಾಯಾಂಗ ಕೂಡ ನ್ಯಾಯೋಚಿತವಾದ ವಿಮರ್ಶೆಗೆ ಒಳಗಾಗಬೇಕು. ಆದರೆ ಬೇಜವಾಬ್ದಾರಿಯುತ ವಿಮರ್ಶೆಗಳನ್ನು ನಾವು ಉತ್ತೇಜಿಸಬಾರದು."

ನ್ಯಾಯಾಂಗದ ಪ್ರಮುಖ ಸ್ಥಾನದಲ್ಲಿರುವವರು ಜವಾಬ್ದಾರಿಯುತರಾಗಿರಬೇಕು ಮತ್ತು ಉತ್ತರದಾಯಿತ್ವಗಳಾಗಿರಬೇಕು ಎಂದು ಪ್ರಜಾಪ್ರಭುತ್ವ ವ್ಯವಸ್ಥೆ ನಿರೀಕ್ಷಿಸುವುದು ತಪ್ಪೇನಲ್ಲ. ಆದ್ದರಿಂದ ನ್ಯಾಯಾಂಗದ ಘನತೆಯನ್ನು ಎತ್ತಿಹಿಡಿಯುತ್ತಲೇ ಅಂಥ ಉತ್ತರದಾಯಿತ್ವಕ್ಕಾಗಿ ಒತ್ತಾಯಿಸುವುದು ಪ್ರತಿಯೊಬ್ಬರ ಕರ್ತವ್ಯ.

■ ದೊಡ್ಡಿಪಾಳ್ಯ ನರಸಿಂಹಮೂರ್ತಿ

ಕಳಸಾ ಹೋರಾಟದ ಎರಡು ದುರಂತಗಳು

ಮಹದಾಯಿ-ಕಳಸಾ ಬಂಡೂರಿ ಸುತ್ತ ನಡೆಯುತ್ತಿರುವ ರೈತರ ಹೋರಾಟದಲ್ಲಿ ಇತ್ತೀಚೆಗೆ ಘಟಿಸಿದ ಈ ಎರಡು ಘಟನೆಗಳು ರೈತರನ್ನು ಆತಂಕಕ್ಕೆ ದೂಡಿದ್ದವು. ಮೊದಲನೆಯದು ರೈತ ಹೋರಾಟಗಾರ ಚಿತ್ತರಂಜನ್ ಕಲ್ಲಣ್ಣವರ (45) ಸಾವು ಮತ್ತೊಂದು ರೈತ ಮುಖಂಡ ಬಸರಾಜ ಸಾಬಳೆಯ ಅನಾರೋಗ್ಯ.


ಚಿತ್ತರಂಜನ್ ಕಲ್ಲಣ್ಣವರ

ಮಹದಾಯಿ ನದಿಯ ನೀರನ್ನು ಕಳಸಾ ಬಂಡೂರಿ ನಾಲೆಗೆ ಜೋಡಿಸಿ ರೈತರ ಹಾಗೂ ನಾಗರಿಕರ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ರೈತರು ಕಳೆದ ತಿಂಗಳು ಕೂಡಲ ಸಂಗಮದಿಂದ-ಕಣಕುಂಬವರೆಗೆ ಪಾದಯಾತ್ರೆಯನ್ನು ನಡೆಸಿದ್ದರು. ಈ ಪಾದಯಾತ್ರೆಯಲ್ಲಿ ಚಿತ್ತರಂಜನ್ ಕಲ್ಲಣ್ಣವರ ಪಾಲ್ಗೊಂಡಿದ್ದರು. ಅಲ್ಲದೇ ಇತ್ತೀಚೆಗಷ್ಟೆ ನಡೆದ ಕಣಕುಂಬಿ ತಡೆಗೋಡೆ ಒಡೆಯುವ ಅಭಿಯಾನದಲ್ಲೂ ಚಿತ್ತರಂಜನ್ ಸಕ್ರಿಯವಾಗಿ ತನ್ನನ್ನು ತೊಡಗಿಸಿಕೊಂಡಿದ್ದರು.

ಕಣಕುಂಬಿಗೆ ಹೊರಟ ರೈತರಿಗೆ ವ್ಯವಸ್ಥೆ ಕಲ್ಪಿಸಲು ತನ್ನ ಬೈಕ್‌ನಲ್ಲಿ ಖಾನಾಪೂರದವರೆಗೆ ತೆರಳಿ ಅಲ್ಲಿ ರೈತರಿಗೆ, ಮಹಿಳೆಯರಿಗೆ ಹೊದೆಯಲು 150 ಕಂಬಳಿಗಳನ್ನು ತನ್ನದೆ ಖರ್ಚಿನಲ್ಲಿ ಖರೀದಿಸಿ ಅವರಿಗೆಲ್ಲ ಹಂಚಿ ರಾತ್ರಿ ಮನೆಗೆ ವಾಪಸಾಗುವಾಗ ಹೆದ್ದಾರಿಯಲ್ಲಿ ಕಲ್ಲಣ್ಣವರ ಅಪಘಾತಕ್ಕೆ ತುತ್ತಾಗಿದ್ದರು. ಅಪಘಾತದ ರಭಸಕ್ಕೆ ಅವರ ಮೊಬೈಲ್ ನಜ್ಜುಗುಜ್ಜಾಗಿತ್ತು, ಕೊನೆಗೆ ಸ್ಥಳಕ್ಕಾಗಮಿಸಿದ ಪೊಲೀಸರು ತಮ್ಮ ಮೊಬೈಲ್‌ಗೆ ಅದರಲ್ಲಿದ್ದ ಸಿಮ್ ಹಾಕಿಕೊಂಡು ಕುಟುಂಬ ಸದಸ್ಯರಿಗೆ ಸುದ್ದಿ ಮುಟ್ಟಿಸಿ ಕಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದರು. ಚಿತ್ತರಂಜನ್ ಅವರ ತಲೆಗೆ ಪೆಟ್ಟಾಗಿದ್ದರಿಂದ ಕುಟುಂಬ ಸದಸ್ಯರು ಅವರನ್ನು ಹುಬ್ಬಳ್ಳಿಯಲ್ಲಿರುವ ಪ್ರಖ್ಯಾತ ನರರೋಗ ತಜ್ಞ ಡಾ. ಕ್ರಾಂತಿ ಕಿರಣ ನಡೆಸುವ ಬಾಲಾಜಿ ನರ್ಸಿಂಗ್ ಹೋಮ್‌ಗೆ ವರ್ಗಾಯಿಸಿದ್ದರು.

ಚಿತ್ತರಂಜನ್‌ಗೆ ಸಕ್ಕರೆ ಕಾಯಿಲೆ, ಹೈಪರ್‌ಟೆನ್‌ಷನ್ ಇದ್ದು ಎಂಟು ತಿಂಗಳು ಹಿಂದಷ್ಟೆ ಲಘು ಹೃದಯಾಘಾತವೂ ಆಗಿತ್ತು. ಅವರ ಅತಿಯಾದ ತೂಕ ಡಾಕ್ಟರ್‌ಗೆ ದೊಡ್ಡ ಸವಾಲಾಗಿತ್ತು, ಬಿಪಿ ಮತ್ತು ಸಕ್ಕರೆ ಲೆವೆಲ್‌ಅನ್ನು ಕಂಟ್ರೋಲ್ ತಂದ ಹೊರತು ಶಸ್ತ್ರಚಿಕಿತ್ಸೆ ಮಾಡುವಂತಿರಲಿಲ್ಲ. ಇದನ್ನು ಅರ್ಥಮಾಡಿಕೊಳ್ಳದ ಕುಟುಂಬ ಸದಸ್ಯರು ಆಪರೇಷನ್‌ಗೆ ಒತ್ತಾಯಿಸುತ್ತಿದ್ದರು. ದೇಹವನ್ನು ಸಾಮಾನ್ಯ ಸ್ಥಿತಿಗೆ ತಂದ ಡಾ. ಕ್ರಾಂತಿ ಕಿರಣ ಮಿದುಳಿನ ಶಸ್ತ್ರ ಚಿಕಿತ್ಸೆ ಮಾಡಿ ಐಸಿಯುನಲ್ಲಿ ಹೆಚ್ಚುವರಿ ಚಿಕಿತ್ಸೆ ನೀಡಿದ್ದರು. ಅದಕ್ಕೆ ಚಿತ್ತರಂಜನ್ ಸ್ಪಂದಿಸಿ ಗುಣಮುಖವಾಗಿದ್ದರು. ಅಕ್ಟೋಬರ್ 21ರಿಂದ 13 ದಿನಗಳ ಕಾಲ ಬಾಲಾಜಿ ಆಸ್ಪತ್ರೆಯಲ್ಲಿಯೇ ಇದ್ದರು. ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ಮೂತ್ರ ಹೊರಗೆ ಹೋಗಲು ಪರ್ಯಾಯ ವ್ಯವಸ್ಥೆ ಮಾಡುತ್ತಾರೆ. ರೋಗಿ ಇಂತಹ ಸಂದರ್ಭದಲ್ಲಿ ನಡೆದಾಡುವ, ಇತರೇ ಕೆಲಸಗಳನ್ನು ಮಾಡಲು ಅಸಾಧ್ಯವಾಗಿರುವ ಕಾರಣ ಉಪಕರಣ ಬಳಸಿ ಪರ್ಯಾಯ ವ್ಯವಸ್ಥೆ ಕಲ್ಪಿಸಿರುತ್ತಾರೆ.

ಚಿತ್ತರಂಜನ್ ಗುಣಮುಖವಾಗುತ್ತಿದ್ದ ಸಂದರ್ಭದಲ್ಲಿ ತನ್ನ ಕುಟುಂಬ ಸದಸ್ಯರೊಂದಿಗೆ ಮಾತನಾಡಿದ್ದಾನೆ, ನಡೆದಾಡಿದ್ದಾನೆ. ಈ ಸಂದರ್ಭದಲ್ಲಿ 'ನಾನು ಸಂಪೂರ್ಣ ಗುಣಮುಖವಾಗಿದ್ದೇನೆ. ಮೂತ್ರ ಹೊರಗೆ ಹೋಗಲು ಅಳವಡಿಸಿದ್ದ ಟ್ಯೂಬ್ ಏಕೆ' ಎಂದು ಕಿತ್ತುಕೊಂಡು ಬಿಟ್ಟಿದ್ದಾನೆ. ಇದರಿಂದ ಮೂತ್ರಕೋಶಕ್ಕೆ ಸೋಂಕು ತಗುಲಿತ್ತು. ಇದನ್ನು ಕಂಡ ಡಾ. ಕ್ರಾಂತಿಕಿರಣ 'ನಮ್ಮಲ್ಲಿ ಡಯಾಲಿಸಿಸ್ ಘಟಕ ಇಲ್ಲ, ಬೇರೆ ಚಿಕಿತ್ಸೆ ನೀಡಬೇಕಾಗಿದೆ. ಇವರನ್ನು ತಕ್ಷಣ ಬೆಳಗಾಂ ಕೆಎಲ್ಇ ಆಸ್ಪತ್ರೆ ದಾಖಲಿಸಿ' ಎಂದು ಸಲಹೆ ನೀಡಿದ್ದರು. ಅಲ್ಲಿಗೆ ಒಯ್ದು ಕುಟುಂಬ ವರ್ಗಕ್ಕೆ ನಿರಾಸೆ ಕಾದಿತ್ತು. ಪ್ರತಿಷ್ಠಿತ ಕೆಎಲ್ಇ ಆಸ್ಪತ್ರೆಯವರು ಚಿತ್ತರಂಜನ್‌ಗೆ ಚಿಕಿತ್ಸೆ ನೀಡಲು ನಿರಾಕರಿಸಿದ್ದರು. ಮರಳಿ ಹುಬ್ಬಳ್ಳಿಗೆ ಕರೆತಂದು ಡಯಾಲಿಸಿಸ್ ಘಟಕ ಇರುವ ವಿಹಿಂ ಪರಿಷತ್ ನಡೆಸುವ ವಿವೇಕಾನಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಷ್ಟರಲ್ಲಾಗಲೇ ಚಿತ್ತರಂಜನ್ ಮೂತ್ರನಾಳಕ್ಕೆ ಅಂಟಿದ್ದ ಸೋಂಕು ಪ್ರಬಲವಾಗಿತ್ತು, ಚಿತ್ತರಂಜನ್ ಕೊನೆಯುಸಿರೆಳೆದಿದ್ದರು. ಇದನ್ನು ಅರ್ಥ ಮಾಡಿಕೊಳ್ಳದ ಕುಟುಂಬ ಸದಸ್ಯರು ಕೆಲವು ಸಂಘಟನೆ ಹಾಗೂ ಅದರ ಕಾರ್ಯಕರ್ತರ ಸಮೇತ ಮೊದಲು ಚಿಕಿತ್ಸೆ ನೀಡಿದ್ದ ಡಾ. ಕ್ರಾಂತಿಕಿರಣ ಅವರ ಬಾಲಾಜಿ ಆಸ್ಪತ್ರೆ ಎದುರಿಗೆ ಜಮಾಯಿಸಿ, ಆಸ್ಪತ್ರೆ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಪೊಲೀಸರ ಮಧ್ಯ ಪ್ರವೇಶದಿಂದ ಅನಾಹುತ ತಣ್ಣಗಾಗಿದೆ. ಆದರೆ ಕಳಸಾ ಹೋರಾಟಕ್ಕೆ ಒಬ್ಬ ಉತ್ಸಾಹಿ ಕಾರ್ಯಕರ್ತನನ್ನು ಕಳೆದುಕೊಂಡ ಕೊರಗು ಮಾತ್ರ ಹಾಗೇ ಉಳಿದಿದೆ.

ಚಿತ್ತರಂಜನ್ ಕಲ್ಲಣ್ಣವರ ಮೂಲತಃ ಹೋರಾಟಗಾರರ ಮನೆತನದ ಕುಡಿ. ಇವರ ತಂದೆ ನಿಂಗಪ್ಪ ಕಲ್ಲಣ್ಣವರ, ಶಾಂತವೇರಿ ಗೋಪಾಲಗೌಡರ ಶಿಷ್ಯರಾಗಿದ್ದಂತವರು. 1970ರಲ್ಲಿ ಎಂಎಲ್‌ಸಿ ಕೂಡಾ ಆಗಿದ್ದರು. ತಂದೆಯ ಆದರ್ಶಗಳಲ್ಲೇ ಬೆಳೆದ ಚಿತ್ತರಂಜನ್ ಕಲ್ಲಣ್ಣವರ ಈ ಹಿಂದೆ ಈದ್ಗಾ ಮೈದಾನ ವಿಷಯವಾಗಿ ಹುಬ್ಬಳ್ಳಿ ಕೋರ್ಟಿನಲ್ಲಿ ಕೇಸನ್ನು ದಾಖಲಿಸಿದ್ದವರಲ್ಲಿ ಒಬ್ಬರು. ಶಿಶುವಿನಹಾಳ(ಶರೀಫ ಸಾಹೇಬ)ದಲ್ಲಿ ಜರುಗಿದ ಸೌಹಾರ್ದ ಸಮಾವೇಶದ ಸಮಿತಿಯಲ್ಲಿದ್ದು ಅದನ್ನು ಯಶಸ್ವಿಗೊಳಿಸಲು ಶ್ರಮಿಸಿದ್ದ ಚಿತ್ತರಂಜನ್ ಜಾತ್ಯತೀತ ನಿಲುವು ಹೋರಾಟಗಳಲ್ಲಿ ಪಾಲ್ಗೊಳ್ಳಲು ಸದಾ ಮುಂದಿರುತ್ತಿದ್ದರು.

ಕುಸಿದು ಬಿದ್ದ ಸಾಬಳೆ, ಬೇಸ್ತು ಬೀಳಿಸಿದ ಮಾಧ್ಯಮ

ಕಳಸಾ ಬಂಡೂರಿ ಹೋರಾಟ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಲೇ ಇದೆ. ಹೋರಾಟಗಾರರು ತಮ್ಮ ಪ್ರಾಣದ ಹಂಗನ್ನೂ ತೊರೆದು ಪ್ರತಿಭಟಿಸುತ್ತಿದ್ದಾರೆ. ನರಗುಂದದಲ್ಲಿ ಇಂತದ್ದೇ ಒಂದು ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ತಾಲೂಕಾ ರೈತಸಂಘದ ಅಧ್ಯಕ್ಷ ಬಸವರಾಜ ಸಾಬಳೆ ಪೆಂಡಾಲ್‌ನಲ್ಲೇ ಕುಸಿದು ಬಿದ್ದಿದ್ದರು. ಕೂಡಲೇ ಅವರನ್ನು ಆಂಬುಲೆನ್ಸ್‌ನಲ್ಲಿ ಸರ್ಕಾರಿ ದವಾಖಾನೆಗೆ ಕರೆದೊಯ್ಯಲಾಯಿತು. ಅಷ್ಟೊತ್ತಿಗಾಗಲೇ ಎದೆನೋವು ಕಾಣಿಸಿಕೊಂಡಿದ್ದರಿಂದ ಹುಬ್ಬಳ್ಳಿಯ ಕಿಮ್ಸ್‌ಗೆ ಕರೆತಂದು ಚಿಕಿತ್ಸೆಗೆ ದಾಖಲಿಸಲಾಗಿತ್ತು.

ಟಿಆರ್‌ಪಿ ಮತ್ತು ಮುಂಚೂಣಿಯ ಧಾವಂತಕ್ಕೆ ಬೀಳುವ ಮಾಧ್ಯಮಗಳು ಇಲ್ಲೂ ಒಂದು ಯಡವಟ್ಟು ಮಾಡಿದ್ದವು. ಬಸವರಾಜ ಸಾಬಳೆ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾದ ದಿನವೇ ಕಾಕತಾಳೀಯವೆಂಬಂತೆ ಚಿತ್ತರಂಜನ್ ಕಲ್ಲಣ್ಣವರ ಸಾವನ್ನಪ್ಪಿದ್ದರು. ತಾವೇ ಮೊದಲು ಸುದ್ದಿ ಪ್ರಸಾರ ಮಾಡಬೇಕೆಂಬ ಆತುರದಲ್ಲಿ ಎರಡು ಟೀವಿ ಚಾನೆಲ್‌ಗಳು 'ಕಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯಲು ಬಂದಿದ್ದ ರೈತ ಹೋರಾಟಗಾರ ಬಸವರಾಜ ಸಾಬಳೆ ನಿಧನರಾಗಿದ್ದಾರೆ' ಎಂಬ ಸುದ್ದಿಯನ್ನು ಬಿತ್ತರಿಸಿದ್ದವು. ಒಂದು ದಿನಪತ್ರಿಕೆ (ಸಂಯುಕ್ತ ಕರ್ನಾಟಕ) ಕೂಡಾ ಇದೇ ಸುದ್ದಿಯನ್ನು ಛಾಪಿಸಿತ್ತು. ಇದರಿಂದಾಗಿ ಹೋರಾಟನಿರತ ರೈತರು ಆತಂಕಕ್ಕೀಡಾಗಿದ್ದರು. ಮೊದಲೇ ಕಳಸಾ ಹೋರಾಟದಿಂದ ಕುದ್ದು ಹೋಗಿರುವ ನರಗುಂದ ತನ್ನ ರೈತ ನಾಯಕ ನಿಧನರಾದರೆಂಬ ಸುಳ್ಳು ಸುದ್ದಿ ತಲುಪುತ್ತಿದ್ದಂತೆ ಹೊತ್ತಿ ಉರಿಯುವ ಮುನ್ಸೂಚನೆಗಳನ್ನು ಹೊರಹಾಕಿತ್ತು. ಕೊನೆಗೆ ಅದೇ ಟೀವಿ ಚಾನೆಲ್‌ಗಳು ಕಿಮ್ಸ್‌ನಲ್ಲಿ ಚೇತರಿಸಿಕೊಂಡಿರುವ ಬಸವರಾಜ ಸಾಬಳೆ ಅವರಿಂದ ಶಾಂತತೆ ಕಾಪಾಡಿಕೊಳ್ಳಲು ಮನವಿ ಮಾಡಿಸುವ ಮೂಲಕ ಪರಿಸ್ಥಿತಿ ತಿಳಿಯಾಗಿಸಬೇಕಾಗಿ ಬಂದಿತ್ತು.

■ ಹುಬ್ಬಳ್ಳಿಯಾಂವ್

ಭಲೇ ಹುಚ್ಚಾ!



* ನನ್ನ ಬಿಟ್ಟು ರಮ್ಯಾ ಬೇರೆ ಯಾರನ್ನೇ ಮದುವೆಯಾದ್ರೂ ಆತನ್ನ ನಾನೇ ಮರ್ಡರ್ ಮಾಡ್ತೀನಿ...!
* ನನ್ನ ಮದುವೆಯಾಗೋಕ್ಕೆ ಮಿಲಿಯನ್‌ಗಟ್ಟಲೇ ಹುಡುಗೀರು ಕ್ಯೂ ನಿಂತವ್ರೆ!
* ಐಟಂ ಸಾಂಗ್ ಬ್ಯಾನ್ ಮಾಡ್ತೀನಿ.
* ನನ್ ಎಕ್ಕಡಾ ಯಾರಾದ್ರೂ ಹೆಣ್ ಮಕ್ಕಳನ್ನ ಚುಡಾಯಿಸಿದ್ರೆ ವೆಂಕಟ್ ಸೇನೆಯವ್ರು ಕೈಕಾಲು ಮುರೀತಾರೆ.
* 'ಬರೀ ಬೇಳೆ ಸಾರು ಮುದ್ದೆ ಮಾಡ್ದೆ ಅಂತ ಇಲ್ಲದಿರೋ ಡೈಲಾಗ್ ಏನಾದ್ರೂ ಹೊಡದ್ರೆ ನನ್ ಮಗಂದು ನನ್ ಎಕ್ಕಡಾನೂ ಕಿಚನ್ ಒಳಿಕ್ಕೆ ಹೋಗಲ್ಲ...!' ಇದು ಮೊನ್ನೆಯಷ್ಟೇ ಮದುವೆಯಾದ ಯುವಪ್ರೇಮಿಗಳಿಬ್ಬರು ಬಿಗ್‌ಬಾಸ್ ಪ್ರೋಗ್ರಾಂ ಅನ್ನು ಕಿಚಾಯಿಸಿದ ರೀತಿ.
* ವಿಜಯನಗರದ ಇಂದ್ರಪ್ರಸ್ಥ ಹೋಟೇಲ್ ಹಿಂಭಾಗದ ರಸ್ತೆಯ ಟೀ ಅಂಗಡಿಯೊಂದರ ಮುಂದೆ ಮಟಮಟ ಮಧ್ಯಾಹ್ನವೇ ಕ್ರಿಕೆಟ್ ಮ್ಯಾಚೊಂದನ್ನು ಟೀವಿಯಲ್ಲಿ ನೋಡಲೆಂದು ಫುಟ್‌ಪಾತ್‌ನಲ್ಲಿ ಜನ ಕಿಕ್ಕಿರಿದಂತೆ ಹದಿನೈದಿಪ್ಪತ್ತು ಮಂದಿಯ ಗುಂಪು ಸೇರಿದೆ. ಅದು ಟೀ ಅಂಗಡಿಯಲ್ಲಿದ್ದ ಟೀವೀಲಿ ಬರುತ್ತಿದ್ದ ಬಿಗ್‌ಬಾಸ್ ಕಾರ್ಯಕ್ರಮದ ರೀ ಟೆಲಿಕಾಸ್ಟ್ ನೋಡಲೆಂದು ಕಿಕ್ಕಿರಿದ ಹಿಂಡು.
* ಯಾವುದೇ ಕ್ಷೌರದಂಗಡಿಯನ್ನು ಹೊಕ್ಕರೂ ಅಲ್ಲಿನ ಟೀವಿಯಲ್ಲಿ ಒಂದೋ ನ್ಯೂಸ್ ಚಾನಲ್ಲುಗಳಲ್ಲಿ ಬರುವ ಹುಚ್ಚ ವೆಂಕಟ್ ಕುರಿತ ವಿಶೇಷ ಸುದ್ದಿಯಿರುತ್ತದೆ ಅಥವಾ ಯೂ ಟ್ಯೂಬ್‌ನಿಂದ ಡೌನ್‌ಲೋಡ್ ಮಾಡಿಕೊಂಡ ಆತನ ವಿಶೇಷ ಸಂದರ್ಶನಗಳನ್ನೇ ಪುನರಪಿ ನೋಡುತ್ತಿರುತ್ತಾರೆ.
* ಆಟೋ, ಬಸ್, ಪೊಲೀಸ್‌ಸ್ಟೇಷನ್, ಬಸ್‌ಸ್ಟಾಂಡ್ ಎಲ್ಲೇ ಕಿವಿಗೊಟ್ಟರೂ 'ನನ್ ಮಗಂದ್', 'ನನ್ ಎಕ್ಕಡಾ' ಡೈಲಾಗ್ ಕೇಳಿಬಂತೆಂದರೆ ಅದು ಹುಚ್ಚಾ ವೆಂಕಟ್ ಕುರಿತದ್ದೇ ಹರಟೆ ಎಂದರ್ಥ!
* ಹುಚ್ಚಾ ವೆಂಕಟ್ ಸೇನೆ ಬ್ಯಾನ್ ಮಾಡುವಂತೆ ವಾಟಾಳ್ ನಾಗರಾಜ್ ಕತ್ತೆ ಮೆರವಣಿಗೆ ಮಾಡಿದರೆಂಬುದು ಒಂದು ಸುದ್ದಿಯಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹುಚ್ಚಾ ವೆಂಕಟ್ ಅಭಿಮಾನಿಯಾಗಿ ನನ್ ಎಕ್ಕಾ ಅಂತ ವಿರೋಧ ಪಕ್ಷಗಳ ಮೇಲೆ ಕಿಡಿಕಾರಿದರೆಂದು ಮತ್ತೊಂದು ಸುದ್ದಿ.
* ಉಪ್ಪಿ ಅಭಿಮಾನಿಗಳಿಗೂ ಹುಚ್ಚಾ ವೆಂಕಟ್ ಸೇನೆಯ ಹುಡುಗರಿಗೂ ಗಾಂಧಿನಗರದ ಕಾನಿಷ್ಕಾ ಸಂದಿಯಲ್ಲಿ ಹೊಡೆದಾಟವಾಯಿತೆಂಬುದು ಮಗದೊಂದು ಸುದ್ದಿ...!

ವಾಟಾಳ್ ತನ್ನ ಜೀವಿತದುದ್ದಕ್ಕೂ ಟೋಪಿ, ಕೂಲಿಂಗ್ ಗ್ಲಾಸ್, ಬುರ್ಖಾ ಧರಿಸಿ ಕತ್ತೆ, ಹಂದಿ, ಕೋಣಗಳ ಮೆರವಣಿಗೆ ತೆಗೆದು ಹರತಾಳ, ಬಂದ್ ನಡೆಸಿಯೂ ಗಳಿಸಲಾಗದಷ್ಟು ಅಭಿಮಾನಿಗಳನ್ನು, ಉಪೇಂದ್ರ ಏನೆಲ್ಲ ಗಿಮಿಕ್ ಮಾಡಿಯೂ ತನ್ನ ಜನ್ಮಾಪಿ ಸೃಷ್ಟಿಸಲಾಗಂಥ ಅಲೆಯನ್ನು, ಜಗ್ಗೇಶ್ ಈ ಪಾಟಿ ಸಿನಿಮಾಗಳನ್ನು ಮಾಡಿಯೂ ಹುಟ್ಟಿಸಲಾಗದ ಹುಚ್ಚನ್ನು ಕೇವಲ ಒಂದೇ ವರ್ಷದಲ್ಲಿ ಸಾಧಿಸಿದ್ದಾನೆ ಹುಚ್ಚಾ ವೆಂಕಟ್. ಅದನ್ನು ಮಾಸ್ ಹಿಸ್ಟೀರಿಯಾ ಎನ್ನಬೇಕೊ ಸಮೂಹ ಸನ್ನಿಯೆನ್ನಬೇಕೋ ಮನಃಶಾಸ್ತ್ರಜ್ಞರಿಗೇ ಗೊತ್ತಾಗುತ್ತಿಲ್ಲ. ಈ ಹುಚ್ಚಾ ವೆಂಕಟ್ ಎಂಬಾತ ಹುಚ್ಚನೋ, ಪೆಚ್ಚನೋ, ಮುಗ್ಧನೋ ಅಥವಾ ಹಾಗೆ ನಟಿಸಿ ಜನರನ್ನೆಲ್ಲ ಹುಚ್ಚರನ್ನಾಗಿಸ ಹೊರಟ ಪ್ರಳಯಾಂತಕನೋ ಅರ್ಥವಾಗುತ್ತಿಲ್ಲ.

ಸರ್ವಂ ಹುಚ್ಚಾಮಯಂ....

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರತಿ ರಾತ್ರಿ ಎಂಟಾಯಿತೆಂದರೆ ಬಿಗ್‌ಬಾಸ್ ರಿಯಾಲಿಟಿ ಷೋ ಶುರುವಾಗುತ್ತದೆ. ಅದರ ರೀ ಟೆಲಿಕಾಸ್ಟ್ ರಾತ್ರಿ ಹನ್ನೊಂದಕ್ಕಿರುತ್ತದೆ. ಇದನ್ನೇ ಮರುದಿನ ಬೆಳಗ್ಗೆ 10 ಮತ್ತು ಮಧ್ಯಾಹ್ನ 3ಕ್ಕೆ ಮರುಪ್ರಸರಿಸಲಾಗುತ್ತೆ. ಹಕೀಕತ್ತೇನೆಂದರೆ ಯಾವ್ಯಾವ ಸಮಯದಲ್ಲಿ ಕಲರ್ಸ್ ಕನ್ನಡ ವಾಹಿನಿಯಲ್ಲಿ ಬಿಗ್‌ಬಾಸ್ ಬರುತ್ತಿರುತ್ತೋ ಅದೇ ಹೊತ್ತಿಗೆ ಮಿಕ್ಕೆಲ್ಲ ಚಾನಲ್‌ಗಳ ಟಿಆರ್‌ಪಿ ನೆಲಕಚ್ಚಿರುತ್ತದೆ!

ಸಂಜೆ ಎಂಟರಿಂದ ರಾತ್ರಿ ಹನ್ನೊಂದರವರೆಗಿನ ಎಲ್ಲಾ ಟೀವಿ ಚಾನಲ್ಲುಗಳ ಎಲ್ಲಾ ಜನಪ್ರಿಯ ಧಾರಾವಾಹಿಗಳ ಟಿಆರ್‌ಪಿಯೂ ಬಿಗ್‌ಬಾಸ್‌ನಿಂದಾಗಿ ಬಿದ್ದು ಹೋಗಿದೆ. ಇನ್ನು ನ್ಯೂಸ್ ಚಾನಲ್ಲುಗಳ ದುರ್ಗತಿ ಅದ್ಯಾವ ಮಟ್ಟದ್ದೆಂದರೆ ಪ್ರತಿ ಎರಡು ಗಂಟೆಗೊಮ್ಮೆ ಒಂದಲ್ಲ ಒಂದು ನ್ಯೂಸ್ ಚಾನಲ್ಲಿನಲ್ಲಿ ಬಿಗ್‌ಬಾಸ್ ಷೋನದ್ದೇ ಮೂಳೆ ಚಕ್ಕಳ ಮೆಲ್ಲುವ ಕಾರ್ಯಕ್ರಮವಿರುತ್ತದೆ. ಇವತ್ತು ಹುಚ್ಚಾ ವೆಂಕಟ್‌ನ ಡ್ರೆಸ್ ಹೇಗಿತ್ತು, ಅದನ್ನು ಪ್ರಶ್ನಿಸಿದ ಪೂಜಾ ಗಾಂಧಿಯ ಪಾಡೇನಾಯಿತು, ಹುಚ್ಚಾ ವೆಂಕಟ್ ಇವತ್ತು ಏನೇನ್ಮಾಡಿದ, ಏನೇನ್ ಮಾತಾಡಿದ? ಆತನ ಕೆಂಗಣ್ಣಿಗೆ ಬಲಿಯಾದ ಇವತ್ತಿನ ಮಿಕ ಯಾರು? ಇತ್ಯಾದಿ ಒಂದರ ಮೇಲೊಂದು ಹುಚ್ಚಾಲಾಪನೆಗಳೇ ಕನ್ನಡದ ನ್ಯೂಸ್ ಚಾನಲ್ಲುಗಳನ್ನಾವರಿಸಿಬಿಟ್ಟವೆ.

ಹುಚ್ಚಾ ವೆಂಕಟನ ಮ್ಯಾನರಿಸಂ, ಆಂಗಿಕ ಚೇಷ್ಟೆಗಳು, ಆತನ ಹೇರ್ ಸ್ಟೈಲ್, ಹೊಡೆಯುವ ಡೈಲಾಗು, ಮಾತಿನ ಓಘ, ಕಣ್ಣಿನ ಚಲನೆ, ಮುಖಭಾವ ಬಾಡಿಲಾಂಗ್ವೇಜ್‌ಗಳೆಲ್ಲವೂ ಜನಕ್ಕೆ ಬಿಟ್ಟೀ ಮನರಂಜನೆಯ ವಸ್ತುಗಳೇ. ಸಾಮಾಜಿಕ ಜಾಲತಾಣಗಳ ವಿಷಯ ಅವುಗಳ ಪ್ರಭಾವ ಪ್ರತಿಕ್ರಿಯೆಗಳ ಅರಿವಿದ್ದ ಯಾರಿಗಾದರೂ ಹುಚ್ಚಾ ವೆಂಕಟ್ ಹುಟ್ಟು ಹಾಕಿದ ಸಮೂಹ ಸನ್ನಿ ಅರ್ಥವಾಗಲೇ ಬೇಕು. ಸದ್ಯ ಯೂ ಟ್ಯೂಬ್ ಆನ್ ಮಾಡಿಬಿಟ್ಟರೆ ಸಾಕು ಅಲ್ಲಿ ಹುಚ್ಚನ ಹೊರತುಪಡಿಸಿ ಮತ್ತೇನೂ ಕಾಣಿಸುತ್ತಿಲ್ಲ. ಫೇಸ್‌ಬುಕ್, ವಾಟ್ಸಪ್‌ಗಳಲ್ಲಂತೂ ಹುಚ್ಚನದ್ದೇ ಅಭ್ಭಟ....

ಅಮೆರಿಕದಲ್ಲೂ...?

ಹುಚ್ಚಾ ವೆಂಕಟ್ ಅಮೆರಿಕನ್ ಫ್ಯಾನ್ಸ್ ಎಂಬುದು ಫೇಸ್‌ಬುಕ್‌ನ ವಿಶೇಷ ಖಾತೆಯೊಂದರ ಹೆಸರು. ಹುಚ್ಚಾ ವೆಂಕಟ್ ಪಾಕಿಸ್ತಾನ್ ಫ್ಯಾನ್ಸ್, ಹುಚ್ಚಾ ವೆಂಕಟ್ ಅಫಘಾನಿಸ್ತಾನ್ ಫ್ಯಾನ್ಸ್, ಹುಚ್ಚಾ ವೆಂಕಟ್ ಶ್ರೀಲಂಕನ್ ಫ್ಯಾನ್ಸ್, ಹುಚ್ಚಾ ವೆಂಕಟ್ ಆಫ್ರಿಕನ್ ಫ್ಯಾನ್ಸ್ ಇತ್ಯಾದಿ ಅನೇಕ ದೇಶಗಳ ಹೆಸರಲ್ಲಿ ಹುಚ್ಚನ ಅಭಿಮಾನಿ ಸಂಘಗಳು ಕ್ಲಬ್ಬುಗಳ ಫೇಸ್‌ಬುಕ್ ಖಾತೆಗಳೇನೋ ಚಾಲ್ತಿಯಲ್ಲಿವೆ. ಆತಾರ್ಕಿಕವಾಗಿ ಯೋಚಿಸಿದರೆ ವಿಶ್ವಾದ್ಯಂತ ಹುಚ್ಚಾ ವೆಂಕಟ್ ಅಭಿಮಾನಿಗಳಿದ್ದಾರೆಂದೇ ಎಂಥವರಿಗೂ ಭಾಸವಾಗುತ್ತದೆ. ತೀರ ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅಮೇರಿಕಕ್ಕೆ ಭೇಟಿ ಕೊಟ್ಟು ಅಬ್ರಹಾಂ ಲಿಂಕನ್ ಪ್ರತಿಮೆಯೆದುರು ಮೋದಿ ಮತ್ತು ಅಮೆರಿಕ ಅಧ್ಯಕ್ಷ ಓಬಾಮರ ಹಸ್ತಲಾಘವ ನಡೆಯಿತಲ್ಲ, ಆದರ ಫೋಟೋಗಳು ನಕಲಿ ಮೀಡಿಯಾಗಳಲ್ಲೆಲ್ಲ ಮಿಂಚಾಡಿದ್ದೂ ನಿಜ ತಾನೆ?

ಹಾಗೆಂದು ಅಮೆರಿಕದ ಹುಚ್ಚಾ ವೆಂಕಟ್ ಅಭಿಮಾನಿಗಳಿಗದು ಯಾವ ಮಹಾ? ಅವರು ವಿಶಿಷ್ಟ ಫೋಟೋ ಒಂದನ್ನು ತಮ್ಮ ಫೇಸ್‌ಬುಕ್‌ನಲ್ಲಿ ಹಾಕಿದ್ದಾರೆ. ಮೋದಿ ಮತ್ತು ಓಬಾಮ ಲಿಂಕನ್ ಪ್ರತಿಮೆ ಮುಂದೆ ನಿಂತು ಕೈ ಮಿಲಾಯಿಸಿದ್ದು ಹಾಗೇ ಇದೆ. ಆದರೆ ಲಿಂಕನ್ ಬದಲಿಗೆ ಹಿಂದಿದ್ದ ಶಿಲಾ ಪ್ರತಿಮೆಗೆ ಹುಚ್ಚಾ ವೆಂಕಟನ ತಲೆಯಿದೆ!

ಇದು ಹುಚ್ಚನ ಕುರಿತಂತೆ ಫೇಸ್‌ಬುಕ್, ವಾಟ್ಸಪ್, ಯೂ ಟ್ಯೂಬ್‌ಗಳಲ್ಲಿ ಇಟ್ಟಾಡುವ spools ಅಂದರೆ ಕುಚೋದ್ಯ, ಕುಚೇಷ್ಟೆಗಳ ಒಂದು ಸ್ಯಾಂಪಲ್ಲು. ಹಾ ಸುದೀಪ್ ಈ ಹಿಂದೆ ಹುಚ್ಚ ಎಂಬ ಚಿತ್ರದಲ್ಲಿ ನಟಿಸಿರಲಿಲ್ಲವೆ? ಹಾ ಹುಚ್ಚಾ ವೆಂಕಟ್ ಅಭಿಮಾನಿಗಳು ಸುದೀಪ್‌ನನ್ನು ನೀನು ರೀಮೇಕ್ ಹುಚ್ಚನಾದ ನಮ್ಮ ವೆಂಕಟ್ ಸ್ವಮೇಕ್ ಹುಚ್ಚ ಕಣೋ ಎಂದು ಫೇಸ್‌ಬುಕ್‌ನ ಕಿಚಾಯಿಸಿದ್ದಾರೆ. ಉಪ್ಪಿಯನ್ನೂ ಹುಚ್ಚನ ಫ್ಯಾನ್ಸ್ ಬಿಟ್ಟಿಲ್ಲ. ಯಾವುದೋ ಕಾಲಕ್ಕೆ ಉಪೇಂದ್ರನ ಪಕ್ಕ ನಿಂತು ವೆಂಕಟ್ ತೆಗೆಸಿಕೊಂಡಿದ್ದ ಫೋಟೋ ಅನ್ನೇ ಫೇಸ್‌ಬುಕ್‌ಗೆ ಅಪಲೋಡ್ ಮಾಡಿ 'ಪ್ರೇಕ್ಷಕರನ್ನೇ ಬೈದು ಪ್ರಖ್ಯಾತರಾ ಇಬ್ಬರು ಮಹಾನ್ ವ್ಯಕ್ತಿಗಳು' ಎಂಬ ವಿಕಟ ಶೀರ್ಷಿಕೆ ಕೊಟ್ಟು ಮು ಉಡಾಯಿಸುತ್ತಾರೆ.

ಹುಚ್ಚಾ ಮೇನಿಯಾ

ಮಾರುಕಟ್ಟೆಯಲ್ಲಿ ಈರುಳ್ಳಿಯ ದರ ವಿಪರೀತೆಂದರೆ 'ನನ್ ಎಕ್ಕಡಾನ ಈರುಳ್ಳಿ ಮಾರುಕಟ್ಟೆಗೆ ಹೋಗಲ್ಲ...' ಎಂಬ ವ್ಯಂಗ್ಯ ಫೋಟೋಂದು ಫೇಸ್‌ಬುಕ್ ವಾಟ್ಸಪ್‌ಗಳಲ್ಲಿ ಮಿಂಚಲಾರಂಭಿಸುತ್ತದೆ. ಹುಚ್ಚಾ ವೆಂಕಟ್‌ನ ಅಭಿಮಾನಿಗಳೆಂದ ರಾತ್ರೋರಾತ್ರಿ ತಲೆಎತ್ತಿದ ಚಿತ್ರವಿಚಿತ್ರ ಗುಂಪುಗಳು, ಅವುಗಳು ಹುಟ್ಟುಹಾಕು ಸಾಮಾಜಿಕ ಚೇಷ್ಟೆಗಳು, ಹುಚ್ಚಾ ವೆಂಕಟ್ ಅಭಿಮಾನಿಗಳೆಂದು ಅವ ಹಾಡೊಂದನ್ನು ಸೃಷ್ಟಿಸಿ ಅದಕ್ಕೆ ಶಿಸ್ತಾಗಿ ಡ್ಯಾನ್ಸು ಅದನ್ನೇ ಯೂ ಟ್ಯೂಬ್ ಹಾಕುವುದು, ಇನ್ನಾರೋ ನೀಲಿ ಅಂಗಿ ತೊಟ್ಟು ಥೇಟ್ ವೆಂಕಟ್‌ನಂತೆಯೆ ನನ್ ಎಕ್ಕಡಾ ಎಂದು ರೌದ್ರಾವತಾರ ತಾಳುವುದು- ಹೀಗೆ ಫೇಸ್‌ಬುಕ್ ವಾಟ್ಸಪ್, ಯೂಟ್ಯೂಬ್ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಯಾವೊ ಸ್ಟಾರ್, ಯಾವೊಬ್ಬ ನಾಯಕ, ಯಾರೇ ಸೆಲೆಬ್ರಿಟಿಗಿಂತಲೂ ಹೆಚ್ಚು ಜನಾನುಕರ ವ್ಯಕ್ತವಾಗುವುದು ಈ ಹುಚ್ಚನ ಹೆಸರಿಗೇ!

ಹಾಲಿವುಡ್, ಬಾಲಿವುಡ್, ಸ್ಯಾಂಡಲ್‌ವುಡ್‌ನ ಬೇರೆ ಯಾರೇ ನಟನನ್ ಅನುಕರಿಸದಷ್ಟು ಜನ ಹುಚ್ಚಾ ವೆಂಕಟ್‌ನನ್ನು ಅನುಸರಿಸುತ್ತಾರೆ. ನಂಬಿ ಬ ಸದ್ಯ ಪ್ರತಿನಿತ್ಯ ಯೂಟ್ಯೂಬ್‌ನಲ್ಲಿ ಕಮ್ಮಿಯೆಂದರೂ ಒಂದು ಲಕ್ಷ ಮಂ ಹುಚ್ಚಾ ವೆಂಕಟ್‌ನ ಬಿಗ್‌ಬಾಸ್ ಹುಚ್ಚಾಟಗಳನ್ನು 'ಲೈಕ್' ಮಾಡುತ್ತಿದ್ದಾ ದಿನವೊಂದಕ್ಕೆ ಲಕ್ಷ ಮಂದಿ ಕೇವಲ ಸಾಮಾಜಿಕ ಜಾಲತಾಣಗಳಲ್ಲಿ ಈತನ ಅನುಕರಿಸುತ್ತಿದ್ದಾರೆಂದರೆ ಇನ್ನು ಟೀವಿ, ಪತ್ರಿಕೆಗಳು, ಹೋಟೆಲ್, ಬಸ್‌ಸ್ಟಾಂಡ್ ಗಲ್ಲಿ, ಸಂಧಿ, ಮನೆಮಠಗಳಲ್ಲಿ ಅದೆಷ್ಟು ಮಂದಿ ಈ ಹುಚ್ಚನನ್ನು ಮೆಚ್ಚಬೇಕ


ಇದನ್ನೇ ಹುಚ್ಚಾ ಮೇನಿಯಾ ಅನ್ನುವುದು. ಪ್ರಶ್ನೆಯೆಂದರೆ ಇಲ್ಲಿ ಹುಚ್ಚರ್ಯಾ ಪೆಚ್ಚರ್ಯಾರು? ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಈ ಹು ವೆಂಕಟ್ ನಿಜಕ್ಕೂ ಹುಚ್ಚನಾ, ಮುಗ್ಧನಾ, ಅರೆ ಹುಚ್ಚನಾ, ಅಮಾಯಕನ ಲೋಕಜ್ಞಾನದ ಅರಿವಿಲ್ಲದ ಗಮಾರನಾ ಅಥವಾ ಹುಚ್ಚನಂತೆ ನಟಿಸಿ ಲೋಕವ ಮೂರ್ಖರನ್ನಾಗಿಸಹೊರಟ ಪ್ರಳಯಾಂತಕನಾ?

ಇದು ಯಾರಿಗೂ ಅರ್ಥವಾಗದ, ಗ್ರಹಿಸಲಾಗದ, ತರ್ಕಕ್ಕೆ ನಿಲುಕ ಪ್ರಶ್ನೆಯೆ. ತೀರ ಇತ್ತೀಚೆಗೆ ಅಂದರೆ ಇಲ್ಲಿಗೆ ವರ್ಷಕ್ಕೂ ಮುನ್ನ ಇಂಥಾದ್ದೊಂ ಹೆಸರಿದೆ ಎಂದಾಗಲಿ, ಹೀಗೊಬ್ಬ ಆಸಾಮಿಯಿದ್ದಾನೆಂದಾಗಲಿ ಕರ್ನಾಟಕಕ್ಕಿರ ಗಾಂಧಿನಗರದ ನರಪಿಳ್ಳೆಗೂ ಗೊತ್ತಿರಲಿಲ್ಲ. ಅದು ಶುರುವಾಗಿದ್ದು ನಟಿ ರಮ ಪೊಲೀಸರಿಗೆ ಕೊಟ್ಟ ದೂರೊಂದರ ಮೂಲಕ. ಯಾರೋ ವೆಂಕಟ್ ಹೆಸ ಅಸಿಸ್ಟಂಟ್ ಡೈರೆಕ್ಟರ್ ಓರ್ವ ತನ್ನ ಬಗ್ಗೆ ಅಶ್ಲೀಲವಾಗಿ ಮಾತಾಡು ಸಾರ್ವಜನಿಕವಾಗಿ ತನ್ನ ಮಾನಕ್ಕೆ ಹಾನಿ ಮಾಡುತ್ತಿದ್ದಾನೆಂದು ರಮ್ಯಾ ಖುದ ಪೊಲೀಸ್ ಕಮೀಷನರ್ ಎಂ.ಎನ್. ರೆಡ್ಡಿಯವರಿಗೆ ದೂರು ನೀಡಿದ್ದು ಕಾಡ್ಗಿಚ್ಚಿನ ಸುದ್ದಿಯಾಯಿತು.

ರಮ್ಯಾ ಕೊಟ್ಟ ದೂರು

ಆಗ ಗಾಂಧಿನಗರ ತಲೆಕೆಡಿಸಿಕೊಂಡಿದ್ದು 'ಸ್ವತಂತ್ರ ಪಾಳ್ಯ' ಚಿತ್ರದ ಸೋಕಾ ಡೈರೆಕ್ಟರ್ ವೆಂಕಟ್ ಅಲಿಯಾಸ್ ಎಲ್. ವೆಂಕಟೇಶ್ ಉರ್ಫ್ ವೆಂಕಟೇಗೌ ಬಗ್ಗೆ ಅಲ್ಲಿಯತನಕ ಈತ ಯಾರು, ಎತ್ತ ಏನೆಂಬುದೇ ಯಾರಿಗೂ ಗೊತ್ತಿರಲಿ ರಮ್ಯಾ ನೀಡಿದ ದೂರಿನ ತನಿಖೆ ಮಾಡಿದ್ದು ಆಗ ಅಶೋಕ್‌ನಗರ ಠಾಣೆ ಇನ್ಸ್‌ಪೆಕ್ಟರಾಗಿದ್ದ ಮುರಳಿ. ವೆಂಕಟ್‌ನನ್ನು ಕರೆಸಿ ಏನಪ್ಪಾ ಎಂದು ಕೆದಕುತ್ತಿದ್ದ ಅರ್ಥವಾಗಿದ್ದು ಇದು ಮಾಮೂಲಲ್ಲದ ವಿಶೇಷ ಕೇಸೆಂದು.


ನಾನು ರಮ್ಯಾನ್ನ ತುಂಬಾ ಪ್ರೀತಿಸ್ತೀನಿ ಸಾರ್. ಸತ್ಯವಾಗ್ಲೂ ನಾನು ಆಕೆ ಮದುವೆಯಾಗಿದ್ದೀನಿ. ಬೇಕಾದ್ರೆ ನೀವೇ ಆಕೇನ್ನ ಕೇಳಿ ನೋಡಿ. ಅವ ನನ್ನನ್ನ ಮದುವೆಯಾಗಿದ್ದೀನಿ ಅಂತ ಒಪ್ಪಿಕೊಂಡ್ರೆ ನಾನು ಕೂ ಮದುವೆಯಾಗಿದ್ದೀನಿ ಅಂತೀನಿ. ಹಾಗೊಮ್ಮೆ ವೆಂಕಟನ್ನ ನಾನು ಮದುವೆ



ಪ್ರೇಕ್ಷಕನನ್ನೆ ಬೈಕೊಂಡು famous ಆದ



2 ಮಹಾನ್ ವ್ಯಕ್ತಿಗಳು 1ದೆ photoದಲ್ಲಿ



ಹುಚ್ಚಾ ವೆಂಕಟ್‌ರ ಅಣ್ಣ ಕುಶಾಲ್ ನಿರ್ಮಿಸಿದ ಚಿತ್ರ

ರಮ್ಯಾ ಅವ್ರು ಹೇಳಿಬಿಟ್ರೆ ನಾನು ಕೂಡ ರಮ್ಯಾಗೂ ನನಗೂ ಇಲ್ಲ ಅಂತ ಅನೌನ್ಸ್ ಮಾಡಿಬಿಡ್ತೀನಿ!

...ಬಾಯಿಂದ ಬರುತ್ತಿದ್ದ ಮಾತುಗಳನ್ನು ಕೇಳುತ್ತಿದ್ದಂತೆ ಪೊಲೀಸರಿಗೆ ಮೆಂಟಲ್ ಕೇಸೆಂಬುದು ಗ್ಯಾರಂಟಿಯಾಗಿತ್ತು. ಇನ್ನು ನಿಮ್ಹಾನ್ಸ್‌ಗೆ ...ತಾವೇ ಅಡ್ಮಿಟ್ ಮಾಡಿಸಿ, ಎಲ್ಲಾ ಜವಾಬ್ದಾರಿ ತೆಗೆದುಕೊಳ್ಳುವ ... ತಾವೇ ಮುಚ್ಚಳಿಕೆ ಬರೆದು ಸಹಿ ಹಾಕಿಸಿಕೊಂಡಿದ್ದೇ 'ನಮಸ್ಕಾರ... ...ಡಿ ಸಾರ್...' ಎಂದು ಬಿಟ್ಟರು. ಹುಚ್ಚನ ಕೆಣಕಲು ಹೋಗಿ ...ಡವಟ್ಟಾಗುತ್ತೋ ಎಂದು ರಮ್ಯಾ ಕೂಡ ಅಲ್ಲಿಗೇ ತೆಪ್ಪಗಾದರು. ...ಕಟ್ ಸುಮ್ಮನಾಗಬೇಕಲ್ಲ. ರಮ್ಯಾ ಕಾರಣಕ್ಕೆ ಸಿಕ್ಕ ಅಷ್ಟಿಷ್ಟು ... ಬಂಡವಾಳವಾಗಿಸಿಕೊಳ್ಳಲು ಹೊರಟ ವೆಂಕಟ್ ಈ ಬಾರಿ ...ದುಸ್ಸಾಹಸಕ್ಕೆ ಕೈಯಿಟ್ಟದ್ದು. ಅದೇ ಹುಚ್ಚಾ ವೆಂಕಟ್!

ಮೆಂಟಲ್ ಮಂಜ!

...ಣ ಸುರಿದು, ತಾನೇ ನಿರ್ದೇಶಿಸಿ, ಹೀರೋ, ಪ್ರೊಡ್ಯೂಸರ್, ...ತೆ, ಚಿತ್ರಕತೆ ಎಲ್ಲವನ್ನೂ ತಾನೇ ಬರೆದು ಅದಕ್ಕೆ ತನ್ನದೇ ...ಕೊಟ್ಟು ಸೃಷ್ಟಿಸಿದ 'ಹುಚ್ಚ ವೆಂಕಟ್' ಬಾಕ್ಸ್ ಆಫೀಸ್ ...ತ್ತದೆ ಎಂದೇ ವೆಂಕಟ್ ಲೆಕ್ಕ ಹಾಕಿದ್ದ. ಹಾಗೆ ಹುಚ್ಚುಚ್ಚಾಗಿ ...ಕ್ಕೂ ಕಾರಣವಿತ್ತು. ಅದು ಮೆಂಟಲ್ ಮಂಜ ಎಂಬ ಮತ್ತೊಂದು ...ಮ ಚಿತ್ರದ ಪ್ರಭಾವ. ಉಪ್ಪಿಯ ಓಂ, ಎ, ಉಪೇಂದ್ರ, ಸ್ವಸ್ತಿಕ್ ...ನೋವಿಕಾರಿ ಚಿತ್ರಗಳಿಂದ ಹುಟ್ಟಿದ್ದು ಅದೇ ಟೈಪಿನಲ್ಲಿ 'ಮೆಂಟಲ್ ...ನ ಚಿತ್ರವೊಂದಕ್ಕೆ ಚಳವಳಿ ನಾರಾಯಣನ ಮಗ ಅರ್ಜುನ್ ...ವೆಂಕಟ್ ಅದಕ್ಕೆ ಅಸಿಸ್ಟಂಟ್ ಡೈರೆಕ್ಟರ್. ತಲೆಕೆಟ್ಟ ಥಿಯರಿಗಳು, ...ಮ್ಯಾನರಿಸಂ, ಹುಚ್ಚುಚ್ಚು ಸಂಭಾಷಣೆಯಿಂದಾಗಿಯೇ ಮೆಂಟಲ್ ...ಾಗಿತ್ತು. ತಾನು ತೆಗೆವ ಚಿತ್ರಕ್ಕೆ ಮೆಂಟಲ್ ವೆಂಕಟ್ ಎಂದೇ ...ವೆಂಕಟ್ ಯೋಚಿಸಿದ್ದ. ಎಲ್ಲಿ ಮೆಂಟಲ್ ಮಂಜದ ಅರ್ಜುನ್ ...ನೋ ಎಂದು ಅದಕ್ಕೆ 'ಹುಚ್ಚ ವೆಂಕಟ್' ಎಂದು ಹೆಸರಿಟ್ಟ. ...! ಸ್ಟಾರ್‌ಗಳ ಸಿನಿಮಾಗಳಿದ್ದರೂ ಅದ್ಯಾವುದಕ್ಕೂ ಕೊರತೆಯಿಲ್ಲದಂತೆ ...ಕಟ್ ಬಿಡುಗಡೆಯಾಯಿತು. ಮೊದಲನೇ ಷೋಗೇ ಇಪ್ಪತ್ತು ...ಕ್ಷಕರು!

...ದ ಹೆಸರೇನೋ 'ಹುಚ್ಚ ವೆಂಕಟ್' ನಿಜ. ಅದು ಪ್ರೇಕ್ಷಕನನ್ನು ...ವ ಲೆಕ್ಕಹಾಕಿ ವೆಂಕಟ್ ಇಟ್ಟ ಹೆಸರಾದರೆ ಬಿಡುಗಡೆಗೆ ಸಿಕ್ಕ ...ಾರದಿಂದಾಗಿ ನಿಜಕ್ಕೂ ಹುಚ್ಚು ಹಿಡಿದದ್ದು ವೆಂಕಟ್‌ಗೆ. ಸಿನಿಮಾ ... ತೋಪಾಗಿ ಹೇಳಹೆಸರಿಲ್ಲದೆ ವೆಂಕಟ್ ತೆರೆಮರೆಗೆ ಸರಿದಿದ್ದರೆ ...ಚ್ಚಾವತಾರ' ಸಂಭವಿಸುತ್ತಲೇ ಇರಲಿಲ್ಲವೇನೊ. ಏಕೆಂದರೆ ವೆಂಕಟ್ ...ಡಿಟ್ಟಿದ್ದ ಆಸ್ತಿಯನ್ನೇ ಮಾರಿ ಸಿನಿಮಾಕ್ಕೆ ಸುರಿದಿದ್ದ. ಇಂದಿರಾನಗರದ ...ಂಟ್ರಾಕ್ಟರ್ ಲಕ್ಷ್ಮಣಗೌಡರ ಮೂವರು ಗಂಡು ನಾಲ್ವರು ಹೆಣ್ಣು ... ಕೊನೆಯವನೇ ವೆಂಕಟರಾಮ್ ಉರ್ಫ್ ವೆಂಕಟೇಶ್. ತನ್ನ ...ಗೆ ತಕ್ಕಮಟ್ಟಿಗೆ ಆಸ್ತಿ ಮಾಡಿಟ್ಟೇ ಲಕ್ಷ್ಮಣಗೌಡರು ಜವಾಬ್ದಾರಿ ... ತಾಯಿ ಗೌರಮ್ಮ ನಿಧನಾನಂತರ ಸಿನಿಮಾ ಹುಚ್ಚಿಗೆ ಬಿದ್ದ ... ನಗರದ ಅಪ್ಪ ಕೊಟ್ಟ ಸೈಟನ್ನೇ ಮಾರಿ ಹುಚ್ಚಾ ವೆಂಕಟ್

... ಮೊದಲ ಷೋಗೇ ಇಪ್ಪತ್ತು ಮಂದಿಯನ್ನು ಕಂಡನೋ ಎದೆ ... ವೆಂಕಟ್ ಅಕ್ಷರಶಃ ಹುಚ್ಚನಾಗಿಬಿಟ್ಟ. ಅದೇನು ಕಾಕತಾಳೀಯವೋ ... ಸಮಯ ಟೀವಿಯ ವರದಿಗಾರ್ತಿಯೊಬ್ಬಳು ಎದುರಾಗಿ ...ವನ್ನು ಪ್ರಶ್ನಿಸಿದ್ದಾಳೆ. ಅದೆಲ್ಲಿತ್ತೋ ಸಿಟ್ಟು ವರದಿಗಾರ್ತಿಯನ್ನು ... 'ನನ್ ಮಗಂದ್... ನನ್ ಎಕ್ಡಾ...' ಎಂದೆಲ್ಲಾ ಕೂಗಾಡಿಬಿಟ್ಟ. ... ವಾಚಾಮಗೋಚರ ಬೈದ. ತಾನು ಸಿನಿಮಾ ಮಾಡಿದ್ದೇ ... ನಟಿ ರಮ್ಯಾಗಾಗಿ, ಇಷ್ಟೆಲ್ಲ ಖರ್ಚು ಮಾಡಿ ತೆಗೆದ ... ರಮ್ಯಾ ಬರಬೇಕಿತ್ತು, ಮನುಷ್ಯತ್ವ ಇದ್ದಿದ್ದರೆ ಬರಬೇಕಿತ್ತು, ... ನಾಳೆ ಮಂಡ್ಯಕ್ಕೆ ಹೋಗ್ತೀನಿ... ಎಂದೆಲ್ಲಾ ಹುಚ್ಚುಚ್ಚಾಗಿ ...

...ಕ್ಷಾತ್ತಾಗಿ ಸಮಯ ಟೀವಿಯಲ್ಲಿ ಪ್ರಸಾರವಾಯಿತು. ಯಾವತ್ತೂ ...ದ ಹುಚ್ಚಾಟವನ್ನು ಕಂಡಿದ್ದೇ ಯೂಟ್ಯೂಬ್‌ನಲ್ಲಿ ಜನ ...ಕೊಡಗಿದರು. ಸಮಯ ವರದಿಗಾರ್ತಿಯ ಸಣ್ಣದೊಂದು ... ಫಲವಾಗಿ ಬೆಳಕಿಗೆ ಬಂದ ವೆಂಕಟ್‌ನ ಹುಚ್ಚಾಟ ಇವತ್ತು ... ದಾಟಿ ಬೆಂಗಳೂರು, ಕರ್ನಾಟಕದ ಎಲ್ಲೆ ಮೀರಿ ... ಕನ್ನಡಿಗರಲ್ಲೆಲ್ಲ ಹುಚ್ಚರನ್ನಾಗಿಸುವ ತನಕ ಬಂದು ನಿಂತಿದೆ. ... ಪಾತ್ರ ಮುಗಿಸೋ ಗೊತ್ತಾಗುತ್ತಿಲ್ಲ.

■ ರಾ. ಸೋಮನಾಥ್

ಯತ್ತ ಮುಂದಾಗಿ ನೋಡಿದ್ರೂ, ರಾಮನಿಗಿಂತ ನಾನೇ ಉತ್ತಮ ಸಾ!

ಥೂತ್ತೇರಿ

• ಯಾಹೂ

ರಾಮಾಯಣ ಹುಟ್ಟಿಕೊಂಡ ಕಾಲದಿಂದ ದೇಶದಾದ್ಯಂತ ರಾಮಮಂದಿರಗಳು, ರಾಮ ಭಜನೆಗಳು ಆರಂಭಗೊಂಡು ರಾಮನನ್ನೇ ದೇವರನ್ನಾಗಿ ಮಾಡಿಕೊಂಡು ಆರಾಧಿಸಿದ ಮನಸ್ಸುಗಳಿಗೆ ಆಘಾತವಾಗುವಂತೆ ಪ್ರೊ. ಭಗವಾನ್‌ರವರು "ರಾಮ ದೇವರಲ್ಲ. ಅವನನ್ನು ಪೂಜಿಸುವವರೂ ಅವನಂತೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ" ಎಂದು ಪುರೋಹಿತರ ಪುಳುಜುಟ್ಟಿನ ಮೇಲೆ ಬಾಂಬ್ ಎಸೆದುಬಿಟ್ಟಿದ್ದಾರಲ್ಲಾ, ಈ ಬಗ್ಗೆ ಯಾರನ್ನಾದರೂ ಮಾತನಾಡಿಸಿ ಭಗವಾನರಿಗೆ ತಕ್ಕ ಉತ್ತರ ಕೊಡಬೇಕೆನಿಸಿದಾಗ ಹೊಳೆದ ಹೆಸರೇ ವಾಟಿಸ್ಸೆ. ತಡಮಾಡದೆ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಟ್ರರ್ ಟರ್‍... ಟರ್.... ಟರ್...."

"ಹಲೋ ವಾಟಿಸ್ಸೆ, ನಾನು ಯಾಹು."

"ಏನ್ಸಾರ್ ಚನ್ನಾಗಿದ್ದೀರಾ?"

"ಎಲ್ಲಿದ್ದಿ ವಾಟಿಸ್ಸೆ?"

"ಭೂಮಿ ಮ್ಯಾಲೆ ಇದ್ದಿನಿ. ಅದೇನ್ಹೇಳಿ ಸಾ."

"ಭಗವಾನ್ ಗೊತ್ತ ನಿನಗೆ?"

"ಯಾವ ಭಗವಾನ್ ಸಾರ್? ಸುಮಾರು ಜನ ಅವ್ರೆ."

"ಅದೆ, ಶಂಕ್ರಾಚಾರಿ ವಬ್ಬ ಗೂಂಡಾ, ಭಗವದ್ಗೀತೆ ಸುಡಬೇಕು, ರಾಮ ಷಂಡ, ಕೃಷ್ಣ ಕಳ್ಳ ಅಂತರಲ್ಲ ಅವರು."

"ಓ ಅವ್ರುರು ಗೊತ್ತು ಬುಡಿ ಸಾ. ಇಲ್ಲಿಗೊಂದು ಸತಿ ಬಂದಿದ್ರು. ನಾನು ಅವ್ರುನ್ನ ಯಾರೊ ಶಾನುಭೋಗರ ಪೈಕಿ ಅನ್ನಕಂಡಿದ್ದೆ. ಅಮ್ಯಾಲೆ ಗೊತ್ತಾಯ್ತು, ಅವರು ನಮ್ಮೊರೆಯಾ ಅಂತ. ಅವ್ರುರದೇನು ಪ್ರಾಬ್ಲಂ ಸಾ?"

"ಏನಿಲ್ಲಾ, ಈ ರಾಮ ದೇವರಲ್ಲ, ಅವನು ಪೂಜೆ ಮಾಡಕ್ಕೆ ಯೋಗ್ಯ ಅಲ್ಲ, ನದಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಅಂದವ್ರೆ."

"ಅವ್ಯಲ್ಲ ಹಳೆ ಮ್ಯಾಟ್ರುಲ್ಲವ ಸಾ?"

"ಆದ್ರು ಅವರ ಮಾತಿಗೆ ಪುರೋಹಿತರ ಗುರು ಪೇಜಾವರ ತುಂಬ ಸಿಟ್ಟಾಗ್ಯವ್ರೆ."

"ಸಿಟ್ಟಾಗದೆ ಇನ್ನೇನು ಮಾಡ್ತರೆ ಸಾ? ರಾಮನಿಂದ ಬೆನಿಫಿಟ್ ತಗಂಡಿರೊ ವಂಶದೋರು ಮಾತಾಡ್ತೆ ನಾನು ನೀವು ಮಾತಾಡಕ್ಕಾಯ್ತದಾ?"

"ಅಂಗಾದ್ರೆ ರಾಮ ದೇವರಲ್ಲ?"

"ರಾಮ ಯಾಚಕರಿಗಷ್ಟೇ ದೇವರು. ಅವ್ರುನಿಗೆ ಹೋಲಿಕೆ ಮಾಡಿದ್ರೆ ನಾನೇ ಬೆಟರ್!"

"ಅಂಗಂತಿಯಾ?"

"ಊ ಸಾ. ನೋಡಿ, ನನ್ನೆಂಡ್ತಿ ಜಿನ್ನೆನಳ್ಳಿಯೋಳು. ನಾನು ಮದುವೆ ಆದಮ್ಯಾಲೆ ಅವುಳಿಗ್ಯಾರೊ ಲವ್ ಲೆಟ್ರು ಬರದಿದ್ರು, ಇವುಳು ಅದ್ಕೆ ಉತ್ತರ ಕೊಟ್ಟಿದ್ಲು ಅನ್ನೊ ಸುದ್ದಿ ನನಿಗೆ ಗೊತ್ತಾಯ್ತು. ಆಗ ನಾನೇನು ಮಾಡಿದೆ ಗೊತ್ತಾ?"

"ಗೊತ್ತಿಲ್ಲ, ಹೇಳು."

"ನನ್ನೆಂಡ್ತಿ ಚನ್ನಾಗಿದ್ಲು, ಒಂಥರಾ ಕಂಟ್ರಿ ಬ್ಯೂಟಿ ಹುಡುಗಿ. ಅಂಗಾಗಿ ಯಾರೊ ಒಬ್ಬ ಲೋಕಲ್ ಲವ್ ಗಿರಾಕಿ ಲೆಟ್ರು ಬರದಿರಬಹುದು. ಅದ್ಕೆ ನನ್ನೆಂಡ್ತಿ ಸರಿಯಾಗಿ ಉತ್ತರನೂ ಕೊಟ್ಟಿರಬಹುದು. ಆದ್ರೀಗ ನಾನು ಅವುಳ ಗಂಡ. ಅವುಳು ನನ್ನೆಂಡ್ತಿ, ನನ್ನೆದ್ರಿಗೆ ನಾಳೆ ಅವೆ. ನಿನ್ನೆ ಮ್ಯಾಟ್ರು ಕ್ಲೋಸ್ ಅಂತ ಹೇಳಿ ಚಾಪ್ಟರನೇ ಕ್ಲೋಸ್ ಮಾಡಿದೆ. ರಾಮ ಹಿಂಗೆ ಮಾಡಬಹುದಿತ್ತು ಸಾರ್."

"ರಾಮ ಪ್ರಜೆಗಳ ಮಾತಿಗೆ ಗೌರವ ಕೊಟ್ಟನಂತೆ."

"ಪ್ರಜೆಗಳು ಯಾವ ಜವಾಬ್ದಾರಿಯಿಂದ ಮಾತಾಡ್ತರೆ ಸಾರ್? ಕರ್ನಾಟಕನೆ ತಗೊಳ್ಳಿ. ಇಡೀ ಕರ್ನಾಟಕ ಈಗ ಹುಚ್ಚಾ ವೆಂಕಟ್ ಕರ್ನಾಟಕ ಆಗಿದೆ. ಅಂಥೋರ ಮಾತಿಗೆ ಬೆಲೆ ಕೊಡೋನು ದೇವರೆ?"

"ಅಂತೂ ರಾಮನಿಗಿಂತ ನೀನೆ ದೊಡ್ಡತನದಲ್ಲಿ ನಡಕೊಂಡಿದ್ದಿ."

"ಇದ್ಯಾವ ದೊಡ್ಡತನ ಸಾರ್? ಸಿಲ್ಲಿ ಮ್ಯಾಟ್ರು. ರಾಮನ ಬಗ್ಗೆ ನಾನು ಇನ್ನೊಂದು ಆಬ್‌ಜಕ್ಷನ್ ಮಾಡ್ತೀನಿ ಸಾರ್. ಆ ಲಕ್ಷ್ಮಣ ಅನ್ನೊ ಹುಡುಗ ಹೊಸದಾಗಿ ಮದುವೆ ಆದ ಊರ್ಮಿಳೆ ಬುಟ್ಟು ಇವನ ಜೊತೆ ಹೊಂಟನಲ್ಲಾ... ಆಗ ರಾಮ 'ಲಕ್ಷ್ಮಣಾ, ನಿನ್ನೆಂಡ್ತಿನೂ ಕರಕಂಬಾ. ಪಾಪ ಹರೇ ಹುಡುಗಿ. ಹದುನಾಕೋರ್ಸ್ ಒಂದೇ ಮನಿಕಳದು ಬ್ಯಾಡ' ಅಂದಿಲವಲ್ಲ ಸಾ? ಅಲ್ಲಿಗೆ ಇವನು ಹೆಂಗಸರ ಸೆಕ್ಸ್ ಬಗ್ಗೆ ಯೋಚನೇನೆ ಮಾಡಿಲ್ಲ ಅಂದಂಗಾಯ್ತಲ್ಲವೆ."

"ಆ ಹುಡುಗಿ ಕಾಡಲ್ಲಿ ಅಲಿಯದು ಬ್ಯಾಡ, ಅರಮನೇಲಿ ಸುಖವಾಗಿರ್ಲಿ ಅಂತ ಲಕ್ಷ್ಮಣ ಬುಟ್ಟು ಹೋಗಿರಬೇಕು."


"ಅಂಗಾದ್ರೆ ಸೀತೆ ಕಾಡಲ್ಲಿರಬವುದಾ? ಇನ್ನೊಂದು ಮ್ಯಾಟ್ರೇಳತಿನಿ ಕೇಳಿ ಸಾರ್. ನನಿಗೂ ರಾಮಾಯಣ ಗೊತ್ತದೆ. ಬೇಕಾದಷ್ಟು ಗೊಂಬೆ ಕತೆ ನೋಡಿದ್ದಿನಿ. ನಾಟಕನೂ ನೋಡಿದ್ದಿನಿ. ಅದನ್ನೆಲ್ಲ ಟೋಟ್ಲು ಮಾಡಿ ಯೋಚನೆ ಮಾಡಿ ಹೇಳದಾದ್ರೆ ಈ ರಾಮ ಮನುಷ್ಯರಿಗೆ ಜಮಾವೊಟಿಲ್ಲ ಅನ್ನದು ಗೊತ್ತಾಯ್ತದೆ."

"ಅಂಗಂತಿಯಾ."

"ಎಚ್ಚಾಟ್ಟ ಸಾರ್. ನೋಡಿ ತುಂಬಿದ ಬಸರಿ ಸೀತೆಯ ಈ ರಾಮ ಕಾಡಿಗೆ ಬುಟ್ಟು ಬಾ ಅಂದ. ಪಾಪ ಆ ಲಕ್ಷ್ಮಣ ದುಃಖ ತಡಕಂದು ಹೋಗಿ ಕಾಡಿಗೆ ಬುಟ್ಟು ಅಳತಾ ಬಂದ. ಅವುಳ ಬುಟ್ಟು ಬರುವಾಗಿನ ಸನ್ನಿವೇಶ ನ್ಯನಿಸಿಗಂಡ್ರೆ ನನಿಗೀಗ್ಲೂ ಅಳು ಬತ್ತದೆ ಸಾರ್."

"ನಿನಿಗಳು ಬರುತ್ತೆ ಅಂದ್ರೆ ಆಶ್ಚರ್ಯ."

"ನಾನು ರಾಮುಲ್ಲದಲ್ಲ ಸಾ. ಅದ್ಕೆ ಅಳು ಬರುತ್ತೆ, ಸೀತೆ ತುಂಬಿದ ಬಸರಿ.



ಸಲೀಸಾಗಿ ನ್ಯಡಿಯಕ್ಕಾಗಲ್ಲ. ಆ ಕಾಡಲ್ಲಿ ಹುಲಿ, ಕರಡಿ, ಸಿಂಹ ಯಲ್ಲ ಇದ್ದವಂತೆ. ಆಗಿನ ಕಾಡಿನ ಬಗ್ಗೆ ಯೋಚನೆ ಮಾಡಿದ್ರೆ ಸೀಳನಾಯಿ, ಕೆನ್ನಾಯಿ ನಮ್ಮ ನಡುವೆ ಇರೋ ಕೆಲವು ಜನಗಳ ತರಹ ಹೈನಾಗಳೂ ಇದ್ದೂ. ಅವು ಯಾವಾದ್ರು ಅವುಳನ್ನು ತಿಂದಿರಬವುದು. ಕಾಡಲ್ಲಿ ಆ ಬಸರಿ ಹೆಂಗಸಿಗೆ ಬಾಯಾರಿರಬವುದು. ಹಸಿವಾಗಿರಬವುದು. ಏನು ಸಂಕಟ ಪಡತಾಯಿದ್ದಳೊ ಅಂತ ರಾಮ ಯೋಚನೆ ಮಾಡಿಲ್ಲ ಸಾರ್."

"ಮಾಡಿರಬವುದು, ಒಳಗೊಳಗೇ ಅತ್ತಿರಬವುದು."

"ಆದರಿಂದ ಏನು ಪ್ರಯೋಜನ ಸಾರ್? ನನ್ನೆಂಡ್ತಿಯ ಯರಡ್ನೆ ಡಿಲವರೀಲಿ ಅವುರೂರಿಗೆ ಕಳಿಸ್ತೆ ಸಾರ್. ಜಗಳ ಆಡಿ ಕಂಡೇ ಹೋದ್ಲು, ಯಾಕೆ ಅಂದ್ರೆ ನಾನು ಸರಿ ಇರಲಿಲ್ಲ, ಒಂದೇ ವಾರಕ್ಕೆ ಹೋಗಿ ನೋಡಬೇಕು ಅನ್ನುಸ್ತು ಸಾರ್. ಹಿರಿಸೇವೆವರಿಗೂ ಬಸ್ಸಲ್ಲೋಗಿ ಅಲ್ಲಿಂದ ನ್ಯಡಕಂಡೋದೆ. ಹೋಗೊವತ್ತಿಗೆ ನ್ಯಸೆನೂ ಇಳದೋಗಿತ್ತು. ಕಲರ್ ಸೀರೆ ಉಟ್ಟಕೊಂಡು ಜಗಲಿಮ್ಯಾಲೆ ಕುಂತಿದ್ಲು. ತುಂಬಿದ ಬಸರಿ ಹೆಂಗಸು ಸಾರ್. ನನಿಗೆ ಯಂಗೆ ಕಂಡ್ಲು ಅಂದ್ರೆ ಅಷ್ಟು ಸುಂದರವಾಗಿ ಅವುಳ್ಯಾವತ್ತೂ ಕಂಡಿರಲಿಲ್ಲ. ಅಲ್ಯಾರು ಇಲ್ದೆಯಿದ್ರೆ ಬಾಚಿ ತಬ್ಬಿಕತಿದ್ದೆ ಸಾರ್. ಆದ್ರು ಬರುವಾಗ ಹ್ವಟ್ಟೆ ಸವರಿ ಬಂದೆ. ಇಂತದ್ದೊಂದು ಸುಖನೆ ಆ ನನ್ನಮಗ ರಾಮ ಅನುಭವುಸಲಿಲ್ಲ. ನೋಡಿ, ಹನ್ನೆರಡೋರ್ಸ್ ಸೀತೆ ಬದುಕಿದ್ದಳೊ ಸತ್ತಿದ್ದಳೊ ಅಂತ ತಿಳಕಳಕ್ಕೇ ಹೋಗ್ಲಿಲ್ಲ. ಅರಮನೆ ತುಂಬ ತುಂಬಿದ್ದ ಪುರೋಹಿತರ ಜೊತೆ ಸೇರಿಕೊಂಡು ಯಜ್ಞ, ಹವನ, ಹೋಮ ಮಾಡಿಕೊಂಡು ಕಾಲ ಹಾಕತಿದ್ದ."

"ನೀನೇನು ನೋಡಕ್ಕೋಗಿದ್ದ?"

"ನಮ್ಮ ಮೈಸೂರು ಮಹಾರಾಜರಗಳ ನೋಡಿದ್ರೆ ತಿಳಿತದಲ್ಲ ಸಾರ್? ಜಯಚಾಮರಾಜರು, ಶ್ರೀಕಂಠದತ್ತ ಇವುರಿಗ್ಯಲ್ಲ ಗಂಟುಬಿದ್ದಿದ್ದ ಪುರೋಹಿತರು ಸುಮ್ಮನಿದ್ರೆ? ಈಗ ನೋಡಿ, ಹೊಸದಾಗಿ ಸಿಕ್ಕಿರೊ ಆ ಹುಡುಗನ್ನ ಹಿಡಕೊಂಡು ನಮ್ಮ ಕಣ್ಣೆದ್ರಿಗೆ ಜೀವ ತಿಂತಾ ಅವುರೆ. ಇನ್ನ ರಾಮನ ಕೈಲಿ ಏನೇನು ಮಾಡಿಸಿರಬವುದು. ಮದ್ಲೆ ನಮ್ಮ ಹಳ್ಳಿ ಜನ ಹೇಳಿಲ್ವೆ, ಊರು ಮ್ಯಾಲೆ ಊರು ಬಿದ್ರೆ ಶ್ಯಾನುಭೋಗನ ಶಾಪಕೇನು ಅಂತ, ಸೀತೆ ಏನಾದ್ರೆ ಅವುರಿಗೇನು. ಅಂತೂ ಹನ್ನೆರಡೋರ್ಸ್ ಸೀತೆ ಬದುಕಿದ್ದಳೋ ಸತ್ತಿದ್ದಳೋ ಅಂತ ತಿಳಕಳ್ಳೋಗದೆ ರಾಮ ಪುರೋಹಿತರ ಜೊತೆ ಸೇರಿಕೊಂಡು ಟೈಂ ಪಾಸ್ ಮಾಡಿದ."

"ಭಗವಾನರನ್ನ ಟೀಕೆ ಮಾಡೋರಿಗೆ ಯಾಕೆ ಇವೆಲ್ಲಾ ಹೊಳೆಯಲ್ಲಾ?"


"ಹೊಳೀತವೆ ಸಾರ್. ಆ ನನುಮಕ್ಕಳಷ್ಟು ನಾವು ಓದಿಕಂಡಿದ್ದಿವಾ?. ಅವುರಿಗೆ ಗೊತ್ತಿದ್ರೂ ಅಂಗೆ ಮಾತಾಡ್ತರೆ. ಇದು ಬಿಟ್ಟ ಕೂಳ ತಿನ್ನಕಂಡು ಬದುಕಿದೋರ ಮಾನ ಅವಮಾನದ ಪ್ರಶ್ನೆ. ಅದ್ಕೆ ಕೂಗಾಡ್ತವೆ. ಆ ನನ ಮಕ್ಳ ಇಲ್ಲಿಗೆ ಕರಕೊಂಡು ಬನ್ನಿ. ನಾನೆ ಕೇಳ್ತಿನಿ 'ಅಲ್ಲಾ ಕಂಡ್ರೊ ಜನಿವಾರಿಗಳ, ಹನ್ನೆರಡು ವರ್ಷದ ಮ್ಯಾಲೆ ಸೀತೆ ಆ ಹುಡುಗ್ರ ಕರಕಂಡು ಬಂದಾಗ ರಾಮ ಹೋಗಿ ಆ ಹುಡುಗರ ತಬ್ಬಿಕಂಡನೇ ವರತೂ ಸೀತೆಯ ಸಮಾಧಾನ ಮಾಡಲಿಲ್ಲ, ಅಂಥೋನು ಅದ್ಯಂಗೆ ದೇವರಾಯ್ತನೆ?' ಅಂತ ಕೇಳ್ತಿನಿ."

"ಅಂಗಾದ್ರೆ ರಾಮ ದೇವರಲ್ಲ ಅಂತೀಯಾ?"

"ಯತ್ತ ಮುಂದಾಗಿ ನೋಡಿದ್ರೂ ರಾಮ ನನಗಿಂತ ಉತ್ತಮನಾಗಿ ಕಾಣ್ತಾಯಿಲ್ಲ ಸಾರ್. ಕುಡುದು, ಬಡುದು, ವಡದೂ, ನನ್ನೆಂಡ್ತಿಯ ನಾನು ಚನ್ನಾಗಿ ನೋಡಿಕಂಡಿದ್ದಿನಿ. ಅವುಳಿಲ್ಲ ಅಂದ್ರೆ ನಾನು ಸತ್ತಂಗೆಯ ಸಾ."

"ಥೂತ್ತೇರಿ!!!" ■

ನಮೋ ದೊರೆ ಪಿಟೀಲು ಬಾರಿಸುತ್ತಿರುವಾಗ



ಗೌರಿಯವರು ಪಾಕಿಸ್ತಾನಿ ಲೇಖಕಿ ಫಾಮಿದಾ ರಿಯಾಜ್ ಅವರ ಕವನವನ್ನು ಅನುವಾದಿಸಿ ಪತ್ರಿಕೆಯಲ್ಲಿ ಪ್ರಕಟಿಸಿದ್ದನ್ನು ಓದಿದೆ. 'ನೀವೂ ನಮ್ಮಂತಾದಿರಿ' ಎಂದ. ಅವರ ಮಾತು ಎಷ್ಟೊಂದು ಅರ್ಥಪೂರ್ಣವಾಗಿದೆ ಹಾಗೂ ಅದನ್ನು ಓದುವಾಗ ನಗೆಯುಕ್ಕುತ್ತಲೂ ಇದೆ. ಮತ್ತೆ ಮತ್ತೆ ಓದಿದೆ. ನಿಮಗೆ ಧನ್ಯವಾದಗಳು.

ಈ ದೇಶದಲ್ಲಿ ನಮಗಿರುವಷ್ಟು ಸ್ವಾತಂತ್ರ್ಯ ನೆಮ್ಮದಿ ಬೇರೆ ಯಾವ ಮುಸ್ಲಿಂ ರಾಷ್ಟ್ರದಲ್ಲೂ ದೊರೆಯದೆನ್ನುತ್ತಿದ್ದೆ. ಇಲ್ಲಿ ಎಂತಹ ಕೋಮುವಾದಿಗಳಿದ್ದರೂ ಅವರ ವಿರುದ್ಧ ನಮ್ಮೊಡನಿದ್ದು ಹೋರಾಡುವ ಜಾತ್ಯತೀತವಾದಿಗಳು ಅವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದು ಹೇಳುತ್ತಿದ್ದೆ. ನಮ್ಮ ಸಂವಿಧಾನ ಸರ್ವರಿಗೆ ಸಮಾನತೆ ಮತ್ತು ಸಮಾನ ಹಕ್ಕುಗಳನ್ನು ನೀಡಿದೆ. ಸಂವಿಧಾನಕ್ಕನುಸಾರವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಎಂತಹ ಅನ್ಯಾಯ, ಅಕ್ರಮಗಳನ್ನೂ ನ್ಯಾಯಾಲಯದಲ್ಲಿ ಪ್ರಶ್ನಿಸುವ ಸೌಕರ್ಯವಿದೆ. ಜಾತಿಧರ್ಮಗಳ ಗೊಡವೆ ಇಲ್ಲದೆ ನಮ್ಮ ದಾರಿಯಲ್ಲಿ ನಾವು ಮುಂದುವರಿಯುವಂತಹ ಹಕ್ಕುಗಳನ್ನು ಸಂವಿಧಾನ ನಮಗೆ ನೀಡಿದೆ. ಮತಾಂಧತೆಯಲ್ಲಿ ಮುಳುಗಿದ ಇತರ ಮುಸ್ಲಿಂ ರಾಷ್ಟ್ರಗಳಿಗೆ ಹೋಲಿಸಿದರೆ ನಮ್ಮದು ನೆಮ್ಮದಿಯ ಬದುಕು ಎಂದೇ ನಾವು ತಿಳಿದುಕೊಳ್ಳಬಹುದಾಗಿತ್ತು.

ಆದರೆ ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದ ಈ ನೆಮ್ಮದಿಯ ಬದುಕಿಗೆ ಯಾರ ದೃಷ್ಟಿ ಬಿತ್ತು? ಬಹುಶಃ ಪಾಕಿಸ್ತಾನದ ಮಹಿಳೆಯರ ದೃಷ್ಟಿಯೇ ಬಿದ್ದಿರಬಹುದು! 'ನೀವೂ ನಮ್ಮಂತಾದಿರಿ' ಎಂದು ಫಾಮಿದಾ ಸಂತೋಷದಿಂದ ಬರೆದರೆನ್ನಿಸಿತು! ನಮ್ಮನ್ನು ಕಂಡು ಅವರಿಗೆ ಮತ್ಸರವುಂಟಾಗಿರಬಹುದು!

ನಮ್ಮ ದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕೆಲವು ವರ್ಷಗಳ ಹಿಂದೆಯೇ ಹೊಡೆತ ಬಿದ್ದಿತ್ತು. ಇತ್ತೀಚೆಗೆ ಈ ಕೋಮುವಾದಿಗಳ ಅಟ್ಟಹಾಸ ಮಿತಿ ಮೀರಿದೆ. ಮುಸ್ಲಿಂ ಮೂಲಭೂತವಾದಿಗಳು ಸ್ವರ್ಗದ ಕಾವಲುಗಾರಿಕೆ ಮಾಡುತ್ತಿದ್ದರೆ ಹಿಂದೂ ಮೂಲಭೂತವಾದಿಗಳು ಕೋಟಿ ಕೋಟಿ ದೇವತೆಗಳನ್ನು ಕಾಯುವ ಕೆಲಸ ಮಾಡುತ್ತಿದ್ದಾರೆ.

ಇತ್ತೀಚೆಗೆ ನಮ್ಮ ಸುತ್ತಮುತ್ತಲೂ ನಡೆದ, ನಡೆಯುತ್ತಿರುವ ಕೆಲವು ಘಟನೆಗಳ ವಿವರಗಳನ್ನು ಕೇಳುತ್ತಿದ್ದಂತೆ ನಮಗೆ ಆಘಾತವಾಗುತ್ತಿದೆ. ಧಾರ್ಮಿಕ ವಿಷಯಗಳ ಕುರಿತು ಹಿರಿಯ ಸಂಶೋಧಕರು, ವಿಚಾರವಾದಿಗಳು ತಮ್ಮ ಅನಿಸಿಕೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ, ಮಾತುಗಳ ಮೂಲಕ ಅಥವಾ ಬರಹದ ಮೂಲಕ ಪ್ರಕಟಿಸಿದರೆ ಅದು ಈ ಕಾವಲುಗಾರರು ಮತ್ತು ದೇವರ ಬಾಡಿಗಾರ್ಡ್‌ಗಳಿಗೆ ಸಹನೆಯಾಗುವುದಿಲ್ಲ. ಹಾಗೆಂದು ಅವರು ಸಂವಿಧಾನ ನಮಗೆ ನೀಡಿದ ಸ್ವಾತಂತ್ರ್ಯವನ್ನುಪಯೋಗಿಸಿಕೊಂಡು ನ್ಯಾಯಾಲಯಕ್ಕೆ ಹೋಗಲಾರರು. ಅಂತಹ ವಿಚಾರವಾದಿಗಳನ್ನು ರಸ್ತೆಯಲ್ಲೋ, ಅವರ ಮನೆಯೊಳಗೆ ಪ್ರವೇಶಿಸಿ ಗುಂಡಿಟ್ಟೋ ಹತ್ಯೆ ಮಾಡುತ್ತಾರೆ ಮತ್ತು ತಮ್ಮೊಳಗೆ ಸಿಹಿ ಹಂಚಿಕೊಂಡು ಸಂಭ್ರಮಿಸುತ್ತಾರೆ. ಹೌದು, ನಾವೂ ಅವರಂತೆಯೇ ಆದೆವು!

ಈ ದೇಶದ ಜನರಿಗೆ ಏನಾಗಿದೆ? ಮಹಿಳೆಯರ ಮತ್ತು ಎರಡು ವರ್ಷ, ನಾಲ್ಕು ವರ್ಷ ಪ್ರಾಯದ ಪುಟ್ಟ ಹೆಣ್ಣು ಮಕ್ಕಳ ಮೇಲೂ ಅತ್ಯಾಚಾರವೆಸಗುತ್ತಾರೆಂದರೆ ಇವರನ್ನು ಮನುಷ್ಯರೆಂದು ಕರೆಯಲು ಸಾಧ್ಯವಾ? ಇಬ್ಬರು ಅತ್ಯಾಚಾರ ಮಾಡಿದರೆ ಅದನ್ನು ಸಾಮೂಹಿಕ ಅತ್ಯಾಚಾರವೆಂದು ಹೇಳಲು ಸಾಧ್ಯವಿಲ್ಲವೆಂದು ಗೃಹಮಂತ್ರಿಗಳು ಹೇಳಿದರೆ, "ನಿಮ್ಮನ್ನು ಒಬ್ಬರು ಎಳೆದುಕೊಂಡು ಹೋಗಿ ರೇಪ್ ಮಾಡಿದರೆ ನಾನೇನು ಮಾಡಬೇಕು?" ಎಂದು ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾದ ಈಶ್ವರಪ್ಪ ಕೇಳುತ್ತಾರೆ. ನಾವು ಮತ ನೀಡಿ ನಮ್ಮನ್ನಾಳಲು ಕಳುಹಿಸಿದವರ ಆಲೋಚನೆಗಳು ಯಾವ ರೀತಿ ಇವೆಯೆಂದು ಇದರಿಂದ ವ್ಯಕ್ತವಾಯಿತು. ಉತ್ತರ ಪ್ರದೇಶದ ರಾಜಕಾರಣಿಯೊಬ್ಬರು, ಇಖ್ಲಾಕ್ ಎಂಬುವರು ಬೀಫ್ ತಿಂದಿದ್ದಾರೆಂಬ ಕಾರಣ ನೀಡಿ ಹಿಂದೂಗಳು ಅವರ ಮನೆ ಪ್ರವೇಶಿಸಿ ಅವರನ್ನು ಹೊಡೆದು ಕೊಂದದ್ದು ಆಕಸ್ಮಿಕವೆನ್ನುತ್ತಾ 17 ವರ್ಷ ಪ್ರಾಯದ ಅವರ ಮಗಳನ್ನು ರೇಪ್ ಮಾಡಿಲ್ಲವಲ್ಲಾ ಎನ್ನುತ್ತಾನೆ. ಹಾಗೇನಾದರೂ ಆಗಬೇಕೆಂದು ಈತ ಬಯಸುತ್ತಿದ್ದನೇ?

ಬೀಫ್ ತಿಂದಿದ್ದಾನೋ ಮಟನ್ನು ತಿಂದಿದ್ದಾನೋ ಎಂಬುದು ತಿಳಿಯದಿದ್ದರೂ ಇವರ ಮುಖ್ಯ ಉದ್ದೇಶ ಓರ್ವ ಮುಸ್ಲಿಂನನ್ನು ಹೊಡೆದು ಕೊಲ್ಲುವುದೇ ಆಗಿತ್ತಲ್ಲವಾ? ಈ ದೇಶದ ಈ ಜನರಿಗೆ ಮನುಷ್ಯರನ್ನು ಹಾಡುಹಗಲೇ ಬಲವಂತದಿಂದ ಅವರ ಮನೆಯೊಳಗೆ ಪ್ರವೇಶಿಸಿ ಹೊಡೆದು ಕೊಲ್ಲುವುದಕ್ಕೂ ಸಾಧ್ಯವಾಗುತ್ತಿದೆ ಎಂದಾಯಿತು. ಕಾಶ್ಮೀರದ ವಿಧಾನಸೌಧದ ಒಳಗೆಯೇ ಇಂಜಿನಿಯರಾದ ಮುಸ್ಲಿಂ ಸದಸ್ಯರನ್ನು ಹೊಡೆದು ಕೊಲೆ ಮಾಡಲು ಪ್ರಯತ್ನಿಸಿದಾಗ ಇತರ ಸದಸ್ಯರು ಬಂದು ಆತನನ್ನು ರಕ್ಷಿಸಿದರು. ಆ ಸಮಯದಲ್ಲಿ ಅಲ್ಲಿದ್ದ ರಾಜಕಾರಣಿಯೊಬ್ಬರು, "ನಮ್ಮ ಧರ್ಮದಲ್ಲಿ ಹೆಂಡ ಕುಡಿಯುವುದನ್ನು ನಿಷೇಧಿಸಲಾಗಿದೆ. ಹಾಗೆಂದು ನಾವು ಬಾರಿನೊಳಗೆ ಪ್ರವೇಶಿಸಿ ಹೆಂಡ ಕುಡಿಯುತ್ತಿರುವವರನ್ನು ಹೊಡೆದು ಕೊಲ್ಲಲು ಸಾಧ್ಯವಾ?" ಎಂದು ಕೇಳಿದರು. ಈ ಸದಸ್ಯನು ಬೀಫ್ ಪಾರ್ಟಿ ಮಾಡಿದ್ದೇ ಕಾರಣವಾಗಿತ್ತು.

ಪಾಕಿಸ್ತಾನಿ ಗಾಯಕನ ಹಾಡನ್ನು ರದ್ದುಗೊಳಿಸಿದ್ದು ಪಾಕಿಸ್ತಾನಿ ಮಾಜಿ ಮಂತ್ರಿಯ ಪುಸ್ತಕ ಬಿಡುಗಡೆ ಮಾಡಬಾರದೆಂದು ಸುಧೀಂದ್ರ ಕುಲಕರ್ಣಿಯವರ ಮೈಗೆ ಮಸಿ ಹಚ್ಚಿದ್ದು ಈ ಎಲ್ಲ ಘಟನೆಗಳೂ ಏನನ್ನು ಸೂಚಿಸುತ್ತದೆ? ಅಧಿಕಾರ ದೊರೆತಾಗ ಈ ಜನರು ಏನೂ ಮಾಡಬಲ್ಲರು ಎಂಬುದಲ್ಲವಾ? "ನಾವು ಹೇಳಿದಂತೆ ನೀವು ಕೇಳಬೇಕು. ನಿಮ್ಮಿಷ್ಟದಂತೆ ಏನೂ ಮಾಡಬಾರದು. ಏನೂ ಹೇಳಬಾರದು. ನೀವು ಏನನ್ನು ತಿನ್ನಬೇಕು, ಏನನ್ನು ಕುಡಿಯಬೇಕು ಎಂಬುದನ್ನು ನಾವು ತೀರ್ಮಾನಿಸುತ್ತೇವೆ. ನಮ್ಮ ತೀರ್ಮಾನದಂತೆ ನೀವು ಬದುಕಬೇಕು. ಇಲ್ಲವಾದರೆ ನಿಮ್ಮನ್ನು ಗುಂಡಿಟ್ಟು ಕೊಲೆ ಮಾಡುತ್ತೇವೆ" ಇಂತಹ ಭಯೋತ್ಪಾದಕರ ನಡುವೆ ಇಂದು ನಾವು ಬದುಕಬೇಕಾಗಿದೆ.

ಈ ಎಲ್ಲದರ ವಿರುದ್ಧ ಪ್ರತಿಭಟನೆ ನಡೆಯುತ್ತಲೇ ಇದೆ. ಈ ಕೊಲೆಗಾರರನ್ನು ಬಂಧಿಸದ ಕಾರಣ ಭಯೋತ್ಪಾದಕ ಧೋರಣೆಗಾಗಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ನೀಡಿದ ಪ್ರಶಸ್ತಿಗಳನ್ನು ದೇ ಹಲವಾರು ಸಾಹಿತಿಗಳು ಈಗಾಗಲೇ ಹಿಂತಿರು ಈ ಕೋಮುವಾದದ ವಿರುದ್ಧ ದೇಶದ 'ದುರದೃಷ್ಟಕರ' ಎಂಬ ಒಂದೇ ಮಾತನ್ನಾಡಿದ್ದಾ ಹೊತ್ತಿ ಉರಿಯುತ್ತಿರುವಾಗ ನೀರೊ ದೊರೆ ಬಾರಿಸುತ್ತಿದ್ದನಂತೆ!




ಇತ್ತೀಚೆಗೆ ಅಕಾಡೆಮಿ ಆಫ್ ಜನರಲ್ ಎಜ ಮಣಿಪಾಲ್ ಎಂಬ ಸಂಸ್ಥೆಯವರು ನೀಡುವ ವಾರ್ಷಿಕ ಪ್ರಶಸ್ತಿಗೆ 'ನಿಮ್ಮನ್ನು ಆಯ್ಕೆ ಮಾಡಿದ್ದೇವ ನನಗೆ ಪತ್ರ ಬರೆದರು. 'ನನ್ನ ಸುತ್ತಮುತ್ತಲೂ ದೇಶಾದ್ಯಂತ ನಡೆಯುತ್ತಿರುವ ಈ ಎಲ್ಲಾ ಘಟ ನಾನು ಆಘಾತಕ್ಕೊಳಗಾಗಿದ್ದೇನೆ. ಹಾಗಾಗಿ ನ ಪ್ರಶಸ್ತಿಯನ್ನು ನಿರಾಕರಿಸುತ್ತೇನೆ' ಎಂದು ಸಂಸ್ಥೆಯ ಪತ್ರ ಬರೆದೆ. ದೇಶಾದ್ಯಂತ ನಡೆಯುತ್ತಿರುವ ಅಕ್ರಮ ಮತ್ತು ಅತ್ಯಾಚಾರಗಳಿಗೆ ಇದು ನನ್ನ ಎಂದುಕೊಂಡಿದ್ದೇನೆ.

■ ಸಾ.ರಾ. ಅಬೂ

ಚರಿತ್ರೆಯೆಂದರೆ...

[illegible]

ಯಾರ ಮನೆಯ [illegible]



[illegible]

ಯಾರ ಮನೆ ಗಾದಿ
[illegible]

ಚರಿತ್ರೆಯೇ ಇಲ್ಲವೇ?
[illegible]

[illegible]

ಧೂಳಿನೊಳಗೇ ಹೊಳೆಯುತ್ತಿದ್ದವು

[illegible]
ಅಂಬಾರಿಯಲಿ ಕುಳಿತ [illegible]
ಅಂತಃಪುರದ ಗತ್ತು [illegible]
[illegible]

[illegible]

ಚರಿತ್ರೆಯೆಂದರೆ ಹೀಗೇ
ಮುಳುಗಿದ ಹಡಗಿನ ತೇಲುವ ಹಲಗೆಗಳ

[illegible]
[illegible] ನಂಜಯ್ಯನವರಿಗೆ ಜಾಗವಿ[illegible]
[illegible]

[illegible]

ಡಾ. ಎಚ್.ಎಸ್.ಅನು
ಚಿತ್ರಗಳು: ಕೃಷ್ಣ ಗಿ

ವಿಲೆಹಾಳಿನಲ್ಲಿ ಕಟ್ಟೆಪುರಾಣ

ುಧ ಪೂಜೆಯ ದಿನ ಚನ್ನಗಿರಿ ಸಮೀಪದ ಗೆ 'ಕಟ್ಟೆ ಪುರಾಣ' ನಾಟಕ ತೆಗೆದುಕೊಂಡು ನು. ನವಿಲೆಹಾಳಿನ ಬಗ್ಗೆ ಈ ಹಿಂದೆ ಹಲವು ಕುತೂಹಲಗೊಂಡಿದ್ದೆ ಏಕೆಂದರೆ ಹಿಂದೂಗಳು ುಸ್ಲಿಮರು ಸಮಸಂಖ್ಯೆಯಲ್ಲಿರುವ ಈ ಊರಿನಲ್ಲಿ ಷಯದಲ್ಲಿ ನಮ್ಮೂರಿನ ಸಂಬಂಧವಿದೆ ಎಂದು ನಮ್ಮೂರಿನ ಸಂಬಂಧ ಎಂದರೆ ಮಡಿವಾಳರ ನ್ನು ನಾವು ಚಿಕ್ಕಪ್ಪ ಎನ್ನುತ್ತಿದ್ದೆವು. ಕ್ಷೌರಿಕರ ಗ ಮಾವ ಎನ್ನುತ್ತಿದ್ದೆವು. ಹಾಗೆಯೇ ಆಚಾರ್ಯರ ಿಗೆ ಮಾವ ಎನ್ನುತ್ತಿದ್ದೆವು. ಹೀಗೆ ಬೇರೆ ಬೇರೆ ರಿಗೆ ಬೇರೆ ಬೇರೆ ಸಂಬೋಧನೆಗಳಿದ್ದವು. ಈ ನೆಯಿಂದ ಇಡೀ ಊರೇ ಒಂದು ಅವಿಭಕ್ತ ುಂತೆ ಕಾಣುತ್ತಿತ್ತು, ಆದರೆ ಅಂತಹ ಕಳ್ಳುಬಳ್ಳಿಯ ಧನೆಗೆ ಬ್ರಾಹ್ಮಣರು ಬಾಧ್ಯರಾಗಿರಲಿಲ್ಲ. ಬ್ಬನನ್ನು ಮಾವ ಚಿಕ್ಕಪ್ಪ ಎನ್ನುವುದು ಸಾಧ್ಯವೇ? ಇಡೀ ನಮ್ಮ ನೆಲಮೂಲದ ಸಂಸ್ಕೃತಿಯಿಂದ ದವನು ಈ ಬ್ರಾಹ್ಮಣ.


ರಿನ ಇಂತಹ ಬಾಂಧವ್ಯದ ನಡವಳಿಕೆ ಷೆ ಮುಸ್ಲಿಂ ಮತ್ತು ಹಿಂದೂಗಳಲ್ಲಿದೆ ಎಂದು ಈ ಊರಿನಿಂದ ಬಂದಿದ್ದ ಲತೀಫ್ ಮತ್ತು ಾದಾಪೀರ್ ತಮ್ಮೂರಿನ ವಿಶೇಷತೆ ಬಗ್ಗೆ . ಈ ಊರಿನ ಮುಸ್ಲಿಮರು ಕೂಡ ಹೊರಗೆ ಎಷ್ಟು ವಿಶ್ವಾಸವನ್ನು ಸಂಪಾದಿಸಿದ್ದಾರೆಂದರೆ, ಇದ್ದರೂ ತುಂಬ ಜನಾನುರಾಗಿಗಳಾಗಿದ್ದಾರೆ ತುಮಕೂರಿನ ವಿ.ವಿ.ಕುಲಪತಿ ರಾಜಾಸಾಬ್ ಾಹರಣೆ. ಇವರು ಮಂಡ್ಯದಲ್ಲಿದ್ದಾಗಲೂ ತುಂಬ ಅಧಿಕಾರಿಗಳಾಗಿದ್ದರು. ಆಗ ಮತಾಂಧರಿಂದ ತೊಂದರೆ ಅನುಭವಿಸಿದ್ದರು. ಅವರ ತಮ್ಮ ್ ಕೂಡ ಒಳ್ಳೆ ಉಪನ್ಯಾಸಕರಾಗಿ ಹೆಸರು ರೆ.

ುಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಫಿಜಿಕ್ಸ್ ಲೆಕ್ಚರರ್ ಮನ್‌ಸಾಬ್‌ರನ್ನು ಯಾವ ವಿದ್ಯಾರ್ಥಿಯೂ ಾರ. ಹಾಗೆಯೇ ಶಿವಮೊಗ್ಗದಲ್ಲಿದ್ದ ಲತೀಫ್ ಾಟಕದಲ್ಲಿ ನನಗೊಂದು ಪಾತ್ರ ಕೊಡಿ ಸಾರ್" ನ ಉತ್ಸಾಹ ನೋಡಿ ಲತೀಫ್ ಎಂಬ ಪಾತ್ರ ಡಿ ನಮ್ಮಹಳ್ಳಿಗಳ ಕಡೆಗೆ ಬೇವು, ಹೊಂಗೆ, ಕೇಳಿಕೊಂಡು ಬರುವ ಪಾತ್ರ ಕೊಟ್ಟೆವು. ಅದನ್ನು ಾರಿಯಾಗಿ ನಿಭಾಯಿಸುತ್ತಿದ್ದ ಲತೀಫನಿಗೆ ಮೇಷ್ಟ್ರು ಗಲಾಗಿ ದಾವಣಗೆರೆಗೆ ಹೋದ. ನಂತರ ಈ ಜಾನ್‌ಪಾಲ್ ಮುಂದುವರಿಸಿದರು. ಈ ್ ಲತೀಫ್ ಪಾತ್ರವನ್ನು ಎಷ್ಟು ಚೆನ್ನಾಗಿ ನೆಂದರೆ ನವಿಲೆಹಾಳಿನಲ್ಲಿ ಅವನೇ ಸ್ಟಾರಾಗಿದ್ದ.

ಹಾಳಿನಲ್ಲಿ ಆ ದಿನ ದಸರಾ ಮತ್ತು ಉರುಸ್ ನ್ನು ಹಿಂದೂ ಮುಸ್ಲಿಮರು ಗಿಟ್ಟುಕೊಂಡಿದ್ದರು. ಊರ ತುಂಬ ಎರಡೂ ರ ಫ್ಲೆಕ್ಸ್ ರಾರಾಜಿಸುತ್ತಿದ್ದವು. ಹಿಂದೂಮುಸ್ಲಿಮರ ನ್ನೇ ಕಗ್ಗಂಟು ಮಾಡುತ್ತಿರುವ ಮತಾಂಧರ ನವಿಲೆಹಾಳಿನಲ್ಲಿ ಅದೊಂದು ಸಮಸ್ಯೆಯೇ ಭಾಷೆ, ಸಂಸ್ಕೃತಿ, ನಡವಳಿಕೆ ವಿಷಯದಲ್ಲಿ ುವೆ ಒಂದು ಸಣ್ಣ ಗೆರೆಯೂ ಇರಲಿಲ್ಲ.

ಮ ಓಡಾಡಿಕೊಂಡು ಸ್ಟೇಜನ್ನೂ ಶೃಂಗರಿಸುವಾಗ, ಾಜೇ ಪ್ರತ್ಯಕ್ಷವಾದ ಹೊಸ ಮ್ಯಾಜಿಕ್ ಡೈರೆಕ್ಟರ್ ದಾಳಿ ಎದುರು ಕುಳಿತು ಹಾಡುಗಳನ್ನು ಅಭ್ಯಾಸ ಳ್ಳಲು ಒಂದು ಮನೆಗೆ ಹೋದೆವು. ಅದು ಕಡೆಯ ಲಿಂಗಾಯತರ ಮನೆಯಂತಿತ್ತು, ಮೂತ್ರ ಂದು ಹಿಂಭಾಗದ ಕೊಟ್ಟಿಗೆಗೆ ಹೋದರೆ, ಥೇಟ್ ಅತ್ತೆಗೆಯಂತೆ ಕಾಣುತ್ತಿದ್ದ ಇಬ್ಬರು ದಂಪತಿಗಳು ಾಗ ಕರು ಹಾಕಿದ್ದ ಹಸುವಿನ ಆರೈಕೆ ್ದರು. ನಾನು "ಅರರೆ ಹಸು ಕರ ಹಾಕಿದೆ" ಹಸುವಿನ ಮಾಲೀಕ "ಗಂಡುಗರ ಹಾಕಿದ್ರೆ ಬ್ಯಾಸಾಯ ದು ಆಕ್ತಾಯಿದ್ದೆ. ಹೆಣ್ಣುಗರ ಹಾಕಿಬುಡ್ತು" ಎಂದು ಹ ಹೆಂಡತಿ "ಹ್ಯಟ್ಟೆಲಿದ್ದು ದ್ಯಾಟ್ತು ಅದೇನು ಮಾಡಕ್ಯಾಯ್ತದ" ಎಂದಳು. ಅವರು ಮುಸ್ಲಿಂ ದು ಆ ಊರವರು ಹೇಳಬೇಕಿತ್ತಷ್ಟೆ. ನನಗಂತೂ ಯಲಿಲ್ಲ. ಅದೇ ಮನೆಯಲ್ಲಿ ನಮ್ಮ ಹಾಡಿನ ಮೊಹಮುದಾಲಿ ನಮ್ಮ ಹಳೆಯ ಚೆನ್ನಾಗಿ ಹಾಡುಗಳಿಗೆ ಸಂಗೀತ ನೀಡಲು ನಮ್ಮ ನಾಟಕದ ಟೀಮು ಲತೀಫನ ಬರಿಯ ತಿಂಡಿತಿಂದು ನಾಟಕ ಮಾಡಲು

ಸ್ಟೇಜಿನ ಎದುರು ಕುಳಿತಿದ್ದರು ಸ್ಟೇಜಿನ ಮೇಲೆ ಮುಂದಿನ ಟೇಬಲ್ ಮತ್ತು ಗಳನ್ನು ಹಾಕಿದರು. ಹೋದುಗೋಡುತ್ತಿದ್ದಂತೆ





ಊರಿನ ಹಿರಿಯರು ಸ್ಟೇಜ್ ಮೇಲೆ ಬಂದು ಕುಳಿತರು. ಅವರ ನಡವಳಿಕೆ ಮತ್ತು ಹಾವಭಾವ ವಿಚಿತ್ರವಾಗಿದ್ದರಿಂದ ನೋಡುತ್ತ ನಿಂತೆ. ಅವರನ್ನು ಪರಿಚಯಿಸುವಾತ "ನಮ್ಮೂರಿನ ದಸರಾ ಮತ್ತು ಉರುಸ್ ಕಾರ್ಯಕ್ರಮಕ್ಕೆ ದೂರದಿಂದ ಆಗಮಿಸಿರುವ ಸಿ.ಎಂ. ಇಬ್ರಾಹಿಂ, ಮಲ್ಲಿಕಾರ್ಜುನ ಖರ್ಗೆ, ಎಸ್ಸೆಂ ಕೃಷ್ಣ ಮತ್ತು ಕರುಣಾನಿಧಿಯನ್ನು ಸ್ವಾಗತಿಸುತ್ತೇನೆ" ಎಂದು ಹೇಳಿ ದಂಗುಬಡಿಸಿದ. ಆ "ಪ್ರಖ್ಯಾತ ರಾಜಕಾರಣಿಗಳು" ಐದೈದು ನಿಮಿಷ ಮಾತನಾಡಿದ ನಂತರ, ಡಿಕೆಶಿ ಪರವಾಗಿ ಎಸ್ಸೆಂ ಕೃಷ್ಣ ಮಾತನಾಡಿದರು. "ಕರೆಂಟು 24 ಗಂಟೆ ಕೊಡ್ತಿವಿ ಅಂತ ಹೇಳಿದ್ದವಪ್ಪ, ಆದ್ರೆ 24 ಗಂಟೇಲಿ 20 ತೆಗೆದು 4 ಗಂಟೆ ಕೊಡ್ತಿವಲ್ಲ, ಅಷ್ಟು ಸಾಕಲ್ಲವೆ. ಅದೂ ಇಲ್ದೆ ಸೀಮೆಣ್ಣೆ ಬುಡ್ಡಿಲಿದ್ರಿ. ರಾತ್ರಿವೊತ್ತು ಕರಂಟೇನು ಮಾಡಕ್ಕೆ ನಿಮಿಗೆ? ಸಿದ್ದರಾಮಯ್ಯ ಕೊಡೊ ಅಕ್ಕಿಲಿ ಅನ್ನ ಮಾಡಿಕ್ಯಂಡು ಹೊಟ್ಟೆ ತುಂಬ ಉಂಡು ಮಕ್ಕಂಡ್ರಾತಪ ಆರಿ" ಎಂದು ಕುಳಿತುಕೊಂಡ. ಇನ್ನ ಕರುಣಾನಿಧಿ ಮಜಾ ಎಂದರೆ, ಆತನ ತಮಿಳು ಭಾಷಣವನ್ನು ಕನ್ನಡಕ್ಕೆ ತರ್ಜುಮೆ ಮಾಡಲಾಯ್ತು, ಕರುಣಾನಿಧಿ "ನಿಮಗೆ ನೀರೇಕೆ ಬೇಕು? ಪೂರಾ ನನಗೆ ಕೊಡಿ" ಎಂದು ಕೇಳಿಕೊಂಡ. ನಿಜಕ್ಕೂ ಅವರೆಲ್ಲಾ ಅದ್ಭುತ ಕಲಾವಿದರು ಅನ್ನಿಸಿತು, ನಮ್ಮ ಜನಪ್ರತಿನಿಧಿಗಳನ್ನು ನಾವೇ ಆಡಿಕೊಂಡು ನಾಟಕ ಮಾಡಿ ನಗುವುದು ಸಾಮಾನ್ಯ ಸಂಗತಿಯಲ್ಲ. ಒಂದಿಷ್ಟೂ ಅಶ್ಲೀಲತೆಯಿಲ್ಲದ ನೆಲಮೂಲದ ಸೊಗಡಿನ ಭಾಷೆಯಲ್ಲಿ ಊರಜನರನ್ನು ನಗಿಸಿದ್ದನ್ನು ನಾನೆಲ್ಲೂ ನೋಡಿರಲಿಲ್ಲ. ಬಹಳ ಹಿಂದೆಯೇ ಇವರು ನಮ್ಮ ನಾಟಕವನ್ನು ಬೇರೊಂದು ರೀತಿಯಲ್ಲಿ ಆಡಿಕೊಂಡು ಬಂದಿದ್ದರು.

ನಮ್ಮ ನಾಟಕದಲ್ಲಿ ಲತೀಫನ ಮುಂದೆ ಸೀರಮಾವ ಸಾಬರ ಬಗ್ಗೆ ಮುಲಾಜಿಲ್ಲದೆ ಮಾತನಾಡುತ್ತಾನೆ. ಆ ಮಾತುಗಳಿಂದ ಯಾರಿಗಾದರೂ ನೋವಾಗಬಹುದೆಂಬ ಅನುಮಾನ ನನ್ನಲ್ಲಿತ್ತು, ಆದರೆ ನನ್ನ ಅನುಮಾನವನ್ನು ಸುಳ್ಳು ಮಾಡಿದ ಜನ ಎಷ್ಟು ಚಪ್ಪಾಳೆ ಹೊಡೆದು ನಕ್ಕರೆಂದರೆ, ಕಡೆಯಲ್ಲಿ ಬಂದ ಕೆಲವರು "ಲತೀಫನ ಪಾತ್ರವನ್ನು ಇನ್ನು ವಿಸ್ತರಿಸಿ ಎರಡು ಮೂರು ಬಾರಿ ಬರುವಂತೆ ಮಾಡಿ" ಎಂದೂ "ಪಾಟಸ್ನ ಜೊತೆ ಜಾಸ್ತಿ ಮಾತನಾಡುವಂತೆ ಮಾಡಿ" ಎಂದೂ ಹೇಳಿದರು.

ಹಿಪ್ಪೆ, ಬೇವು, ಹೊಂಗೆ ಬೀಜ ಸಿಕ್ಕದೆ ನಿರಾಶನಾಗಿ ಬಂದ ಲತೀಫನನ್ನು ನೋಡಿದ ಕಾಳಮಾವ "ಏನಾರ ಬೀಜ ಸಿಕ್ಕದವೇನೂ ಲತೀಫ" ಎನ್ನುತ್ತಾನೆ. "ಇಲ್ಲ ಗೌಡ್ರೆ, ರಸ್ತೆದು ಬದಿ ಮರ ಯಲ್ಲ ಕಡಿದಿ ಕಡಿದಿ ಹಾಕ್ತ ಅವುರೆ. ಯಂಗೆ ಬೀಜ ಸಿಕ್ಕಬೇಕು. ಹಿಂಗೆ ಮರ ಕಡದ್ರೆ, ಇನ್ನು ಇಪ್ಪತ್ತು ವರ್ಷಕ್ಕೆ ಮರಯಲ್ಲ ಹೋಗ್ಬಿಟ್ಟ ಎಲ್ಲಿ ನೋಡಿದ್ರು ಬರೀ ಮನುಸುರ್ಗೆ ಕಾಣ್ತಾರೆ" ಎನ್ನುತ್ತಾನೆ. ಅದಕ್ಕೆ ಸೀರ "ಈ ರಂಜಾನ್‌ನಬ್ಬದಲ್ಲಿ ಸಾಬುರು ಕಾಣ್ತರಲ್ಲ ಅಂಗೆ" ಎನ್ನುತ್ತಾನೆ. ಅದಕ್ಕೆ ಲತೀಫ "ಹೌದು, ದಸರಾದಲ್ಲಿ ಹಿಂದೂಗಳು ಕಾಣ್ತರಲ್ಲ ಅಂಗೆ ಶೀರಪ್ಪ" ಎಂದು ಕೊಟ್ಟ ಉತ್ತರಕ್ಕೆ ಶೀಟಿ ಹೊಡೆದು ಚಪ್ಪಾಳೆ ಹೊಡೆದರು.

ಮುಂದುವರಿದ ಲತೀಫ "ನಮ್ದು ಜುಮ್ಮಕ್ಕನಿಗೆ ಕಬಾಬ್ ಕೊಟ್ಟ ಒಂದು ಆಶ್ರಯದ್ದು ಮನೆ ಕೇಳಿದ್ದಿನಿ ಶೀರಪ್ಪ" ಎನ್ನುತ್ತಾನೆ. ಅದಕ್ಕೆ ಸೀರ "ಏನು ಸಾಬುರ್ಲ ನೀವು. ಇತ್ತಿತ್ತ ಬಾ ಅಂದ್ರೆ ಇದ್ದಿದ್ನೂ ಕಿತ್ಗತ್ತಿರಲ್ಲೊ" ಎನ್ನುತ್ತಾನೆ. "ಅಂಗೆ ಸಾಬರಗೆ ಬೈಬ್ಯಾಡ ಶೀರಪ್ಪ, ಅಂತ ದ್ಯಾವೇಗೌಡ್ರು ಮುಂದಿಂದು ಜನ್ಮಕ್ಕೆ ಸಾಬರಾಗಿ ಹುಟ್ಟತಿನಿ ಅಂತ ಹೇಳಿಬಿಟ್ಟದಾರೆ ಗೊತ್ತ" ಎಂದು ಲತೀಫ ಉತ್ತರಿಸುತ್ತಾನೆ.

"ಮುಂದಿನ ಜನಮ ಯಾಕೆ? ಈಗ್ಲೆ ಆಗಕ್ಕೇನೂ" ಎಂದು ಹೊಟೇಲ್ ಚಿಕ್ಕ ಹೇಳುತ್ತಾನೆ.

"ಈಗಾಗಕ್ಕೆ ಬರದಿಲ್ಲ ಕಣೊ. ಸಾಬರಾಗಬೇಕಾದ್ರೆ ಮುಂಜಿ ಮಾಡಿಸಿರಬೇಕು. ದ್ಯಾವೇಗೌಡ್ರಿಗೆ ಸುಗರಿರದ್ರಿಂದ ಸಪ್‌ಟಿಕ್ ಆಗಿ ತೊಂದ್ರೆ ಅನುಭವಸದಕ್ಕಿಂತ ಮುಂದಿನ ಜನ್ಮಕ್ಕೆ ಪೋಸ್ಟ್‌ಪೋನ್ ಮಾಡ್ಯವುರೆ" ಎಂದು ಸೀರ ಹೇಳಿದಾಗ ನವಿಲೆಹಾಳಿನ ಜನ ಶೀಟಿ ಹೊಡೆದು ನಕ್ಕರು.

ಅವರ ಮತ್ತೊಂದು ನಗುವಿನ ಸ್ಫೋಟವನ್ನು ಇಲ್ಲಿ ದಾಖಲಿಸುವುದಾದರೆ:

ಲತೀಫ: "ನಾನು ಬಡವ ಜೀವಿಬಿಟ್ಟಿನಿ ನನ್ಗೆ ಮನೆ ಕೊಡದು ನಿಮ್ದು ಕೆಲ್ಸ ಅಂತಿನಿ."

ಸೀರ: "ಅಂತ ಟಿಪ್ಪು ಸುಲ್ತಾನ್ ಮರಿಮಗನೆ ಬೀದಿಲವುನೆ. ನಿಂದ್ಯಾವ ಲೆಕ್ಕನೋ."

ಲತೀಫ: "ನಾನು ಟಿಪ್ಪು ಸುಲ್ತಾನ್‌ಗೆ ಮರಿಮಗ ಶೀರಪ್ಪ"

ಸೀರ: "ಅದ್ಯಂಗ್ಲಾ?"

ಲತೀಫ: "ನಮ್ದು ಅಜ್ಜಿದು ಅಜ್ಜಿದು ಅಜ್ಜಿಗೆ ಟಿಪ್ಪು ಸುಲ್ತಾನ್ ಮಡಕ್ಕೊಂಡಿದ್ನಂತೆ."

ಸೀರ: "ಮನೆ ಕೆಲಸಕ್ಕೆ ಮಡಿಕೊಂಡಿದ್ನೇನೊ."

ಲತೀಫ: "ಇಲ್ಲಾ ಸೀರಪ್ಪ, ನಿಜವಾಗ್ಲು ಮಡಿಕ್ಕೊಂಡಿದ್ನಂತೆ."

ಸೀರ: "ಅಂಗೆ ನೋಡಿದ್ರೆ ನಾನೂ ಮಾಗಡಿ ಕ್ಯಂಪೇಗೌಡನಿಗೆ ಮರಿಮಗ ಆಗಬೇಕಪ್ಪ."

ಲತೀಫ: "ಹ್ಯಂಗೆ ಆಗಬೇಕು?"

ಸೀರ: "ನಮ್ಮಜ್ಜಿಯಾರಜ್ಜಿಯ ಮಾಗಡಿ ಕೆಂಪೇಗೌಡ ಮಡಿಕಂಡಿದ್ನಂತೆ."

ಲತೀಫ: "ಓ, ನಿಂದೂ ನಂದೂ ಒಂದೇ ಕೇಸು."

ಕಾಳಮಾವ: "ಲೇ ಅದಂಗಲ್ಲ ಕಂಡ್ರಿಲಾ. ಮಾಗಡಿ ಕಡೆಯಿಂದ ಒಬ್ಬ ದನಿವ್ಯಾಪಾರಕೆ ಬರೋನು. ಅವುನೆಸ್ರು ಕ್ಯಂಪೇಗೌಡ ಅಂತ. ಅವುನ್ಯಂಗಿದ್ದ ಗೊತ್ತೆ? ಆಗೋ ನೋಡಲ್ಲಿ ಬತ್ತನಲ್ಲ ಅಂಗಿದ್ದ".

ಆಗ ಬೆಂಗಳೂರ ಭೂಗತ ಲೋಕದ ವ್ಯಕ್ತಿಯೊಂದು ಹೋಟೆಲಿಗೆ ಕಾಫಿ ಕುಡಿಯಲು ಬರುತ್ತೆ, ಅದರ ವೃತ್ತಾಂತ ಕೇಳಿದ ಕಾಳಮಾವ

"ಜನ ಹಿಂಗೂ ಹೊಟ್ಟೆ ಹೊರಿತರ? ಜನ ಹೆದರಿಸಿಕೊಂಡು ಬಾಳದೂ ಒಂದು ಬಾಳೆ? ನಿನಿಗೇನ್ಲ ಇಲ್ಲಿ ಕೇವು? ಹೋಯ್ತಿಯೊ ಇಲ್ಲವೊ" ಎಂದು ಗದರಿಸುತ್ತಾನೆ. ಆಗ ಭೂಗತ ರೌಡಿ ಕಾಲ್ಕೀಳುತ್ತಾನೆ. ಅದನ್ನು ಕಂಡು ಲತೀಫ ದನಿ ಎತ್ತರಿಸಿ: "ಹೇ ಸೈತಾನ್, ಹೋಗೋ ನಿನ್ನಂಮ್ಮುಂದು ಬೊಸುಡ" ಎಂದುಬಿಡುತ್ತಾನೆ. ಆಗ ನವಿಲೆಹಾಳಿನ ಜನ ನಕ್ಕ ನಗು ಈ ಲೇಖನ ಬರೆಯುವಂತೆ ಮಾಡಿತು.

ಅದೇನಾದರಾಗಲಿ ಈ ನವಿಲೆಹಾಳು ನಮ್ಮ ಭಾರತದ ಆತ್ಮವಿದ್ದಂತೆ. ನಾವು ಕಷ್ಟದಿಂದ ಕಾಪಾಡಿಕೊಂಡು ಬಂದಿರುವ ಸಾಮರಸ್ಯವನ್ನು ಹಾಳುಮಾಡಲು ಮನೆಹಾಳರ ಪಡೆಗಳೇ ತಯಾರಾಗುತ್ತಿರುವ ಈ ಸಮಯದಲ್ಲಿ ನಮ್ಮ ಹಳ್ಳಿಗಳ ಸಾಮರಸ್ಯ ಹಾಳಾಗದಂತೆ ನಾವು ಎಚ್ಚರ ವಹಿಸಬೇಕಿದೆ.


ನವಿಲೆಹಾಳಿನ ಮುಸ್ಲಿಂ ಜನಾಂಗ, ಮುಸ್ಲಿಂ ಧರ್ಮದ ಒಂದು ಉಪಸಂಸ್ಕೃತಿ. ಇದು ಹಿಂದೂ ಧರ್ಮದ ಜೊತೆ ಎಷ್ಟರಮಟ್ಟಿಗೆ ಸಾಮರಸ್ಯ ಹೊಂದಿದೆಯೆಂದರೆ, ನವಿಲೆಹಾಳಿನಲ್ಲಿ ಬುರ್ಖಾ ಮಹಿಳೆಯರೇ ಕಡಿಮೆ. ಎಲ್ಲರೂ ತಮ್ಮತಮ್ಮ ಮನೆಗಳ ಜಗುಲಿಯ ಮೇಲೆ ಕುಳಿತು ನಾಟಕದ ಸಂಭಾಷಣೆ ಆಲಿಸುವುದನ್ನು ನೋಡಿದೆ. ಇದರ ಚಹರೆಯನ್ನು ಗಮನಿಸಿದರೆ ಇದೊಂದು ಮತಾಂತರದ ಗುಂಪಿನಂತೆ ಕಂಡರೂ ತಮ್ಮ ಉರುಸ್ ಹಬ್ಬವನ್ನು ದಸರಾ ಮತ್ತು ದೀಪಾವಳಿ ಜೊತೆ ಸೇರಿಸಿ ಮಾಡುತ್ತ ಬರುತ್ತಿರುವುದು ಧರ್ಮ ಸಾಮರಸ್ಯದ ಉನ್ನತವಾದ ಆದರ್ಶ. ಧರ್ಮವನ್ನು ಬದಿಗಿಟ್ಟು ಮಾನವೀಯ ನೆಲೆಯಲ್ಲಿ ಸಾಮರಸ್ಯ ಸಾಧಿಸಿಕೊಂಡು ಬರುತ್ತಿರುವ ನವಿಲೆಹಾಳಿನಲ್ಲಿ, ಮುಸ್ಲಿಂ ಮದುವೆಯೊಂದಕ್ಕೆ ಬಸ್ಸು ಹೊರಟರೆ ಈ ಬಸ್ಸು ಹಿಂದೂಗಳಿಂದ ತುಂಬಿರುತ್ತದೆ. ಹಾಗೆಯೇ ಹಿಂದೂ ಮದುವೆಯೊಂದಕ್ಕೆ ಬಸ್ಸುಗಳು ಹೊರಟರೆ ಮುಸ್ಲಿಮರು ತುಂಬಿರುತ್ತಾರೆ. ಭವಿಷ್ಯದಲ್ಲಿ ಈ ನಡವಳಿಕೆ ಮಾತ್ರ ಭಾರತದಲ್ಲಿ ಶಾಂತಿಸಮಾಧಾನಗಳು ನೆಲೆಗೊಳ್ಳುವಂತೆ ಮಾಡಬಲ್ಲವು.

■ ಬಿ. ಚಂದ್ರೇಗೌಡ

ಲಂಕೇಶ್ ವಾರ್ಷಿಕ ಚಂದಾ ವಿವರ
ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ...
ಚಂದಾ ವಿವರಗಳು ಹೀಗಿವೆ:
ಒಂದು ವರ್ಷಕ್ಕೆ : 700 ರೂ.
ಎರಡು ವರ್ಷಕ್ಕೆ : 1400 ರೂ.
ಮೂರು ವರ್ಷಕ್ಕೆ : 2000 ರೂ.
ಡಿಡಿ/ಚೆಕ್‌ಗಳನ್ನು 'ಲಂಕೇಶ್ ಮೀಡಿಯಾ' ಹೆಸರಿನಲ್ಲಿ ನಮ್ಮ ವಿತರಣಾ ವಿಭಾಗದ ಕಚೇರಿಗೆ ಕಳುಹಿಸಿ. ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.
ಹೆಚ್ಚಿನ ಮಾಹಿತಿಗಾಗಿ 9880302617 /080 26676427

ವೈದ್ಯನೂ ಸಂತನೂ

ಅರುಂಧತಿ ರಾಯ್ ಅವರು ಬಿ.ಆರ್.ಅಂಬೇಡ್ಕರ್ ಅವರ 'ಜಾತಿ ವಿನಾಶ' ಲೇಖನಕ್ಕೆ ಸಂಬಂಧಿಸಿದಂತೆ ಬರೆದಿರುವ 'ವೈದ್ಯನೂ ಸಂತನೂ' ಎಂಬ ಲೇಖನದ ಆಯ್ದ ಭಾಗಗಳನ್ನು ಇಲ್ಲಿ ನಮ್ಮ ಓದುಗರಿಗಾಗಿ ನೀಡಿದ್ದೇವೆ.





ಅರುಂಧತಿ ರಾಯ್

ಸುರೇಖಾ ಭೋತಮಾಂಗೆ ನಲವತ್ತು ವರುಷದ ಹೆಂಗುಸು. ಆಕೆಯೂ ಹಲವಾರು ಅಪರಾಧಗಳನ್ನು ಮಾಡಿದವಳೇ. ಹೆಣ್ಣಾಗಿ ಹುಟ್ಟಿದ್ದು, 'ಅಸ್ಪೃಶ್ಯ'ಳಾಗಿದ್ದು, ದಲಿತ ಹೆಂಗುಸಾಗಿದ್ದು ಇತ್ಯಾದಿ. ಆದರೆ ಆಕೆ 'ಸಾಕಷ್ಟು' ಬಡವಿಯಾಗಿರಲಿಲ್ಲ, ಅವಳ ಗಂಡನಿಗಿಂತಲೂ ಆಕೆ ಕಲಿತವಳಾಗಿದ್ದಳು. ಆದ್ದರಿಂದ ಮುಖ್ಯಸ್ಥೆಯಾಗಿ ಕುಟುಂಬವನ್ನು ನಡೆಸಬಲ್ಲವಳಾಗಿದ್ದಳು. ಅಂಬೇಡ್ಕರ್ ಅವಳ ಆದರ್ಶ ವ್ಯಕ್ತಿ. ಅವರಂತೆಯೇ ಆಕೆಯ ಕುಟುಂಬವೂ ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮವನ್ನು ಸ್ವೀಕರಿಸಿತ್ತು. ಸುರೇಖಾಳ ಮಗಂದಿರಾದ ಸುಧೀರ್ ಮತ್ತು ರೋಶನ್ ಕಾಲೇಜು ಕಲಿತವರಾಗಿದ್ದರು. ಹೈಸ್ಕೂಲು ಮುಗಿಸಲಿದ್ದ ಮಗಳು ಪ್ರಿಯಾಂಕಾಗೆ ಹದಿನೇಳರ ವಯಸ್ಸು. ಮಹರ್ ಜಾತಿಗೆ ಸೇರಿದ ಸುರೇಖಾ ಮತ್ತವಳ ಗಂಡ ಮಹಾರಾಷ್ಟ್ರದ ಖೈರ್ಲಾಂಜಿ ಎಂಬ ಹಳ್ಳಿಯಲ್ಲಿ ಸಣ್ಣ ಜಮೀನು ಕೊಂಡಿದ್ದರು. ಅದರ ಸುತ್ತಲೂ ತಮ್ಮದು ಮೇಲುಜಾತಿ ಎಂದು ಬೀಗುವ ಸವರ್ಣೀಯರ ಭೂಮಿ. ಆಕೆ ದಲಿತಳಾಗಿರುವುದರಿಂದ ಉತ್ತಮ ಬದುಕಿಗೆ ಆಸೆ ಪಡುವ ಹಕ್ಕಿಲ್ಲ ಎಂಬ ಧೋರಣೆಯನ್ನು ಪಂಚಾಯತ್ ತಳೆದಿತ್ತು. ಹಾಗಾಗಿಯೇ ಆಕೆ ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಹಾಕಿದಾಗ, ಹುಲ್ಲು ಮತ್ತು ಮಣ್ಣಿನಿಂದ ಕಟ್ಟಿಕೊಂಡಿದ್ದ ಗುಡಿಸಲನ್ನು ಇಟ್ಟಿಗೆ ಮನೆಯಾಗಿ ಬದಲಾಯಿಸಲು ಪ್ರಯತ್ನಿಸಿದಾಗ ಸುತಾರಾಂ ಒಪ್ಪಲಿಲ್ಲ, ಇತ್ತ ಜಮೀನಿಗೆ ಕಾಲುವೆ ನೀರನ್ನು ಬಳಸಲು ಅಥವಾ ಊರಿನ ಬಾವಿಯಿಂದ ನೀರು ಎಳೆದುಕೊಳ್ಳಲು ಹಳ್ಳಿಯವರು ಬಿಡಲಿಲ್ಲ, ಅವಳ ಜಮೀನನ್ನು ಹಾದುಹೋಗುವಂತೆ ಊರದಾರಿಯನ್ನು ಕಟ್ಟಲು ಪ್ರಯತ್ನಿಸಿದಾಗ ಆಕೆ ಪ್ರತಿಭಟಿಸಿದಳು. ಪ್ರತಿಯಾಗಿ ಅವಳ ಜಮೀನಿನ ಮೇಲೆಯೇ ಎತ್ತಿನ ಗಾಡಿಗಳನ್ನು ಓಡಿಸಲಾಯಿತು. ಬೆಳೆದುನಿಂತಿದ್ದ ಪೈರನ್ನು ಮೇಯಲು ದನಕರುಗಳನ್ನು ಬಿಡಲಾಯಿತು.

ಆದರೂ ಸುರೇಖಾ ಹಿಮ್ಮೆಟ್ಟಲಿಲ್ಲ, ಆಕೆ ಪೊಲೀಸರಿಗೆ ಕೊಟ್ಟ ದೂರಿಗೆ ಕ್ಯಾರೇ ಎಂಬ ಪ್ರತಿಕ್ರಿಯೆಯೂ ಬಾರದೇಹೋಯಿತು. ತಿಂಗಳುಗಳು ಕಳೆದವು. ಹಳ್ಳಿಯಲ್ಲಿ ಪರಿಸ್ಥಿತಿ ಹದಗೆಡುತ್ತಲೇ ಹೋಯಿತು. ಎಚ್ಚರಿಕೆಯ ರೂಪವಾಗಿ ಹಳ್ಳಿಗರು ಆಕೆಯ ಸಂಬಂಧಿಯೊಬ್ಬನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದರು. ಆಕೆ ಮತ್ತೆ ಪೊಲೀಸರಿಗೆ ದೂರನ್ನು ಒಯ್ದಳು. ಈ ಬಾರಿ ಪೊಲೀಸರು ಕೆಲವರನ್ನು ಬಂಧಿಸಿದ್ದೇನೋ ಸರಿ, ಆದರೆ ತಕ್ಷಣವೇ ಜಾಮೀನಿನ ಮೇಲೆ ಬಿಡುಗಡೆಯನ್ನೂ ಮಾಡಿದರು. 2006ರ ಸೆಪ್ಟೆಂಬರ್ 29ನೇ ದಿನದಂದು ಹೆಂಗಸರೂ ಸೇರಿದಂತೆ ಸುಮಾರು ಎಪ್ಪತ್ತು ಮಂದಿ ಕೋಪೋದ್ರಿಕ್ತ ಹಳ್ಳಿಗರು ಟ್ರ್ಯಾಕ್ಟರುಗಳಲ್ಲಿ ಬಂದಿಳಿದು ಸುರೇಖಾಳ ಮನೆಯನ್ನು ಸುತ್ತುಗಟ್ಟಿದರು. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಆಕೆಯ ಗಂಡ ಭೈಯಾಲಾಲ್ ಗಲಾಟೆ ಕೇಳಿ ಮನೆಯತ್ತ ದೌಡಾಯಿಸಿದ. ಮರೆಯಲ್ಲಿ ನಿಂತು ತನ್ನ ಕುಟುಂಬದ ಮೇಲಾಗುತ್ತಿದ್ದ ದಾಳಿಯನ್ನು ವೀಕ್ಷಿಸಿ ದೌಹಾರಿ ಹತ್ತಿರದ ಹಳ್ಳಿ ದುಸಾಲಾಗೆ ಓಡಿಹೋಗಿ ತನ್ನ ಸಂಬಂಧಿಯೊಬ್ಬನ ಮೂಲಕ ಪೊಲೀಸರಿಗೆ ಫೋನ್ ಮಾಡಿಸಿದ. ಈ ದೇಶದಲ್ಲಿ ಪೊಲೀಸರು ಫೋನ್ ಎತ್ತಿಕೊಳ್ಳಲೂ ಸಹ ಯಾರದ್ದಾದರೂ ವಶೀಲಿಬಾಜಿ ಬೇಕಲ್ಲ! ಆದರೆ ಪೊಲೀಸರು ತಿರುಗಿಯೂ ಸಹ ನೋಡಲಿಲ್ಲ, ಗುಂಪು ಸುರೇಖಾಳನ್ನು ಮತ್ತು ಅವಳ ಮಗಳು ಪ್ರಿಯಾಂಕ ಹಾಗು ಇಬ್ಬರು ಮಗಂದಿರ ಜೊತೆ ಮನೆಯಿಂದ ಹೊರಗೆಳೆಯಿತು. ಅದರಲ್ಲಿ ಒಬ್ಬ ಸ್ವಲ್ಪಮಟ್ಟಿಗೆ ಕುರುಡನಾಗಿದ್ದ. ಮಗಂದಿರಿಗೆ ತಮ್ಮ ತಾಯಿಯ ಮತ್ತು ತಂಗಿಯ ಮೇಲೆ ಅತ್ಯಾಚಾರ ನಡೆಸುವಂತೆ ಗುಂಪು ಹುಕುಂ ನೀಡಿತು. ಗಂಡುಮಕ್ಕಳು ವಿರೋಧಿಸಿದಾಗ ಅವರ ಜನನೇಂದ್ರಿಯಗಳನ್ನು ಊನಗೊಳಿಸಿ ಕೊನೆಗೆ ಅವರನ್ನು ಸಾಯಿಸಲಾಯಿತು.

ಸುರೇಖಾ ಮತ್ತು ಪ್ರಿಯಾಂಕರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಸಾಯುವತನಕ ಹೊಡೆದು ನಾಲ್ಕೂ ದೇಹಗಳನ್ನು ಹತ್ತಿರದ ಕಾಲುವೆಗೆ ಎಸೆಯಲಾಯಿತು. ಶವಗಳು ಕಣ್ಣಿಗೆ ಬಿದ್ದಿದ್ದು ಮಾರನೆಯ ದಿನವೇ.

ಮೊದಮೊದಲು ಮಾಧ್ಯಮಗಳು ಅದನ್ನು 'ನೈತಿಕತೆ'ಗೆ ಸಂಬಂಧಪಟ್ಟ ಕೊಲೆಯೆಂದು ಬಿಂಬಿಸಿದವು. ಸುರೇಖಾಳಿಗೆ ಈ ಹಿಂದೆ ಕೊಲೆಯಾದ ಸಂಬಂಧಿಯ ಜೊತೆ ಅನೈತಿಕ ಸಂಬಂಧವಿತ್ತೆಂದೂ, ಹಳ್ಳಿಗರು ಅದರಿಂದ ಕೋಪಗೊಂಡಿದ್ದರೆಂದೂ ಸೂಚಿಸಲಾಯಿತು. ಆದರೆ ದಲಿತ ಸಂಘಟನೆಗಳು ಸಾಮೂಹಿಕ ಪ್ರತಿಭಟನೆಗಳನ್ನು ನಡೆಸಿ ಈ ಬರ್ಬರ



ಖೈರ್ಲಾಂಜಿಯಲ್ಲಿ ಬಲಿಯಾದ ದಲಿತರ ಭೋತಮಾಂಗೆ ಕುಟುಂಬ

ಕೃತ್ಯದ ನ್ಯಾಯಾಂಗ ತನಿಖೆಗೆ ಒತ್ತಾಯಿಸಿದವು. ಪ್ರಜಾವೇದಿಕೆಗಳು ನಡೆಸಿದ ಸತ್ಯಶೋಧನೆಯ ವರದಿಗಳು ಸಾಕ್ಷಿ ಪುರಾವೆಗಳನ್ನು ಹೇಗೆ ತಿರುಚಲಾಗಿದೆ ಎಂಬುದನ್ನು ಬಯಲಿಗೆಳೆದವು. ಕೆಳಗಿನ ನ್ಯಾಯಾಲಯ ಕೊನೆಗೂ ತೀರ್ಪನ್ನು ನೀಡಿದಾಗ ಮುಖ್ಯ ಆರೋಪಿಗಳಿಗೆ ಮರಣ ಶಿಕ್ಷೆಯನ್ನು ನೀಡಿದರೂ ಪರಿಶಿಷ್ಟ ಜಾತಿ ಮತ್ತು ಜನಾಂಗಗಳ ಮೇಲಿನ ಅತ್ಯಾಚಾರ ತಡೆ ಕಾಯಿದೆಯನ್ನು ಈ ಘಟನೆಯ ಮೇಲೆ ಪ್ರಯೋಗಿಸಲು ನಿರಾಕರಿಸಿತು. ನ್ಯಾಯಾಧೀಶರ ಪ್ರಕಾರ ಈ ಘಟನೆ ನಡೆದಿದ್ದು ಕೇವಲ 'ಪ್ರತೀಕಾರ'ದ ಸಲುವಾಗಿ. ಅಲ್ಲಿ ಅತ್ಯಾಚಾರ ನಡೆದಿದೆ ಎನ್ನುವುದಕ್ಕೆ ಯಾವ ಪುರಾವೆಯೂ ಇಲ್ಲವೆಂದೂ, ನಡೆದಿರುವ ಕೊಲೆಗಳಿಗೆ ಜಾತಿಯ ಬಣ್ಣ ಹಚ್ಚುವ ಅಗತ್ಯವಿಲ್ಲವೆಂದೂ ಹೇಳಿದರು. ಮಾಡಿರುವ ಅಪರಾಧವನ್ನೇ ಮೆದುವಾಗಿಸಿ ತೀರ್ಪು ನೀಡುವಾಗ ಮಾತ್ರ ಮರಣ ಶಿಕ್ಷೆಯಂತಹ ಕಟುವಾದ ಶಿಕ್ಷೆಯನ್ನು ಇತ್ತರೆ ಮೇಲಿನ ಕೋರ್ಟು ಆ ಶಿಕ್ಷೆಯನ್ನು ಕಡಿಮೆ ಮಾಡುವ ಸುಲಭ ಸಾಧ್ಯತೆಯಿರುತ್ತದೆ. ಅಪರಾಧ ಏನೇ ಇದ್ದರೂ ಮರಣ ಶಿಕ್ಷೆ ನೀಡುವುದು

ನ್ಯಾಯವೆನ್ನಿಸಿಕೊಳ್ಳಲಾಗದು. ಆದರೆ ಜಾತೀಯತೆ ಎನ್ನುವುದು ಭಾರತದಂತಹ ದೇಶದಲ್ಲಿ ಇವತ್ತಿಗೂ ಬಲವಾಗಿರುವ ಘೋರ ಸತ್ಯ ಎನ್ನುವುದನ್ನು ಕೋರ್ಟು ಗುರುತಿಸಿದ್ದರೆ ಅದು ನ್ಯಾಯದ ಕಡೆಗೆ ನಾವಿಡುವ ಒಂದು ಹೆಜ್ಜೆಯಾಗಿರುತ್ತಿತ್ತು, ಬದಲಾಗಿ ನ್ಯಾಯಾಧೀಶರು ಇಡೀ ಘಟನೆಯಲ್ಲಿ ಜಾತಿ ವೈಷಮ್ಯದ ಸಾಧ್ಯತೆಯನ್ನೇ ತಳ್ಳಿ ಹಾಕಿದ್ದು ವಿಷಾದನೀಯ.

ಸುರೇಖಾ ಭೋತಮಾಂಗೆ ಮತ್ತವಳ ಮಕ್ಕಳು ಬದುಕಿದ್ದುದು ಮಾರುಕಟ್ಟೆ ಪರವಾದ ಪ್ರಜಾಪ್ರಭುತ್ವದಲ್ಲಿ, ಹಾಗಾಗಿ ಅತ್ತ ವಿಶ್ವಸಂಸ್ಥೆಯಿಂದ ಭಾರತದ ಸರಕಾರಕ್ಕೆ 'ನಾನು ಸುರೇಖಾ' ಎಂಬ ಮನವಿಯಂಥದ್ದೇನೂ ಬರಲಿಲ್ಲ, ಇತ್ತ ಭಾರತದ ಪ್ರಭುಗಳಿಂದಲೂ ಈ ಹಿಂಸಾಚಾರವನ್ನು ಖಂಡಿಸುವ ಯಾವ ಸಂದೇಶವೂ ಹೊರಡಲಿಲ್ಲ, ಅದೂ ಸರಿಯೆ, ಇಲ್ಲದಿದ್ದರೆ ನಾವು ಜಾತಿಪಾಲಕರು ಎಂಬ ನೆಪದಲ್ಲಿ ನಮ್ಮ ಮೇಲೆ ಅಮೆರಿಕದ ಬಾಂಬುಗಳು ಬೀಳುವ ಸಾಧ್ಯತೆಯಿತ್ತಲ್ಲ?

ಇವತ್ತಿನ ನಮ್ಮ ದೇಶದ ಯಾವ ಪ್ರಜ್ಞಾವಂತರು ಮತ್ತು ಮೇಧಾವಿಗಳು ಹೇಳುವ ತಾಕತ್ತಿಲ್ಲದ ಕಹಿಸತ್ಯವೊಂದನ್ನು ಅಂಬೇಡ್ಕರ್ ಅಂದೇ ಘಂಟಾಘೋಷವಾಗಿ ಹೇಳಿದ್ದರು: "ಅಸ್ಪೃಶ್ಯನಿಗೆ ಹಿಂದೂಧರ್ಮವೆನ್ನುವುದು ಒಂದು ಕರಾಳ ಕೂಪ."

ಒಬ್ಬ ಬರಹಗಾರ್ತಿಗೆ 'ಅಸ್ಪೃಶ್ಯ', 'ಪರಿಶಿಷ್ಟ ಜಾತಿ' (SC), 'ಹಿಂದುಳಿದ ವರ್ಗ' (ST), 'ಇತರೆ ಹಿಂದುಳಿದ ವರ್ಗಗಳು' ಇತ್ಯಾದಿ ಪದಪುಂಜಗಳನ್ನು ಜೊತೆಯಲ್ಲಿ ಬದುಕುತ್ತಿರುವ ಮನುಷ್ಯರ ಮೇಲೆ ಪ್ರಯೋಗಿಸುವುದೇ ಒಂದು ಕರಾಳಕೂಪದಲ್ಲಿರುವ ಅನುಭವದಂತೆ. ಆದರೆ ಅಂಬೇಡ್ಕರರು ಅದನ್ನು ಹಿಂಜರಿಕೆಯಿಲ್ಲದೇ ತಣ್ಣಗಿನ ಕೋಪದಲ್ಲಿ ಉಪಯೋಗಿಸಿರುವ ರೀತಿಯಲ್ಲೇ ನಾನೂ

ಮಾಡಬೇಕು. ಈಗಿನ ದಿನಗಳಲ್ಲಿ 'ಅಸ್ಪೃಶ್ಯ' ಎಂಬ ಪದದ ಬದಲಿಗೆ ಮರಾಠಿಯ 'ದಲಿತ' (ಅಕ್ಷರಶಃ 'ಭಗ್ನ ಮಂದಿ') ಎಂಬ ಪದ ಬಳಕೆಯಾಗುತ್ತಿದೆ. ಅದನ್ನೇ 'ಪರಿಶಿಷ್ಟ ಜಾತಿ'(SC)ಗೂ ಅನ್ವಯಿಸಲಾಗುತ್ತಿದೆ. ರೂಪಾ ವಿಶ್ವನಾಥ್ ಎಂಬ ಚಿಂತಕಿಯ ಪ್ರಕಾರ ಅದು ತಪ್ಪು, ಯಾಕೆಂದರೆ 'ದಲಿತ' ಎನ್ನುವುದು ಜಾತಿಯ ವಿಷವರ್ತುಲದಿಂದ ತಪ್ಪಿಸಿಕೊಳ್ಳಲು ಮತಾಂತರ ಹೊಂದಿದವರನ್ನೂ ಒಳಗೊಳ್ಳುತ್ತದೆ, ನನ್ನ ಹಳ್ಳಿಯಲ್ಲಿ ಕ್ರಿಶ್ಚಿಯನ್ ಮತಕ್ಕೆ ಹೋದ ಪರ್‍ಯಾರರಂತೆ. ಆದರೆ ಅವರು 'ಪರಿಶಿಷ್ಟ ಜಾತಿ'ಗೆ ಸೇರುವುದಿಲ್ಲ, ಕಕಮಕ ಹಿಡಿಸುವ ಈ ಜಾತಿ ನಾಮಕರಣದ ಗೋಜಲೊಳಗೆ ಹೋದರೆ ಸಾಕು, ಘೋರ ಅಧಿಕಾರಿಶಾಹಿಯೊಬ್ಬನ ಕಡತದಲ್ಲಿ ತಿದ್ದಿ, ಅಳಿಸಿ, ಹೊಡೆದು ಹಾಕಿ ಮತ್ತೆ ಸೇರಿಸಿದ ಟಿಪ್ಪಣಿಗಳಂತೆ ಕಾಣುತ್ತವೆ. ಇದೆಲ್ಲದರಿಂದ ತಪ್ಪಿಸಿಕೊಳ್ಳಲು ನಾನು ಸದಾ ಅಲ್ಲದಿದ್ದರೂ, ಹೆಚ್ಚು ಕಮ್ಮಿ 'ಅಸ್ಪೃಶ್ಯ' ಎಂಬ ಪದವನ್ನೇ ಬಳಸಿದ್ದೇನೆ. ಮತಾಂತರ ಹೊಂದಿದ ದಲಿತರಿಗೆ ನಾನು ದಲಿತ ಸಿಖ್, ದಲಿತ ಮುಸ್ಲಿಮ್, ದಲಿತ ಕ್ರಿಶ್ಚಿಯನ್ ಎಂಬ ಪದಗಳನ್ನು ಉಪಯೋಗಿಸಿದ್ದೇನೆ.

ಸಧ್ಯಕ್ಕೆ ಅಂಬೇಡ್ಕರರು ಸೂಚಿಸಿದ ಕರಾ... ಹಿಂತಿರುಗೋಣ.

* * *

ಅಂಬೇಡ್ಕರರ ಪ್ರಕಾರ "ಸಮುದಾಯವ... ಕೆಲವರ ಬದುಕಿನ ಮೂಲಭೂತ ಹಕ್ಕುಗಳ... ಕಸಿದುಕೊಂಡಾಗ ಯಾವ ಕಾನೂನು, ಪಾಲಿ... ಮತ್ತು ನ್ಯಾಯ ವ್ಯವಸ್ಥೆಯೂ ನಿಜವಾದ ಅ... ಅದನ್ನು ನೀಡಲು ಅಸಮರ್ಥವಾಗಬಹುದು... ಅಮೆರಿಕಾದ ನೀಗ್ರೊಗಳಿಗೆ, ಜರ್ಮನಿಯ ಯಹೂದಿಗಳಿಗೆ ಮತ್ತು ಭಾರತದ ಅಸ್ಪೃಶ್ಯರಿ... ಮೂಲಭೂತ ಹಕ್ಕುಗಳು ಎಂಬ ಪರಿಕಲ್ಪನ... ಪ್ರಯೋಜನವಾದರೂ ಏನು? ಬರ್ಕ್ ಹೇಳಿ... ಬಹುಸಂಖ್ಯಾತರನ್ನು ಶಿಕ್ಷಿಸುವ ಬಗೆಯಾದರು... ಹೇಗೆ?"

ಯಾವುದೇ ಹಳ್ಳಿಯ ಪೊಲೀಸನನ್ನು ಅ... ಅಧಿಕೃತ ಜವಾಬ್ದಾರಿಯೇನು ಎಂದು ಕೇಳಿ... ಬಾಯಿಂದ ಬರುವುದು ಸಿದ್ಧ ಉತ್ತರವಾಗಿರ... 'ಶಾಂತಿಭಂಗವಾಗದಂತೆ ನೋಡಿಕೊಳ್ಳುವುದು... ಹೆಚ್ಚಿನಂಶ ಅದಕ್ಕೆ ಒಂದೇ ದಾರಿ: ಜಾತಿವ್ಯ... ಕಾಪಾಡುವುದು. ಅಂತಹ ವ್ಯವಸ್ಥೆಯಲ್ಲಿ ದ... ಬದುಕುವ ಆಸೆ, ತುಡಿತ, ಹಾರೈಕೆಗಳೆಲ್ಲವೂ... ಶಾಂತಿಭಂಗದ ಪ್ರಯತ್ನಗಳಾಗಿ ತೋರುತ್ತವ...

'ಜಾತಿವಿನಾಶ'ವೂ ಅಂತಹ 'ಶಾಂತಿಭಂ... ಪ್ರಯತ್ನವೇ.

* * *

ಪ್ರಸ್ತುತ ಮನುಷ್ಯ ಬದುಕಿನ ಕಳಂಕಗಳ... ವರ್ಣಭೇದನೀತಿ, ಜನಾಂಗೀಯತೆ, ಲಿಂಗಭೇ... ಆರ್ಥಿಕ ಸಾಮ್ರಾಜ್ಯಶಾಹಿತನ ಮತ್ತು ಧಾರ್ಮಿ... ಮೂಲಭೂತವಾದಗಳೆಲ್ಲವೂ ಅಂತಾರಾಷ್ಟ್ರೀ... ವೇದಿಕೆಗಳಲ್ಲಿ ರಾಜಕೀಯವಾಗಿ ಮತ್ತು ಬೌ... ಚರ್ಚೆಗೆ ಒಳಗಾಗಿವೆ. ಮನುಷ್ಯ ಸಮಾಜದ... ಹೀನಾಯವಾದ ಶ್ರೇಣೀಕೃತ ವ್ಯವಸ್ಥೆಯನ್ನು ... ಹಾಕಿರುವ ಜಾತಿವ್ಯವಸ್ಥೆ ಹೇಗೆ ಆ ಮಟ್ಟದ... ಮತ್ತು ಖಂಡನೆಯ ದೃಷ್ಟಿಯಿಂದ ತಪ್ಪಿಸಿಕೊ... ಬಹುಶಃ ಅದು ಹಿಂದೂ ಧರ್ಮದೊಂದಿಗೆ... ತಳುಕು ಹಾಕಿಕೊಂಡಿದೆಯೆಂದರೆ ಜಾತಿಯೆ... ಅನಿಷ್ಟವೂ ಹಿಂದೂ ಧರ್ಮದ 'ಶಾಂತಿ' ... ಭಾಗವಾಗಿಯೇ ತೋರುತ್ತಿರಬಹುದು. ಅ... ಆಧ್ಯಾತ್ಮ, ಅಹಿಂಸೆ, ಸಹನೆ, ಸಸ್ಯಾಹಾರ, ಗಾ... ಯೋಗ, ಬ್ಯಾಕ್ ಪ್ಯಾಕರ್ಸ್, ಬೀಟಲ್ಸ್ ಇತ್ಯಾ... ಒಂದಕ್ಕೊಂದು ಹೊಸೆದುಕೊಂಡು ಹೊರಗಿ... ಅದನ್ನು ಬಿಡಿಸಿ ನೋಡುವ, ಅರ್ಥ ಮಾಡಿ... ಪ್ರಯತ್ನವೇ ಅಸಾಧ್ಯವಾಗಿರಬಹುದು.

ವರ್ಣಭೇದದಂತೆ ಜಾತಿಗೆ ಕಣ್ಣಿಗೆ ಕಾ... ಬಣ್ಣವಿಲ್ಲ, ಹಾಗಾಗಿ ಸುಲಭವಾಗಿ ಕಾಣಸಿಗ... ಅಷ್ಟೇಅಲ್ಲ, ವರ್ಣಭೇದವನ್ನು ಎತ್ತಿ ಹಿಡಿ... ಎತ್ತರದ ಸ್ಥಾನಗಳಲ್ಲಿ ಇಲ್ಲದಿರಬಹುದು. ಆ... ಜಾತಿವಾದವನ್ನು ಸಂಭ್ರಮದಿಂದ ಎತ್ತಿ ಹಿಡಿ... ಆಯಕಟ್ಟಿನ ಸ್ಥಾನಗಳಲ್ಲಿ ವಿರಾಜಮಾನರಾಗಿ... ಅವರು ರಾಜಾರೋಷವಾಗಿಯೇ ಜಾತಿಯೆ... ಜನರನ್ನು ಮತ್ತು ಸಮುದಾಯಗಳನ್ನು ಒಳ... ಮತ್ತು ಇತ್ಯಾತ್ಮಕ ರೀತಿಯಲ್ಲಿ ಬೇರಾಗಿಸು... ಸಾಮಾಜಿಕ ಅಂಟಿನಂತೆ ಎಂದು ಘೋಷಿ... ಹಲವಾರು ಸವಾಲುಗಳನ್ನು ಭಾರತೀಯ ... ಸಮರ್ಥವಾಗಿ ಎದುರಿಸಿರುವುದೇ ಜಾತಿವ್ಯ... ಮೂಲಕ ಎಂದು ಬೀಗುತ್ತಿರುತ್ತಾರೆ. ಜಾತಿ... ಆಧಾರದ ಮೇಲೆ ನಡೆಯುವ ತಾರತಮ್ಯ... ಮತ್ತು ಜನಾಂಗೀಯತೆಯಷ್ಟೇ ಘೋರ ... ಸತ್ಯವನ್ನು ಭಾರತೀಯ ವ್ಯವಸ್ಥೆ ಸುತರಾಂ ಒಪ್ಪಿಕೊಳ್ಳುವುದಿಲ್ಲ, 2001ರಲ್ಲಿ ಡರ್ಬನ್... ವರ್ಣಭೇದ ವಿರೋಧಿ ಸಮ್ಮೇಳನದಲ್ಲಿ ದ... ಜಾತಿಪ್ರಶ್ನೆಯನ್ನು ಎತ್ತಿದಾಗ ಭರತ ಸರಕಾ... ತರಾಟೆಗೆ ತೆಗೆದುಕೊಂಡಿತ್ತು, ಅದು ಆಂತ... ವಿಷಯವಂತೆ. ಜಾತಿವ್ಯವಸ್ಥೆಗೂ ವರ್ಣಭೇ... ವ್ಯತ್ಯಾಸವಿದೆ, ಜಾತಿ ಬೇರೆ, ವರ್ಣ ಬೇರೆ ... ಉದ್ದುದ್ದಕ್ಕೆ ವಾದಿಸುವ ಹಲವಾರು ಸಮಾ... ಪ್ರಮೇಯಗಳನ್ನು ಅದು ಉದ್ಧರಿಸಿತ್ತು, ಅ... ಇದ್ದಿದ್ದರೆ ಒಪ್ಪಿಕೊಳ್ಳುತ್ತಿದ್ದರೋ ಏನೋ. ... ಡರ್ಬನ್ ಸಮ್ಮೇಳನದಲ್ಲಿ ದಲಿತ ಕಾರ್ಯ... ಪ್ರತಿಪಾದಿಸುತ್ತಿದ್ದ ವಿಷಯ ಇದು: ಜಾತಿ ... ಜನಾಂಗ ಬೇರೆ ಬೇರೆ ವಿಷಯಗಳಿರಬಹು... ಜಾತೀಯತೆಗೂ ಜನಾಂಗೀಯತೆಗೂ ಹೋ...

...ರಷ್ಟೂ ಹುಟ್ಟಿನಿಂದ ಬರುವ ...ಸಮರ್ಥಿಸುತ್ತವೆ. ಈ ವಾದವನ್ನು ...ಕ್ಕನಲ್ಲಿ 2014ರ ಜನವರಿ 15 ...ನ್ ಲೂಥರ್ ಕಿಂಗ್ ಅವರ ಜನ್ಮದಿನದಂದು ವಾಷಿಂಗ್ಟನ್ ...ದ ಬಹಿರಂಗಸಭೆಯಲ್ಲಿ 'ಭಾರತದಲ್ಲಿ ... ನಡೆಯುತ್ತಿರುವ ದೌರ್ಜನ್ಯದ ...ಕೆಯ 'ಸಹಾನುಭೂತಿ ಪ್ರಕಟನೆ'ಗೆ ...ಕನ್ನರು ಸಹಿ ಹಾಕಿದರು.

ಅಭಿವೃದ್ಧಿ, ಅಸಮ್ಮತೆ, ನ್ಯಾಯ ...ಬಂಧಪಟ್ಟ ಚರ್ಚೆಗಳಲ್ಲಿ ಸುಪ್ರಸಿದ್ಧ ...ದ್ವಾಂಸರಿಗೆ ಜಾತಿ ಎನ್ನುವುದು ಒಂದು ... ಉಪಶೀರ್ಷಿಕೆಯಾಗಿ ಅಥವಾ ...ದು ಅಡಿ ಟಿಪ್ಪಣಿಯಾಗಿ ಮಾತ್ರ ಒದಗಿ ...ಷಯ. ಸರಳೀಕೃತ ಮಾರ್ಕ್ಸಿಯನ್ ...ಗೆ ಜಾತಿಯನ್ನು ಬಲವಂತವಾಗಿ ...ದ ಪ್ರಗತಿಪರ ಮತ್ತು ಎಡಪಂಥೀಯ ...ಯನ್ನು ಇನ್ನಷ್ಟು ಕಣ್ಣಿಗೆ ಕಾಣದಂತೆ ... 'ಕಾಣದಂತೆ ಮಾಯವಾಗಿಸುವ ...ವೊಮ್ಮೆ ಉದ್ದೇಶಪೂರಿತ ರಾಜಕೀಯ ...ಲವೊಮ್ಮೆ ಜಾತಿ ಎನ್ನುವುದು ... ಎಡವಿಬೀಳದಂತಹ ವಿಶಿಷ್ಟ ಮತ್ತು ...ನ ಕಡೆಯಿಂದ ಹೇಗೆ ...ದೆ ಎಂದರೆ ಸಿಡುಬು ...ನ ಹಾಗೆ ಜಾತಿಯೂ ಮಾಯವಾಗಿದೆ ...ನ್ನೆ ನಂಬಿಸುವಷ್ಟು!

...ಹುಟ್ಟಿನ ಬಗ್ಗೆ ಮಾನವಶಾಸ್ತ್ರಜ್ಞರು ...ಹಲವಾರು ವರುಷಗಳವರೆಗೆ ತಲೆ ...ಕೂರಬಹುದು. ಆದರೆ ... ಸವಲತ್ತು-ಶ್ರಮ ಇತ್ಯಾದಿಗಳ ...ಲೆ ಸಂಯೋಜಿತವಾಗಿರುವ ತರತಮ ...ಗೆ, ಅಸ್ತಿತ್ವದಲ್ಲಿರುವಂತೆ ...ವುದು ಯಾವ ಶಕ್ತಿಗಳ ಕೃಪೆಯಿಂದ ಅರ್ಥವಾಗುವುದೇನೂ ಕಷ್ಟವಲ್ಲ. ...ಲಿರಮಿಡ್ಡಿನ ತುತ್ತತುದಿಯಲ್ಲಿ ಮಡಿ ...ಣ ಕೂತಿದೆ. ಇತ್ತ ತಳಗಟ್ಟಿನಲ್ಲಿ ...ವ ಸವಲತ್ತಿನ ಸೌಲಭ್ಯವೂ ಇಲ್ಲದೆ ...ಮಗಳನ್ನು ಹೊತ್ತು ನಿಂತಿದೆ. ಈ ... ಸಂಕೀರ್ಣವನ್ನು ಜಾತಿ-ಆಧಾರಿತ ...ತ್ತಿಯೊಂದಿಗೆ ತಳುಕು ಹಾಕಲಾಗಿದೆ. ...ಬಿಯಾ ವಿಶ್ವವಿದ್ಯಾಲಯದ ...ಕ್ಕೊಂದು ಬರೆದ Castes in India ...ಜಾತಿ) ಲೇಖನದಲ್ಲಿ ಅಂಬೇಡ್ಕರ್ ...ಅಂತರ್ವಿವಾಹ ಪದ್ಧತಿಯನ್ನೊಳಗೊಂಡ "ಮೀಸಲು ವರ್ಗ" ಎಂದು ... ಇನ್ನೊಂದು ಸಂದರ್ಭದಲ್ಲಿ ಜಾತಿಯ ...ನ್ನು "ಆರೋಹಣ ಪ್ರಮಾಣದ ಅವರೋಹಣ ಪ್ರಮಾಣದ ತಾತ್ಸಾರ" ...ಪಿಸಿದ್ದರು.

...ಂದು ಜಾತಿಪದ್ಧತಿ ಎಂದು ಕರೆಯುವ ...ಹೂ ಧರ್ಮದ ಮೂಲಪಠ್ಯಗಳಲ್ಲಿ ... ಧರ್ಮ ಅಥವಾ ಚಾತುರ್ವರ್ಣ ಎಂದು ...ತ್ತದೆ. ತಮ್ಮದೇ ಕುಲಕಸುಬು ...ದಿಮೂರು ನಾಲ್ಕು ಸಾವಿರ ಅಂತರ್ವಿವಾಹ ... ಜಾತಿ ಮತ್ತು ಉಪಜಾತಿಗಳನ್ನು ...ತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ...ಗಳಾಗಿ ವಿಂಗಡಿಸಲಾಗಿದೆ. ಇದರಿಂದಾಚೆ ...ವರ್ಣ ಜಾತಿಗಳಾದ ಅಪೂರ್ಣ ... ಅತಿಶೂದ್ರರು. ಅವರು ಮುಟ್ಟ ... ನೋಡಬಾರದವರು, ...ರದವರು. ಅವರ ಇರುವಿಕೆ, ಸ್ಪರ್ಶ ... ನೆರಳೂ ಸಹ ವಿಶೇಷ ಹಕ್ಕುಗಳನ್ನು ...ಪಡೆದುಕೊಂಡಿರುವ ಮೇಲ್ಜಾತಿಯವರ ...ಲಿಸಾರದು. ಅಂತಸ್ಸಂಬಂಧವನ್ನು ತಪ್ಪಿಸಲು ...ದಾಯಗಳಲ್ಲಿ ಅನ್ಯಗೋತ್ರ ವಿವಾಹದ ...ಹಲವಾರು ಗೋತ್ರಗಳನ್ನು ಹುಟ್ಟು ...ಸುವುದುಂಟು. ಈ ಅಂತರಗೋತ್ರ ... ಸ್ವಗೋತ್ರ ಪದ್ಧತಿಯಷ್ಟೇ ಕಟ್ಟುನಿಟ್ಟಾಗಿ ... ಬಂದೋಬಸ್ತು ಮಾಡಲಾಗುತ್ತದೆ. ...ಮುದಾಯದ ಹಿರಿಯರು ತಮ್ಮಲ್ಲೇ ...ಶಿ ತಲೆ ಕತ್ತರಿಸುವುದಕ್ಕೋ ಅಥವಾ ...ವುದಕ್ಕೋ ಸಮ್ಮತ ನೀಡುತ್ತಾರೆ. ಭಾರತದ ... ಸ್ವಾತಂತ್ರ್ಯವೂ ತನ್ನದೇ ಆದ ಜಾತಿ ... [illegible] ರೂಪಿಸಿಕೊಂಡು ... [illegible]. ಯಾವುದೇ [illegible]



ಆಧಾರವಿಲ್ಲದ ಈ ಕಟ್ಟುಕಟ್ಟಲೆಗಳು ಅಮೆರಿಕಾದ ಜಿಮ್ ಕ್ರೊನ ನಿಯಮಗಳನ್ನೂ ನಾಚಿಸಬಲ್ಲವು. ಊರಾಚೆಗಿನ ಹೊಲಗೇರಿಗೆ ದೂಡಲ್ಪಟ್ಟ ಈ ಅಸ್ಪೃಶ್ಯರು ಸವರ್ಣೀಯರು ಹಾದುಹೋಗುವ ರಸ್ತೆಗಳನ್ನು ಉಪಯೋಗಿಸುವಂತಿರಲಿಲ್ಲ, ಊರಬಾವಿಗಳಿಂದ ನೀರು ಕುಡಿಯುವಂತಿರಲಿಲ್ಲ, ಹಿಂದೂ ದೇವಸ್ಥಾನಗಳಿಗೆ ಪ್ರವೇಶಿಸುವಂತಿರಲಿಲ್ಲ, ಮೇಲ್ಜಾತಿಯವರು ಹೋದ ಶಾಲೆಗಳಿಗೆ ಕಾಲಿಡುವಂತಿರಲಿಲ್ಲ ಹಾಗೂ ತಮ್ಮ ದೇಹದ ಮೇಲ್ಭಾಗವನ್ನು ಮುಚ್ಚುವಂತಿರಲಿಲ್ಲ. ಇವರು ತೊಡುವ ಬಟ್ಟೆ, ಆಭರಣ ಎಲ್ಲವೂ ಅವರ ಹುಕುಮಿನ ಮೇರೆಗೆ. ಅಂಬೇಡ್ಕರರಂತೆ ಮಹರ್ ಜಾತಿಗೆ ಸೇರಿದವರಂತೂ ತಮ್ಮ ಸೊಂಟಕ್ಕೆ ಕಸಬರಿಕೆಯನ್ನು ಸಿಕ್ಕಿಸಿಕೊಂಡು ತಮ್ಮ ಮೈಲಿಗೆ ಹೆಜ್ಜೆ ಗುರುತುಗಳನ್ನು ತಾವೇ ಗುಡಿಸಿ ಅಳಿಸಿಕೊಳ್ಳುತ್ತಾ ಸಾಗಬೇಕಿತ್ತು, ಇತರರು ಕತ್ತಿನ ಸುತ್ತ ಉಗುಳು ತಟ್ಟೆಯನ್ನು ಕಟ್ಟಿಕೊಂಡು ತಮ್ಮ ಮೈಲಿಗೆ ಉಗುಳು ಎಲ್ಲಿಯೂ ಬೀಳದಂತೆ ಎಚ್ಚರದಿಂದ ಸಾಗಬೇಕಿತ್ತು, ಹಕ್ಕುಳ್ಳ ಜಾತಿಯ ಗಂಡಸರಿಗೆ ಮುಟ್ಟಬಾರದ ಜಾತಿಯ ಹೆಂಗಸರ ದೇಹದ ಮೇಲೆ ಪ್ರಶ್ನಾತೀತ ಹಕ್ಕಿತ್ತು; ಪ್ರೀತಿಗೆ ತಾನೆ ಮಡಿ ಮೈಲಿಗೆ ಎಲ್ಲ? ಅತ್ಯಾಚಾರಕ್ಕೆ ಎಂತದ್ದೂ ಇಲ್ಲ. ಅದು ಮಾತ್ರ ಶುದ್ಧ. ಇಂದಿಗೂ ಭಾರತದ ಹಲವಾರು ಕಡೆ ಇದೇ ಸ್ಥಿತಿ ಗತಿ.

ಅದು ಮನುಷ್ಯನದೋ ದೇವರದೋ, ಒಟ್ಟಿನಲ್ಲಿ ಇಂತಹ ಸಮಾಜ-ರಚನೆಯನ್ನು ಊಹಿಸಿಕೊಂಡು ಕಾರ್ಯರೂಪಕ್ಕಿಳಿಸಿದ ಕಲ್ಪನಾಶಕ್ತಿಗೆ ಏನನ್ನಬೇಕು?

ಅಷ್ಟೇ ಅಲ್ಲ, ವರ್ಣಾಶ್ರಮದ ಧರ್ಮ ಸಾಕಾಗಲಿಲ್ಲವಾ? ತಗೋ ಇಲ್ಲಿದೆ ಕರ್ಮವೆಂಬ ಹೊರೆ! ಹಕ್ಕಿಲ್ಲದ ಜಾತಿಯವರು ಕಳೆದ ಜನ್ಮಗಳಲ್ಲಿ ಮಾಡಬಾರದ್ದನ್ನು ಮಾಡಿದ್ದಕ್ಕೆ ಈ ಜನ್ಮದಲ್ಲಿ ಈ ಶಿಕ್ಷೆ! ಮತ್ತೆಯೂ ಸೊಲ್ಲೆತ್ತುವ ಪಾಪಕ್ಕೆ ಕೈಯಿಕ್ಕಿದಿರೋ, ಮುಂದಿನ ಜನ್ಮಜನ್ಮಾಂತರಗಳಲ್ಲಿಯೂ ಮುಟ್ಟಬಾರದವರಾಗಿ ಹುಟ್ಟುತ್ತೀರಿ! ಹುಷಾರ್!

"ಜಾತಿಯನ್ನು ಆಧಾರವಾಗಿಟ್ಟುಕೊಂಡು ಮಾಡುವಂತಹ ಸಮಾಜ ರಚನೆಯಷ್ಟು ಹೀನ ವ್ಯವಸ್ಥೆ ಮತ್ತೊಂದಿರಲಾರದು" ಎಂದರು ಅಂಬೇಡ್ಕರ್. "ಈ ವ್ಯವಸ್ಥೆ ಜನರ ಶಕ್ತಿಯನ್ನು ಕುಂದಿಸಿ, ನಿಶ್ಚೇತರನ್ನಾಗಿಸುತ್ತದೆ. ಬದುಕಿನ ಯಾವುದೇ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾರದಷ್ಟು ಹೇಳವರನ್ನಾಗಿಸುತ್ತದೆ."

* * *

ಸಾಕಷ್ಟು ಬದಲಾವಣೆಯಾಗಿರುವುದೇನೋ ನಿಜ. ಭಾರತ ಒಬ್ಬ ದಲಿತ ಅಧ್ಯಕ್ಷರನ್ನು, ಒಬ್ಬ ದಲಿತ ಮುಖ್ಯ ನ್ಯಾಯಾಧೀಶರನ್ನೂ ಸಹ ಕಂಡಿತು. ದಲಿತರನ್ನು ಮತ್ತು ಇತರೆ ಅಧೀನ ಜಾತಿಗಳನ್ನು ಪ್ರಧಾನವಾಗುಳ್ಳ ರಾಜಕೀಯ ಪಕ್ಷಗಳು ಅಸ್ತಿತ್ವಕ್ಕೆ ಬಂದದ್ದು ವಿಶೇಷವಷ್ಟೇ ಅಲ್ಲ, ಅದೊಂದು ಕ್ರಾಂತಿಕಾರಕ ಬೆಳವಣಿಗೆಯೂ ಹೌದು. ಮೇಲ್ನೋಟಕ್ಕೆ ಅದರ ಸಂಖ್ಯೆ ಗೌಣವೇ ಇರಬಹುದು, ಅಧಿಕಾರ ಹಿಡಿದಿರುವವರು ಬಹುಸಂಖ್ಯಾತರ ಕನಸಿನ ಬದುಕನ್ನೇ ಬದುಕುತ್ತಿರಬಹುದು. ಆದರೂ ಸಹ ನಮ್ಮ ಚರಿತ್ರೆಯತ್ತ ಒಮ್ಮೆ ಹೊರಳಿ ನೋಡಿದರೆ ರಾಜಕೀಯ ಕ್ಷೇತ್ರದಲ್ಲಿ ದಲಿತ ಸ್ವಾಭಿಮಾನ ಸೆಟೆದು ನಿಂತಿರುವುದು ಒಂದು ಪ್ರಗತಿಪರ ಬೆಳವಣಿಗೆಯೇ ಸರಿ. ಬಹುಜನ ಸಮಾಜ ಪಾರ್ಟಿಯ ವಿರುದ್ಧ ಕೇಳಿಬರುವ ಭ್ರಷ್ಟಾಚಾರ, ಸಂವೇದನಾಶೂನ್ಯತೆಯ 'ಆರೋಪಗಳು ಹಿಂದಿನ ಪಕ್ಷಗಳಿಗೆ ಇನ್ನಷ್ಟು ಹೆಚ್ಚು ಒಪ್ಪುತ್ತವೆಯಾದರೂ ಬಿಎಸ್ಪಿ ವಿರುದ್ಧ ಏಳುವ ಅವಹೇಳನಕಾರಿ ದನಿ ತಾರಕಕ್ಕೆ ಏರುತ್ತ ಹೋಗುತ್ತದೆ. ಯಾಕೆಂದರೆ ಅದರ ನಾಯಕಿ ಮಾಯಾವತಿ ಒಬ್ಬ ಅವಿವಾಹಿತ ದಲಿತ ಹೆಣ್ಣು, ಆದರೆ ಎರಡರ ಬಗ್ಗೆಯೂ ಕ್ಯಾರೆ ಎನ್ನದ ವ್ಯಕ್ತಿ. ಬಿಎಸ್ಪಿಯ ಸಮಸ್ಯೆಗಳು ಏನೇ ಇರಲಿ, ದಲಿತ ಶಕ್ತಿಯನ್ನು ಸಂಘಟಿಸುವತ್ತ, ದಲಿತ ಸ್ವಾಭಿಮಾನವನ್ನು ಬೆಳೆಸುವತ್ತ ಅದು ನೀಡಿದ ಕೊಡುಗೆಯನ್ನು ಗೌಣವಾಗಿಸುವುದು ಸಲ್ಲ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ ದಮನಿತ ಜಾತಿಗಳು ಬಲವನ್ನು ಪಡೆದುಕೊಳ್ಳುತ್ತಾ ಹೋಗುವುದು ಸ್ವಾಗತಿಸಬೇಕಾದ ಬೆಳವಣಿಗೆಯಾದರೂ ನಿಜವಾದ ಆತಂಕ ಹುಟ್ಟುವುದು ಪ್ರಜಾಪ್ರಭುತ್ವದ ಬುಡವನ್ನೇ ಅಲ್ಲಾಡಿಸುವ ಕೆಲವು ವಿದ್ಯಮಾನಗಳಿಂದ.

ಸೋವಿಯತ್ ಯೂನಿಯನ್ನಿನ ಪತನದ ನಂತರ ಭಾರತ ಅಲಿಪ್ತ ನೀತಿಯ ಮುಂಚೂಣಿಯಲ್ಲಿದ್ದ ತನ್ನ ಸ್ಥಾನವನ್ನು ಬಿಟ್ಟು ಅಮೆರಿಕ ಮತ್ತು ಇಸ್ರೇಲಿನ 'ಸಹಜ ಮಿತ್ರ'ನಾಗಿ ತನ್ನ ಸ್ಥಾನವನ್ನು ಪುನರ್‌ರೂಪಿಸಿಕೊಂಡಿತು. ತೊಂಭತ್ತರ ದಶಕದಲ್ಲಿ ತನ್ನ ರಕ್ಷಿತ ಮಾರುಕಟ್ಟೆಯ ಸ್ಥಿತಿಯನ್ನು ಬಿಟ್ಟುಕೊಟ್ಟು ಭಾರತ ಐವತ್ತು ವರುಷಗಳಿಂದ ಸಾರ್ವಜನಿಕ ಹಣದಲ್ಲಿ ಕಟ್ಟಿಕೊಂಡಿದ್ದ ತನ್ನ ರಾಷ್ಟ್ರೀಯ ಮೂಲಸೌಕರ್ಯಗಳನ್ನು ಅತ್ಯಗತ್ಯ ಸೇವೆಗಳು ಮತ್ತು ನೈಸರ್ಗಿಕ ಸಂಪನ್ಮೂಲಗಳೊಂದಿಗೆ ಖಾಸಗಿ ಕಾರ್ಪೊರೇಶನ್ನಿಗಳಿಗೆ ವಹಿಸಿಕೊಟ್ಟು ಜಾಗತಿಕ ಬಂಡವಾಳಕ್ಕೆ ಬಾಗಿಲನ್ನು ತೆರೆದು ತೀವ್ರವಾದ ಆರ್ಥಿಕ ಸುಧಾರಣೆಗಳಿಗೆ ನಾಂದಿ ಹಾಡಿತು. ಇಪ್ಪತ್ತು ವರುಷಗಳ ನಂತರ ಒಟ್ಟು ಆಂತರಿಕ ಉತ್ಪನ್ನದ (GDP) ಬೆಳವಣಿಗೆಯಲ್ಲಿ ಅದ್ಭುತವಾಗಿ ಯಶಸ್ಸು ಕಂಡಿದ್ದರೂ ಸಹ (ಇತ್ತೀಚೆಗೆ ಅದೂ ಇಲ್ಲ) ಸಂಪತ್ತು ಬರಬರುತ್ತಾ ಕೆಲವೇ ಮಂದಿಯ ಕೈಯಲ್ಲಿ ಸೇರಿರುವುದನ್ನು ಕಾಣುತ್ತೇವೆ. ಪ್ರಸ್ತುತ ಭಾರತದಲ್ಲಿ ಸುಮಾರು ನೂರು ಮಂದಿ ಅತಿ ಶ್ರೀಮಂತರ ಕೈಯಲ್ಲಿ ಭವ್ಯ ಭಾರತದ ಜಿಡಿಪಿಯ ಕಾಲುಭಾಗದಷ್ಟು ಸಂಪತ್ತು ಕೊಳೆಯುತ್ತಿದೆ. 1.2 ಬಿಲಿಯನ್ ಜನಸಂಖ್ಯೆಯುಳ್ಳ ದೇಶದಲ್ಲಿ ಎಂಟುನೂರು ಮಿಲಿಯನ್ನಿಗಿಂತ ಹೆಚ್ಚು ಜನರು ದಿನಕ್ಕೆ ಇಪ್ಪತ್ತು ರೂಪಾಯಿಗಳಿಗಿಂತ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ. ದೈತ್ಯಗಾತ್ರದ ಕಾರ್ಪೊರೇಶನ್ನುಗಳು ದೇಶವನ್ನು ನಿಯಂತ್ರಿಸುತ್ತಿವೆ. ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳು ಅವುಗಳ ಸಹಾಯಕ ಓಡುವಳಿಗಳಾಗಿ ಮಾರ್ಪಟ್ಟಿವೆ.

ಇವೆಲ್ಲ ವಿದ್ಯಮಾನಗಳು ಪಾರಂಪರಿಕ ಜಾತಿಜಾಲಗಳ ಮೇಲೆ ಯಾವ ಪರಿಣಾಮ ಬೀರಿವೆ? ಕೆಲವರ ಪ್ರಕಾರ ಕೈಗಾರಿಕಾ ಕ್ರಾಂತಿಯ ನಂತರ ಪಾಶ್ಚಿಮಾತ್ಯ ಸಮಾಜ ತನ್ನ ಸಮಗ್ರತೆಯನ್ನು ಕಳೆದುಕೊಂಡು ವಿಚ್ಛಿನ್ನವಾಗಿದ್ದರೆ ಜಾತಿಪದ್ಧತಿ ಭಾರತವನ್ನು ಅಂತಹ ಅಪಾಯದಿಂದ ಪಾರು ಮಾಡಿದೆ. ಉಳಿದವರ ತದ್ವಿರುದ್ಧ ವಾದದ ಪ್ರಕಾರ ಹಿಂದೆಂದೂ ಕಾಣದಂತ ಪ್ರಮಾಣದಲ್ಲಿ ನಡೆದಿರುವ ನಗರೀಕರಣ ಮತ್ತು ಉದ್ಯೋಗದ ಸ್ವರೂಪದಲ್ಲೇ ಕಾಣುವ ತೀವ್ರ ಬದಲಾವಣೆಗಳು ಹಳೆಯ ಬದುಕಿನ ಕ್ರಮವನ್ನೇ ಬುಡಮಟ್ಟ ಅಲುಗಾಡಿಸಿ ಜಾತಿಯನ್ನು ಪೂರ್ತಿ ಮಾಯವಾಗಿಸಿಲ್ಲದಿದ್ದರೂ ಸಹ ಅಪ್ರಸ್ತುತವಾಗಿಸಿವೆ. ಎರಡು ವಾದಗಳನ್ನೂ ಗಂಭೀರವಾಗಿ ಪರಿಗಣಿಸುವ ಅವಶ್ಯಕತೆ ಇದೆ. ಮುಂದಿನ ಸ್ವಲ್ಪ ಏಕಪಕ್ಷೀಯವೆನ್ನಿಸಬಹುದಾದ ಉಪಕಥೆಗೆ ಕ್ಷಮೆಯಿರಲಿ. ಆದರೆ ಸಾಮಾನ್ಯೀಕರಣಿಸುವ ಪ್ರಯತ್ನಗಳು ವಾಸ್ತವಾಂಶಗಳನ್ನು ಬದಲಾಯಿಸಲಾರವಲ್ಲ?

ಇತ್ತೀಚೆಗೆ ಫೋರ್ಬ್ಸ್ ಪತ್ರಿಕೆ ಐವತ್ತೈದು ಮಂದಿ ಭಾರತೀಯ ಡಾಲರ್ ಬಿಲಿಯನೇರರ ಪಟ್ಟಿಯೊಂದನ್ನು ಪ್ರಕಟಿಸಿತ್ತು. ಅಷ್ಟಕ್ಕೂ ಅದು ಬಹಿರಂಗಪಡಿಸಿದ ಸಂಪತ್ತಿನ ಆಧಾರದ ಮೇಲೆ ಮಾತ್ರ ತಯಾರಿಸಿದಂತ ಪಟ್ಟಿ. ಅವರ ನಡುವಿನ ಸಂಪತ್ತಿನ ಹಂಚಿಕೆಯೂ ಸಹ ಒಂದು ಕಡಿದಾದ ಪಿರಮಿಡ್ಡೇ. ಮೇಲೆ ಇರುವ ಹತ್ತು ಮಂದಿಯ ಒಟ್ಟು ಸಂಪತ್ತು ಕೆಳಗಿರುವ ನಲ್ವತ್ತೈದು ಮಂದಿಯ ಒಟ್ಟು ಸಂಪತ್ತನ್ನು ಮೀರಿಸುತ್ತದೆ. ಆ ಮೇಲಿನ ಹತ್ತು ಮಂದಿಯಲ್ಲಿ ಏಳು ಜನ ವೈಶ್ಯರು. ಅವರೆಲ್ಲ ಜಗತ್ತಿನ ಎಲ್ಲಾ ಕಡೆ ಹರಡಿರುವ ಮಹಾ ಕಾರ್ಪೊರೇಷನ್ನುಗಳ ಪ್ರಮುಖ ಕಾರ್ಯನಿರ್ವಾಹಕ ಅಧಿಕಾರಿಗಳು. ಅವರು ನಡೆಸುವ ವಾಣಿಜ್ಯ ಚಟುವಟಿಕೆಗಳು ಹಲವಾರು. ಬಂದರು, ಗಣಿ, ತೈಲ ನಿಕ್ಷೇಪ, ಅನಿಲ ಕ್ಷೇತ್ರ, ಹಡಗು ರವಾನೆ, ಔಷಧೀಯ, ಸೆಲ್ ಫೋನ್ ಜಾಲ, ಪೆಟ್ರೊಕೆಮಿಕಲ್, ಅಲ್ಯುಮಿನಿಯಮ್, ಟಿವಿ ಜಾಲ, ತಾಜಾ ಆಹಾರ ಮಳಿಗೆ, ಹೈಸ್ಕೂಲು, ಚಲನಚಿತ್ರ ತಯಾರಿಕೆ, ಸ್ಟೆಮ್ ಸೆಲ್ ಶೇಖರಣಾ ವ್ಯವಸ್ಥೆ, ವಿದ್ಯುತ್ ಸರಬರಾಜು ಮತ್ತು ವಿಶೇಷ ಆರ್ಥಿಕ ವಲಯಗಳು .. ಇತ್ಯಾದಿ. ಅವರ ಹೆಸರುಗಳು ಹೀಗಿವೆ; ಮುಖೇಶ್ ಅಂಬಾನಿ (ರಿಲೈಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್), ಲಕ್ಷ್ಮಿ ಮಿಟ್ಟಲ್ (ಆರ್ಸೆಲೊರ್ ಮಿಟ್ಟಲ್), ದಿಲೀಪ್ ಶಾಂಘ್ವಿ (ಸನ್ ಫಾರ್ಮಸ್ಯೂಟಿಕಲ್ಸ್), ರೂಯಿಯ ಬ್ರದರ್ಸ್ (ರೂಯಿಯ ಗುಂಪು), ಕೆ.ಎಂ.ಬಿರ್ಲಾ (ಆದಿತ್ಯ ಬಿರ್ಲಾ ಗುಂಪು), ಸಾವಿತ್ರಿ ದೇವಿ ಜಿಂದಾಲ್ (ಓ.ಪಿ. ಜಿಂದಾಲ್ ಗುಂಪು), ಗೌತಮ್ ಅದಾನಿ (ಅದಾನಿ ಗುಂಪು) ಮತ್ತು ಸುನಿಲ್ ಮಿಟ್ಟಲ್ (ಭಾರತಿ ಏರ್ಟೆಲ್). ಉಳಿದ ನಲವತ್ತೈದು ಮಂದಿಯಲ್ಲಿ ಸಹ ಹತ್ತೊಂಬತ್ತು ಮಂದಿ ವೈಶ್ಯರು. ಉಳಿದವರು ಹೆಚ್ಚಿನಂಶ ವ್ಯಾಪಾರಿ ವೃತ್ತಿಗೆ ಸೇರಿದ ಪಾರ್ಸಿ, ಬೋಹ್ರಾ, ಖತ್ರಿ ಸಮುದಾಯದವರು ಹಾಗೂ ಬ್ರಾಹ್ಮಣರು. ಈ ಪಟ್ಟಿಯಲ್ಲಿ ಒಬ್ಬನೇ ಒಬ್ಬ ದಲಿತನೂ ಇಲ್ಲ, ಆದಿವಾಸಿಯೂ ಇಲ್ಲ.

ಇಂಗ್ಲಿಷ್ ಮೂಲ: **ಅರುಂಧತಿ ರಾಯ್**

ಕನ್ನಡಕ್ಕೆ: **ಸುಕನ್ಯಾ ಕನಾರಳ್ಳಿ**

ಕವಿಶೈಲದಲ್ಲಿ ಕಂಡ ನವಿಲು



ಕವಿಶೈಲದ ಕಲ್ಲುಬಂಡೆಯ ಮೇಲೆ
ಮಬ್ಬು ಕವಿದ ಸಂಜೆಯ ವೇಳೆ
ಮೋಡ ಕಟ್ಟಿದ ಭಾನು
ಮಂಜು ಮೆತ್ತಿದ ಭುವಿ
ಎರಡೂ ಪರಸ್ಪರ ಒಂದಾದಂತಿದ್ದವು

'ಮಾತಿಲ್ಲ ಮೈಲಿಗೆ' ಎಂಬ ಕವಿ ಸಾಲು
ಅಲ್ಲೊಂದು ಕಲ್ಲಿನ ಮೇಲೆ ಕೆತ್ತಿದ್ದು
ಓದಿನ ಭರಾಟೆಗೆ ಸಿಲುಕಿ ನೊಂದಿತ್ತು

ಅದಲ್ಲಿಯೆ ಇತ್ತು ನವಿಲು
ಆಗಲೇ ಗರಿ ಬಿಚ್ಚತೊಡಗಿತ್ತು
ತನಗೆ ತಾನೇ ರಂಗ ಸಿದ್ಧಪಡಿಸುತಿತ್ತು?
ನಮ್ಮ ಆಧಮ ನಡವಳಿಕೆಗೆ ಬೆಚ್ಚಿ

ಬಿಚ್ಚಿದ ಗರಿಯೊಂದಿಗೆ ಓಡತೊಡಗಿದ ನವಿಲು
ಕ್ಯಾಮರಾಗಳ ಕಣ್ಣಿಗೆ ಆಹಾರವಾಯಿತು

ನಮ್ಮ ಖುಷಿಗೆ ಕಾರಣವಾದ
ಬಿಚ್ಚತೊಡಗಿದ ಅದರ ಗರಿ
ಗೌಜಿಗೆ ಸಿಲುಕಿ ಮುರುಟಿಹೋಯಿತು

ಭುವಿ-ಭಾನಿನ ಸಮ್ಮಿಳನದಲ್ಲಿ
ನಡೆಯಬಹುದಾದ ಅದ್ಭುತ ಕುಣಿತ
ತೊಮ್ಮಬಹುದಾಗಿದ್ದ ಗಂಡು-ಹೆಣ್ಣಿನ ಸಾಂಗತ್ಯ
ಎಲ್ಲದಕ್ಕೂ ಕೈಯಾರೆ ಕಲ್ಲು ಬೀಸಿ
ರಸಭಂಗದಲ್ಲಿ ಸಂಭ್ರಮಿಸಿದ
ನಮ್ಮ ದುರುಳತನ
ಇದೀಗ ನನ್ನಲ್ಲಿ ಪಾಪಪ್ರಜ್ಞೆ.

- ಕೆ.ಅಕ್ಷತಾ

ನರಕ ಚತುರ್ದಶಿಯ ದುರಂತ ನಾಯಕ ಭೂಮಿ ಪ



ಭಾರತದಲ್ಲಿ ಗಣಿತದ ದಶಮಾನ ಪದ್ಧತಿ ಹಾಗೂ ಸೊನ್ನೆಯ ಸಂಕೇತ ಹುಟ್ಟಿದ್ದು ನಿಜ. ಅಂದಮಾತ್ರಕ್ಕೆ ನಾವು ಸೊನ್ನೆಗಳನ್ನು ಬೇಕಾಬಿಟ್ಟಿ ಉಪಯೋಗಿಸಿ ಮಾತು ಮಾತಿಗೆ ಲಕ್ಷ-ಕೋಟಿ ಎಂಬ ಲೆಕ್ಕದಲ್ಲಿ ಮಾತನಾಡಿದರೆ ಎಷ್ಟೆಲ್ಲಾ ಮೂರ್ಖತನವಾಗುತ್ತದೆ ಎಂದು ವೈದಿಕರ ಪೌರಾಣಿಕ ಕತೆಗಳನ್ನು ವಿಶ್ಲೇಷಿಸಿದರೆ ತಿಳಿಯುತ್ತದೆ. ಒಂದು ಮನ್ವಂತರ ಎಂದರೆ 31 ಕೋಟಿ ವರ್ಷಗಳಂತೆ. ಆಗ ಮನುಷ್ಯ ಜಾತಿಯೇ ಇರಲಿಲ್ಲ, ಹಾಗಿರುವಾಗ ಯುಗ-ಮನ್ವಂತರ-ಕಲ್ಪದ ಲೆಕ್ಕಾಚಾರ ಇಡಲು ಯಾರು ಸ್ಟಾಪ್ ವಾಚ್ ಮತ್ತು ಕ್ಯಾಲ್ಕುಲೇಟರ್ ಹಿಡಿದು ಕುಳಿತಿದ್ದರೋ ಗೊತ್ತಿಲ್ಲ. ಎಲ್ಲವೂ ಅತಿರಂಜಿತ ಕಾಲ್ಪನಿಕ ಕಥೆಗಳು.

ದೀಪಾವಳಿ ಬಂದಿರುವುದರಿಂದ ಅದಕ್ಕೆ ಸಂಬಂಧಿಸಿದ ನರಕ ಚತುರ್ದಶಿಯ ಹಿಂದಿರುವ ಕಾಲ್ಪನಿಕ ಕಥೆಯನ್ನೇ ನಾವು ವಿಶ್ಲೇಷಿಸಬಹುದು.

ನರಕಾಸುರ ಹದಿನಾರು ಸಾವಿರ ರಾಜಕುಮಾರಿಯರನ್ನು ಅಪಹರಿಸಿ ತಂದು ಒಂದು ಪ್ರತ್ಯೇಕ ಮಹಲಿನಲ್ಲಿ ಇಡುತ್ತಾನೆ. ಅವನು ಮಾಯಾ ವಿದ್ಯೆಯಿಂದ ಒಂದೇ ಸಲಕ್ಕೆ ಇವರನ್ನೆಲ್ಲ ಅಪಹರಿಸಿ ತಂದಿರಲಿಲ್ಲ, ಅವನು ಸಾವಿರಾರು ರಾಜರೊಂದಿಗೆ ಯುದ್ಧ ಮಾಡಿ ಸೋಲಿಸಿ ಅವರ ಅರಮನೆಯಲ್ಲಿದ್ದ ಕನ್ಯತ್ವ ಕಳೆದುಕೊಳ್ಳದೇ ಶುದ್ಧವಾಗಿರುವ ರಾಜಕುಮಾರಿಯರನ್ನೇ ಅಪಹರಿಸಿ ತಂದಿದ್ದು. ಯಾಕೆಂದರೆ ಅವನು ಮಾಡಬೇಕೆಂದಿದ್ದ ಕನ್ಯಾ-ಯಾಗಕ್ಕೆ ಬಲಿಕೊಡಲು ಕೇವಲ ಕನ್ಯೆಯರು ಮಾತ್ರ ಅರ್ಹರು. ಅವನು ಆಕಾಶದಲ್ಲಿ ದೂರ ದೇಶಗಳಿಗೆ ಹಾರಿಹೋಗಿ ಯುದ್ಧ ಮಾಡಿದರೂ ಒಂದು ದಿನಕ್ಕೆ ಒಬ್ಬಳನ್ನು ಮಾತ್ರ ಅಪಹರಿಸಿ ತರಲು ಸಾಧ್ಯ. ಹಾಗಾದರೆ ಹದಿನಾರು ಸಾವಿರ ಕನ್ಯೆಯರನ್ನು ತರಲು ಅವನಿಗೆ ಹದಿನಾರು ಸಾವಿರ ದಿನಗಳಾದರೂ ಬೇಕು. ಹದಿನಾರು ಸಾವಿರ ದಿನ ಎಂದರೆ 44 ವರ್ಷ. ಹೀಗೆ 44 ವರ್ಷದ ನಂತರ ಅವನು ಮೊದಲ ಬ್ಯಾಚಿನಲ್ಲಿ ತಂದ 15-16 ವರ್ಷದ ಕನ್ಯೆಯರು ಅರವತ್ತು ವರ್ಷದ ಸೀನಿಯರ್ ಸಿಟಿಜನ್ ಆಗಿ ಮೆನೊಪಾಸ್ ತಲುಪುತ್ತಿದ್ದರು. ಕನ್ಯೆಯರಲ್ಲದ ಹಾಗೂ ಮೆನೋಪಾಸ್ ತಲುಪಿದ ಮಹಿಳೆಯರು ನರಕಾಸುರನ ಯಜ್ಞದ ಬಲಿಗೆ ಅನರ್ಹರಾಗುತ್ತಿದ್ದರು. ಹೀಗೆ ದಿನಗಳೆದಂತೆ ಮೆನೊಪಾಸ್ ಮುಟ್ಟುವವರ ಸಂಖ್ಯೆ ಹೆಚ್ಚಿದಂತೆ ಅವರ ಜಾಗದಲ್ಲಿ ಹೊಸ ಹೊಸ 16 ವರ್ಷದ ಕನ್ಯೆಯರನ್ನು ನರಕಾಸುರ ತರುವುದು ಅನಿವಾರ್ಯವಾಗಿತ್ತು. ಇದೊಂದು ಮುಗಿಯದ ಸರಪಳಿಯಂತೆ ಆಗುತ್ತಿತ್ತು, ಇಲ್ಲಿಗೆ ಈ ಕಥೆ ಸುಳ್ಳೆಂದು ಸ್ಪಷ್ಟವಾಯಿತು.

ಇನ್ನು ಹದಿನಾರು ಸಾವಿರ ಕನ್ಯೆಯರ ವಸತಿ ಮತ್ತು ದೈನಂದಿನ ಜೀವನ ವಿಶ್ಲೇಷಿಸಿ ನೋಡೋಣ. ಈ ಎಲ್ಲಾ ಕನ್ಯೆಯರು ಒಟ್ಟಾಗಿ ಒಂದೇ ಹಾಲಿನಲ್ಲಿ ಉದ್ದಕ್ಕೆ ಮಲಗುತ್ತಿದ್ದರೆ? ಅಥವಾ ಹದಿನಾರು ಸಾವಿರ ಬೇರೆ ಬೇರೆ ಕೋಣೆಗಳಿದ್ದವೇ? ಅವಕ್ಕೆ ಅಟ್ಯಾಚ್ಡ್ ಬಾತ್ರೂಮ್ ಇತ್ತೆ? ಅಥವಾ ಎಲ್ಲರೂ ಬೆಳಗಿನ ಜಾವ ಚೊಂಬು ಹಿಡಿದು ಗುಡ್ಡಕ್ಕೆ ಹೋಗುತ್ತಿದ್ದರೆ? ಆಗ ಅವರು ತಪ್ಪಿಸಿಕೊಂಡು ಓಡದಂತೆ ನೋಡಲು ಜೊತೆಗೆ ಕಾವಲುಗಾರರು ಹೋಗಿ ಅವರ ಸೊಂಟಕ್ಕೆ ಹಗ್ಗ ಕಟ್ಟಿ ಈಗಿನ ಪೊಲೀಸರಂತೆ ವಿರುದ್ಧ ದಿಕ್ಕಿಗೆ ಮುಖ ಮಾಡಿ ದೂರ ನಿಂತು ಚಿತ್ರವಿಚಿತ್ರ ಸಂಗೀತ ಕೇಳುತ್ತಿದ್ದರೆ? ನಲ್ವತ್ನಾಲ್ಕು ವರ್ಷ ಹೀಗೆಯೇ ರಿಪೀಟ್ ಆಗುತ್ತಿತ್ತೇ? ಈ ಕನ್ಯೆಯರನ್ನು ಬಂಧಿಸಿಟ್ಟ ನರಕಾಸುರನ ಮಹಲಿಗೆ ಕಾವಲಿದ್ದದ್ದು ಅವನ ಹತ್ತು ಗಂಡು ಮಕ್ಕಳು ಹಾಗೂ ಅವನ ಸೇನಾಪತಿ ಮುರಾಸುರನ ಏಳು ಗಂಡು ಮಕ್ಕಳು. ವೈದಿಕರ ಪುರಾಣ ಕಥೆ. ಎಂದಮೇಲೆ ಅಸುರರು ಮತ್ತು ಅವರ ಮಕ್ಕಳೆಲ್ಲಾ ದುಷ್ಟ ಕಾಮುಕರಾಗಿರಬೇಕು ತಾನೇ? ಹಾಗಿರುವಾಗ ಸಾವಿರಾರು ಸುರಸುಂದರ ಕನ್ಯೆಯರು ವರ್ಷಾನುಗಟ್ಟಲೆ ಕಣ್ಣ ಮುಂದೆಯೇ ಇರುವಾಗ ಈ ತರುಣ ಅಸುರರಿಗೆ ಕಾಮವಾಂಛೆ ಕಂಟ್ರೋಲ್ ಆಗಲು ಹೇಗೆ ಸಾಧ್ಯ? ಈ ಹದಿನೇಳು ಮರಿ ಅಸುರರು ನಿಸ್ಸಹಾಯಕ ರಾಜಕನ್ಯೆಯರನ್ನು ರೇಪ್ ಮಾಡದೇ ಇರಲು ಸಾಧ್ಯವೇ ಇಲ್ಲ. ಇನ್ನು 44 ವರ್ಷದಲ್ಲಿ ಕನ್ಯೆಯರಲ್ಲಿ ರೋಗರುಜಿನಗಳಿಂದ ಸತ್ತವರು ಎಷ್ಟು? ಅಥವಾ ಜೀವನದಲ್ಲಿ ಜಿಗುಪ್ಸೆಗೊಂಡು ಎಷ್ಟು ಸಾವಿರ ಕನ್ಯೆಯರು ಆತ್ಮಹತ್ಯೆ ಮಾಡಿಕೊಂಡಿರಬಹುದು? ಇವರ ಜಾಗಕ್ಕೆ ಮತ್ತೆ ಹೊಸ ರಾಜಕನ್ಯೆಯರನ್ನು ಅಪಹರಿಸಿ ತಂದು ನರಕಾಸುರ ತನ್ನ ಯಜ್ಞದ ಕೋಟಾ ತುಂಬಿಸಬೇಕು ತಾನೇ? 44 ವರ್ಷ ನರಕಾಸುರನಿಗೆ ಇದೇ ರೀತಿ ಖಾಲಿಯಾದ ಸ್ಥಳ ತುಂಬಿಸುವ ಕೆಲಸವೇ ಆಯಿತು ಪಾಪ. ಅವನ ಮಕ್ಕಳು ಹಾಗೂ ಇತರ ಗಂಡು ಸೇವಕರು ಮಜಾ ಮಾಡಿದ್ದೇ ಮಾಡಿದ್ದು. ಕನ್ಯೆಯರು, ಸೇವಕರು ಹಾಗೂ ಕಾವಲುಗಾರರು ಕೂಡಿ ಒಂದೇ ಮಹಲಿನಲ್ಲಿ ಕನಿಷ್ಠ ಐವತ್ತು ಸಾವಿರಕ್ಕಿಂತ ಹೆಚ್ಚು ಜನರಿದ್ದು ಅವರ ದಿನ-ದಿನದ ಆಹಾರ ಬಟ್ಟೆ ಔಷಧ ಮತ್ತು ಇತರ ದೈನಂದಿನ ಅಗತ್ಯಗಳನ್ನು ಪೂರೈಸಲು ನರಕಾಸುರನ ಸಂಪತ್ತೆಲ್ಲಾ ಕರಗಿ ಹೋಗಿರಬೇಕು. ಅದಕ್ಕಾಗಿ ಅವನೇ ಎಲ್ಲಾ ಕನ್ಯೆಯರನ್ನು ಕೃಷ್ಣನಿಗೆ ಧಾರೆ ಎರೆದು ಕೊಟ್ಟು ತಲೆಮರೆಸಿಕೊಂಡು ಹೋಗಿರಬಹುದು.

ಈ 16,000 ಸ್ತ್ರೀಯರಲ್ಲಿ ಸಣ್ಣ ವಯಸ್ಸಿನ ಹುಡುಗಿಯರು ಮಾತ್ರವಲ್ಲ ಮುದುಕಿಯರೂ ಇದ್ದು ಎಲ್ಲರನ್ನು ಕೃಷ್ಣ ಮದುವೆಯಾದ. ಈ ಎಲ್ಲರಿಗೂ ದ್ವಾರಕೆಯಲ್ಲಿ ಒಂದೊಂದು ಅರಮನೆ ಕಟ್ಟಿಸಿಕೊಟ್ಟು ಅಲ್ಲಿ ಪ್ರತಿಯೊಬ್ಬರಿಗೂ ಹತ್ತು-ಹದಿನೈದು ಸೇವಕರನ್ನು ನೇಮಿಸಿದ. ಹೀಗೆ ದ್ವಾರಕೆ ಎರಡು ಮೂರು ಲಕ್ಷ ಜನಸಂಖ್ಯೆಯ ಒಂದು ಸ್ಮಾರ್ಟ್ ಸಿಟಿ ಆಯಿತು.

ಕೃಷ್ಣನ ಎಂಟು ಮುಖ್ಯ ಪತ್ನಿಯರು ಹಾಗೂ 16,000 ಉಪಪತ್ನಿಯರಿಗೆ ಕಾಲ್ಕಾಂತರದಲ್ಲಿ ಪ್ರತಿಯೊಬ್ಬರಿಗೂ ಹತ್ತು ಗಂಡು ಹಾಗೂ ಒಂದು ಹೆಣ್ಣು ಮಗು ಜನಿಸಿತು. ಅಂದರೆ ಒಂದು ಲಕ್ಷ ಅರವತ್ತು ಸಾವಿರದ ಎಂಬತ್ತು (1,60,080) ಗಂಡು ಮಕ್ಕಳು ಮತ್ತು ಹದಿನಾರು ಸಾವಿರದ ಎಂಟು ಹೆಣ್ಣು ಮಕ್ಕಳು ಜನಿಸಿದವು. ಇದು ಕಾಲ್ಪನಿಕ ಕತೆಯಾದರೂ ಆ ಸಮಯದಲ್ಲೂ ಆಗಿನ ಸಮಾಜ ಸಂಪೂರ್ಣ ಪುರುಷ ಪ್ರಧಾನವಾಗಿತ್ತು ಮತ್ತು ಹೆಣ್ಣು ಭ್ರೂಣ ಹತ್ಯೆ ಆಗಲೂ ವಿಪರೀತವಾಗಿತ್ತು ಎಂಬುದನ್ನು ಸೂಚಿಸುತ್ತದೆ. ಇಲ್ಲದಿದ್ದರೆ ಎಲ್ಲಾ ಹದಿನಾರು ಸಾವಿರದ ಎಂಟು ಹೆಂಗಸರಿಗೆ ಆರ್ಡರ್ ಕೊಟ್ಟು ಮಾಡಿಸಿದಂತೆ ಹತ್ತು ಗಂಡು ಹಾಗೂ ಒಂದೇ ಒಂದು ಹೆಣ್ಣು ಹುಟ್ಟಿ ಪ್ರಕೃತಿಯ ಸಮತೋಲನ ಹಾಳಾಗಲು ಸಾಧ್ಯವೇ ಇಲ್ಲ. ಪ್ರಕೃತಿಯು ತಾನಾಗಿಯೇ ಎಂದೂ ಗಂಡು ಹೆಣ್ಣಿನ ಸಮತೋಲನ ಕೆಡಲು ಬಿಡುವುದೇ ಇಲ್ಲ.

ಮಹಾಭಾರತದ ಮುಸಲ ಪರ್ವದಲ್ಲಿ ಕೃಷ್ಣನ ಈ ಒಂದು ಲಕ್ಷ ಅರವತ್ತು ಸಾವಿರ ಚಿಲ್ಲರೆ ಗಂಡು ಮಕ್ಕಳು ತಮ್ಮತಮ್ಮಲ್ಲೇ ಹೊಡೆದಾಡಿ ಸಾಯುತ್ತಾರೆ. ಆದರೆ ಹದಿನಾರು ಸಾವಿರ ಹೆಣ್ಣು ಮಕ್ಕಳು ಬದುಕಿರುತ್ತಾರೆ, ಕೃಷ್ಣನ ಕೊನೆಯ ಆದೇಶದಂತೆ ಅರ್ಜುನನು ಇವರನ್ನೆಲ್ಲಾ ದ್ವಾರಕೆಯಿಂದ ಮಥುರೆಗೆ ಕರೆದೊಯ್ಯುವಾಗ ದಾರಿಯಲ್ಲಿ ಅಭಿರಾ ಎಂಬ ದರೋಡೆಕೋರ ಜನಾಂಗ ಅವರ ಸಂಪತ್ತನ್ನೆಲ್ಲ ದೋಚಿ ಹರೆಯದ ಹೆಣ್ಣು ಮಕ್ಕಳನ್ನೂ ಅಪಹರಿಸಿಕೊಂಡು ಹೋಗಿ ಮದುವೆಯಾಗುತ್ತಾರೆ. ಇಂದಿಗೂ ಗುಜರಾತಿನಲ್ಲಿ ಆಹಿರ್ ಅಥವಾ ಆಹಿರಾ (ಅಭಿರಾ) ಎಂಬ 'ಕ್ರಿಮಿನಲ್' ಜನಾಂಗವಿದ್ದು ಅವರು ತಾವು ಕೃಷ್ಣನ ವಂಶಜರು ಎಂದು ಹೆಮ್ಮೆಯಿಂದ ಈಗಲೂ ಹೇಳಿಕೊಂಡೇ ದಾರಿಹೋಕರ ದರೋಡೆ ಮಾಡುತ್ತಾರೆ.

ಆಗಿನ ಸಮಾಜದಲ್ಲಿಯೂ ನಾಲ್ಕು ಗೋಡೆಗಳ ಮಧ್ಯೆ ಹೆಣ್ಣುಗಳ ವಿಪರೀತ ಲೈಂಗಿಕ ಶೋಷಣೆಯಾಗುತ್ತಿತ್ತು ಎಂಬುದಕ್ಕೆ ಈ ಕೆಳಗಿನ ಘಟನೆ ಸಾಕ್ಷಿ. ಕೃಷ್ಣನ ಸ್ಫುರದ್ರೂಪಿ ಮಗ ಸಾಂಬ ಕೃಷ್ಣನಂತೆ ವೇಷ ಧರಿಸಿ ತನ್ನ ಸಾವಿರಾರು ಮಲತಾಯಂದಿರೊಂದಿಗೆ ಕಾಮಕೇಳಿ ನಡೆಸುತ್ತಾನೆ. ಕೃಷ್ಣನಿಗೆ ತನ್ನ ಪ್ರೀತಿಯ ಮಗನೇ ಅವನ ಅನೇಕ ಮಲತಾಯಂದಿರನ್ನು ತನ್ನ ವೇಷದಲ್ಲಿ ಹೋಗಿ ಕೆಡಿಸಿದನೆಂದು ತಿಳಿದಾಗ ಕೋಪಾವಿಷ್ಟನಾಗಿ ಸಾಂಬನಿಗೆ ಬಯ್ಯುತ್ತಾನೆ. ಆದರೆ ದುರಹಂಕಾರದ ಸಾಂಬಾ ಉಲ್ಟಾ ತನ್ನ ತಂದೆ ಕೃಷ್ಣನಿಗೇ ಹೀಗೆ ಕೇಳುತ್ತಾನೆ: "ನಿನ್ನ ಸೋದರ ಮಾವನ ಹೆಂಡತಿಯಾದ ರಾಧಾ ನಿನಗಿಂತ ಹದಿನೈದು ವರ್ಷ ದೊಡ್ಡವಳಾದರೂ ನೀನೇ ಆ ಅತ್ತೆಯೊಂದಿಗೆ ದೈಹಿಕ ಸಂಬಂಧ ರುವಾಗ ನಾನು ಚಿಕ್ಕಮ್ಮ ಎನಿಸಿಕೊಂಡ ಪರ ಲೈಂಗಿಕ ಸಂಬಂಧ ಇಟ್ಟುಕೊಂಡರೆ ತಪ್ಪೇ

ಇದರಿಂದ ಕ್ರೋಧಗೊಂಡ ಕೃಷ್ಣನು ಸಾ ರೋಗ ಬರಲಿ ಎಂದು ಶಾಪ ಕೊಡುತ್ತಾನೆ. ಮುಂದೆ ಯದುಕುಲದ ವಿನಾಶಕ್ಕೆ ಕಾರಣ ಪೌರಾಣಿಕ ಕತೆಗಳೆಲ್ಲಾ ಕಾಲ್ಪನಿಕವಾದ ಸಮಾಜದಲ್ಲಿಯೂ ನಡೆಯುತ್ತಿದ್ದ ಸ್ತ್ರೀಯ ವಂಚನೆ ಅತ್ಯಾಚಾರಗಳು ಇಂದಿನಂತೇ ಇದ್ದವು ಸೂಚಿಸುತ್ತದೆ.

ನರಕಾಸುರನ ಮೂಲ ಹೆಸರು ಭೌಮ ಭೂಮಿಪುತ್ರ ಎಂದಾಗಿತ್ತು. ಅವನ ತಾಯಿ ಮತ್ತು ತಂದೆ ವರಾಹರೂಪದ ರಸಿಕ ವಿಷ್ ಈ ಹೆಸರು ಬಂತು. ಆದರೆ ಅವನ ಮೈ ಮಣ್ಣಿನಿಂದ ಕೊಳಕಾಗಿದ್ದುದರಿಂದ ಅವನಿ ಎಂಬ ಹೆಸರು ಬಂತು ಎನ್ನುತ್ತದೆ ವರಾ ತುಳು ಸಹಿತ ಹಲವು ದ್ರಾವಿಡ ಭಾಷ ಎಂದರೆ ಹೊಲಸು ಎಂದು ಈಗಲೂ ನರಕಾಸುರನ ಮೈಯೆಲ್ಲಾ ಕೆಸರಾಗಿರುತ್ತಿತ್ತು ಮೂಲತಃ ರೈತನಾಗಿದ್ದ ಅಥವಾ ಕು ಎಂಬುದಕ್ಕೆ ಸಾಕ್ಷಿ. ವೈದಿಕರು ಇದನ್ನು ತಿ ಅಸುರನಾಗಿದ್ದ ಎಂದು ಹೇಳಿ ಸತ್ಯಭಾಮೆ ಎಂ ಮುಂದಿಟ್ಟುಕೊಂಡು ಬಂದು ಅವನನ್ನು ಕೆ ಭೂಮಿ ಸಂಪತ್ತು ಕಬಳಿಸಿ ಅವನ ಜನಾಂಗ ಸ್ತ್ರೀಯರನ್ನು ಅಪಹರಿಸಿರಬಹುದು ಹಾಗ ಕೃಷ್ಣನ ಹದಿನಾರು ಸಾವಿರ ಹೆಂಡತಿಯರು ಎ

ಆಸಾಮಿನಲ್ಲಿ ಹಾಗೂ ಉತ್ತರ ಬ (ಮ್ಯಾನ್ಮಾರ್) ನರಕಾಸುರನನ್ನು ದೀಪಾವಳಿಯ ಅಥವಾ ಭೂಮಿಪುತ್ರ ಎಂಬ ಹೆಸರಿನಲ್ಲಿ ಭೂದೇವಿಯೊಂದಿಗೆ ಈಗಲೂ ಪೂಜ ಮೂಲತಃ ದಕ್ಷಿಣ ಭಾರತದಲ್ಲಿಯೂ ನರ ಎಂದರೆ ಸ್ವತಃ ನರಕಾಸುರನ ಪೂಜೆ ಆಗಿದೆ ಅವನು ಸತ್ತದ್ದಕ್ಕೆ ಸಂತಸ ಪಡುವ ಹಬ್ಬ ಅಲ್ಲ ನಾವು ಗಮನಿಸಬೇಕು.

■ ಪ್ರವೀಣ್


ಪ್ರಶ್ನೆಗಳು ಮತ್ತು ದುರ್ಬುದ್ಧಿ ಜೀವಿಗಳು



ಭಾರತೀಯ ದನದ ಮಾಂಸ ದೇಶವಿದೇಶಗಳಲ್ಲಿ ಸಂಚಲನ ಮೂಡಿಸಿರುವಂತಹ ಇವತ್ತಿನ ಸನ್ನಿವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ "... ತಿನ್ನಬೇಕೆನಿಸಿದರೆ ನಾನು ಖಂಡಿತಾ ದನದ ಮಾಂಸ ತಿನ್ನುವೆ" ಎಂದು ಹೇಳಿದರು. ಇದಕ್ಕೆ ಒಡನೆ ಪ್ರತಿಕ್ರಿಯಿಸಿದ ಪೇಜಾವರ ಸ್ವಾಮಿ "ಮಸೀದಿ ಮುಂದೆ ಹಂದಿ ಮಾಂಸ ಸಮಾರಾಧನೆ ಆದ್ರೆ ಮುಖ್ಯಮಂತ್ರಿ ಸುಮ್ಮನೆ ಇರುತ್ತಾರಾ?" ಎಂದು ಸವಾಲು ಹಾಕಿದ್ದಾರೆ. ಸರ್ವಸಂಗ ಪರಿತ್ಯಾಗಿಯೂ, ಭಾವ ವಿರಾಗಿಯೂ ಆಗಿರಬೇಕಾದ ಅಥವಾ ಹಾಗೆಂದು ತಿಳಿಯಲಾದ ಸನ್ಯಾಸಿಯೊಬ್ಬನ ಬಾಯಲ್ಲಿ ಇಂತಹ ಕೆಟ್ಟ ಮಾತುಗಳು ಅದು ಹೇಗೆ ಬಂದುವೆಂದು ಕೆಲವರಿಗಾದರೂ ಆಶ್ಚರ್ಯ ಆಗಿರಬಹುದು.

ಮನುಸಂಹಿತೆ ಪ್ರಕಾರ ವಾನಪ್ರಸ್ಥವನ್ನು ಪ್ರವೇಶಿಸಿದವನು ಕುಟುಂಬದೊಂದಿಗಿನ ಸಂಬಂಧವನ್ನು ಕಡಿದುಕೊಳ್ಳದೆ, ಅಕ್ಷಿಷ್ಠಾಸ್ತ್ರಿಯ ಪತ್ನನ್ನು ಬಿಟ್ಟುಕೊಡದೆ ಕಾಡಿನಲ್ಲಿ ಸನ್ಯಾಸಿಯಂತೆ ವಾಸಿಸುತ್ತಾನೆ. ಮುಂದೆ ಸನ್ಯಾಸ ಆಶ್ರಮದಲ್ಲಿ ಪ್ರಾಪಂಚಿಕ ವಸ್ತುಗಳೊಂದಿಗಿನ ಎಲ್ಲಾ ಬಂಧನಗಳಿಂದ ಕಳಚಿಕೊಂಡು, ಕಾಮ, ಕ್ರೋಧ, ಲೋಭ, ಮೋಹಗಳಿಂದ ದೂರವಾಗಿ ಪರಮಾತ್ಮನ ಅನ್ವೇಷಣೆಯಲ್ಲಿ ತೊಡಗಿಸಿಕೊಳ್ಳುತ್ತಾನೆ. ಆದರೆ ಪೇಜಾವರರದು ಆಚೆ ವಾನಪ್ರಸ್ಥವೂ ಅಲ್ಲ ಈಚೆ ಸನ್ಯಾಸವೂ ಅಲ್ಲ ಏಕೆಂದರೆ ಅವರು ಆರೆಸ್ಸೆಸ್‌ನ ಕುಟುಂಬವಾದ ಸಂಘ ಪರಿವಾರದೊಂದಿಗಿನ ಸಂಬಂಧಗಳನ್ನು ಕಡಿದು ಕೊಂಡಿಲ್ಲ, ಕಾಡಿನಲ್ಲಿದ್ದು ಪರಮಾತ್ಮನ ಅನ್ವೇಷಣೆಯನ್ನೂ ಮಾಡುತ್ತಿಲ್ಲ. ವಾಸ್ತವದಲ್ಲಿ ಅವರು ಸಂಘಪರಿವಾರಕ್ಕೆ ಸೇರಿದ ವಿಶ್ವ ಹಿಂದೂ ಪರಿಷತ್ ಎಂಬ ಸಂಘಟನೆಯಲ್ಲಿ ಒಬ್ಬ ಪ್ರಮುಖ ಪದಾಧಿಕಾರಿ ಆಗಿದ್ದಾರೆ. ಅವರ ಇತ್ತೀಚಿನ ಮಾತಿನ ಶೈಲಿ ಥೇಟ್ ಯೋಗಿ, ಸಾಕ್ಷಿ, ಸೋಮ, ಸಾಧ್ವಿ ಗಳಂತಹ ಹರಕುಬಾಯಿ ಕಟ್ಟರ್ ಚಡ್ಡಿಗಳ ಶೈಲಿಯನ್ನು ಹೋಲುತ್ತಿರುವುದಕ್ಕೆ ಪ್ರಾಯಶಃ ಇದೇ ಕಾರಣ ಇರಬಹುದು.

ವಿಹಿಂಪದ ಪದಾಧಿಕಾರಿಯೂ ನಿಷ್ಠಾವಂತ ಸ್ವಯಂ ಸೇವಕನೂ ಆಗಿರುವುದರಿಂದಲೇ ಅವರು ಬಾಬರಿ ಮಸೀದಿ ಧ್ವಂಸದಂತಹ ಸಂವಿಧಾನ ವಿರೋಧಿ ಕೃತ್ಯಗಳನ್ನು ಸಂಭ್ರಮಿಸುತ್ತಾರೆ. ಅಲ್ಪಸಂಖ್ಯಾತರ ಮಾರಣಹೋಮ ನಡೆಸಿದವರಿಗೆ ಮತ್ತು ಪಾರುಪತ್ಯ ವಹಿಸಿದವರಿಗೆ ಶಿಕ್ಷೆಯಾಗಬೇಕೆಂದು ಒತ್ತಾಯಿಸುವುದಿಲ್ಲ, ಖೈರ್ಲಾಂಜಿ, ಸುಂಡೂರು, ಬತಾನಿ ತೋಲಾ, ಜಜ್ಜರ್ ಮೊದಲಾದ ಹತ್ಯಾಕಾಂಡಗಳನ್ನು ಎಸಗಿದ, ತೀರಾ ಇತ್ತೀಚೆಗೆ ದಲಿತ ಮಕ್ಕಳು ಮತ್ತು ವೃದ್ಧರ ಸಜೀವ ದಹನ ನಡೆಸಿದ ಮೇಲ್ಜಾತಿ ಜನರ ಕೇರಿಗಳಲ್ಲಿ ಪಾದಯಾತ್ರೆ ನಡೆಸುವುದಿಲ್ಲ, ಮೇಲ್ಜಾತಿಗಳ ಖಾಪ್ ಪಂಚಾಯತುಗಳು ನೀಡುತ್ತಿರುವ ಬರ್ಬರ ಶಿಕ್ಷೆಗಳನ್ನು ನಿಲ್ಲಿಸುವ ಪ್ರಯತ್ನ ಮಾಡುವುದಿಲ್ಲ. ಮೇಲ್ಜಾತಿಗಳ ಮನೋಪರಿವರ್ತನೆಗೆ ಮುಂದಾಗುವುದಿಲ್ಲ. ಅವರ ದಲಿತ ವಿರೋಧಿ, ಅಲ್ಪಸಂಖ್ಯಾತ ವಿರೋಧಿ ಭಾವನೆಗಳನ್ನು ತೊಡೆದುಹಾಕಲು ಯತ್ನಿಸುವುದಿಲ್ಲ. ಬದಲು ದಲಿತ ಕೇರಿಗಳಲ್ಲಿ ಪಾದಯಾತ್ರೆ ಎಂಬಿ ತ್ಯಾದಿ "ದಲಿತೋದ್ಧಾರ"ದ ನಾಟಕಗಳನ್ನು ಆಡುತ್ತಾರೆ.



ಸಂಘ ಪರಿವಾರದ ಸಿದ್ಧಾಂತ ಮತ್ತು ಗುರಿಗಳಿಗೆ ಅನುಗುಣ ವಾಗಿರುವ ಈ ಪ್ರಹಸನಗಳ ನೈಜ ಉದ್ದೇಶ ದಲಿತರನ್ನು ಅದೇ ಸ್ಥಿತಿಯಲ್ಲಿರಿಸಿ, ಸತ್ಯನಾರಾಯಣ ಪೂಜೆ, ಬ್ರಹ್ಮಕಳಶ ಇತ್ಯಾದಿ ಮಾಡಿಸುತ್ತ ಸಂಘಪರಿವಾರದ ಕಾಲಾಳುಗಳಾಗಿ ಮುಂದುವರಿಸುವುದಲ್ಲದೆ ಇನ್ನೇನೂ ಅಲ್ಲ. ಇನ್ನು ನೀರಾ ರಾಡಿಯ, ಅದಾನಿ, ಮುತಾಲಿಕರಂಥವರಿಗೆ ಶಾಲು ಹೊದಿಸಿ ಸ ಸಂದರ್ಭಗಳಲ್ಲಿ ಭ್ರಷ್ಟಾಚಾರಿಗಳಾಗಬೇಡಿ, ಕೋ ಹತ್ತಿಕ್ಕಿ ಸೌಹಾರ್ದ ಸ್ಥಾಪಿಸಿ ಎಂದು ಆಶೀರ್ವಾದ ಎನ್ನುವುದು ಮಿಲಿಯನ್ ಡಾಲರ್ ಪ್ರಶ್ನೆ.

ಬುದ್ಧಿಜೀವಿಗಳಿಗೆ ಹಿಂದೂ ಧರ್ಮದ ಎಂಬ ಟೀಕೆಯೂ ಕೇಳಿಬರುತ್ತಿದೆ. ಯಾವ ಧ ಮನುಷ್ಯರ ನಡುವೆ ಭೇದ ಮತ್ತು ಅಸ ಕಲ್ಪಿಸುವ ಜಾತಿಪದ್ಧತಿಯನ್ನು ಹುಟ್ಟು ದೈವನಿಯಾಮಕ ಎಂದು ನಂಬಿಸಿ ಇಂದ ಮುಂದುವರಿಸಿಕೊಂಡು ಬರುತ್ತಿದೆಯೋ, ತಳಸಮುದಾಯಗಳ ಮೆ ದಮನ ಮತ್ತು ದೌರ್ಜನ್ಯ ವಾಗಿದೆಯೋ ಅಂತಹ ಧ ಮಾನವ ಧರ್ಮವೇ ಅಂಬೇಡ್ಕರ್ ಆದಿಯಾಗಿ ವರೆಲ್ಲರ ಪ್ರಶ್ನೆಯಾಗಿದೆ.

ಹೀಗಿರುವಾಗ ಮಿದು ಕೊಂಡು ದ್ವೇಷ ತುಂಬಿಸಿಕೊ ಜೀವಿಗಳಿಗೆಲ್ಲ ಇಂತಹ ವೆನಿಸುವುದರಲ್ಲಿ ಆಶ್ಚರ್ಯ

- ಸ

ಬಾಕ್ರಬೈಲ್

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಅಂಜನಾ

…ನಾ ಎಂದರೆ ಕಾಡಿಗೆ ಎಂದೇ ಅರ್ಥ. ಅಂಗಾರ …ಲು. ಕಣ್ಣಿನ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು …ದಿಗಳಿಗೆ ಮತ್ತು ಬದಿಗಳಿಗೆ ಕಾಡಿಗೆಯನ್ನು …ವುದು ತಿಳಿದ ವಿಷಯ. ಆದರೆ ಕಣ್ಣಿಗೆ …ವ ಕಾಡಿಗೆ ದೃಷ್ಟಿಯನ್ನು ಸ್ಪಷ್ಟಗೊಳಿಸುವುದು …ವರು ಹೇಳಿದರೆ ಮತ್ತೆ ಕೆಲವರು ಅದು … ಎಂದೂ ಹೇಳುತ್ತಾರೆ. ಆದರೆ ವೈಜ್ಞಾನಿಕವಾಗಿ …ಿಸಲಾಗದು. ನಂಬಿಕೆ ಬಿಟ್ಟರೆ ಅದಕ್ಕೇನೂ …. ಹಾಗೆಯೇ ಅಂಜನಾ ನೋಡುವುದು ಎಂಬ …ೂ ತನ್ನನ್ನು ಸಮರ್ಥಿಸಿಕೊಂಡಿಲ್ಲ. ಆದರೆ …ನ್ನು ಎನ್ನುವ ಪೂರ್ವಾಗ್ರಹದವರೂ ಇದನ್ನು …ಶಾಸ್ತ್ರದ ಒಂದು ಭಾಗ ಎಂದು ವಾದಿಸುತ್ತಾರೆ. …ನಾ ನೋಡುವವರು ಅನೇಕ ರೀತಿಗಳಲ್ಲಿ …ನ್ನು ಬಳಸುತ್ತಾರೆ. ವೀಳ್ಯದೆಲೆಗೆ ಹಚ್ಚಿ, ತೋರು …ತ್ತು ಹೆಬ್ಬೆರಳಿಗೆ ಹಚ್ಚಿ, ಮತ್ತೆ ಕೆಲವರು ನೀರಿನ …ಮುಂಭಾಗದಲ್ಲಿ ಹಚ್ಚಿ ಅದರ ಹಿಂದೆ ದೀಪವಿಟ್ಟು …ು; ಹೀಗೆಲ್ಲಾ ಮಾಡುತ್ತಾರೆ. ನಾನು ಸಣ್ಣವನಿದ್ದಾಗ …ಯುಗಳಲ್ಲಿ ಅಂಜನಾ ಪ್ರಯೋಗವನ್ನು ನೋಡಿ …ೇ ನನಗೆ ಅದು ಸುಳ್ಳು ಎಂದು ಸಾಬೀತಾಗಿತ್ತು. …ಗೆ ಸರಿಯಾಗಿ ಮಾಡಲು ಬರುತ್ತಿಲ್ಲ, ಸರಿಯಾಗಿ …ದು ಮಾಡಿದರೆ ಇದು ಯಶಸ್ವಿಯಾಗುತ್ತದೆ …ದ್ದೆ. ಆದರೆ ಮುಂಬರುವ ದಿನಗಳಲ್ಲಿ ಅದೂ …ರ್ಣ ಕಪೋಲಕಲ್ಪಿತ ಎಂದು ರುಜುವಾಯ್ತು.

…ಳಸೀ ಮತ್ತು ತುಳಸೀದಳ

…ನ ದಿನಗಳಲ್ಲಿ ಹಳೆಯ ತಂತ್ರ ಸಾಧನೆಗಳನ್ನು …ಸುತ್ತಾ ಅದನ್ನು ಭೌತ ವಿಜ್ಞಾನಕ್ಕೋ ಅಥವಾ …ಜ್ಞಾನಕ್ಕೋ ತಗುಲಿ ಹಾಕಿ ಅದನ್ನು ನಿಜವೆಂದು …ು ಯತ್ನಿಸುತ್ತಿರುತ್ತಾರೆ. ಸುರೇಶ್ ಸೋಮಾಪುರ …ಮೂರಿ ವೀರೇಂದ್ರನಾಥ್‌ರಂತಹ ಕಾದಂಬರಿ …ಳ ರೋಚಕತೆಯಿಂದ ಇಂತಹ ವಿಷಯಗಳನ್ನು …ಜ್ಞಾನ ಮತ್ತು ತಂತ್ರ ಶಾಸ್ತ್ರಕ್ಕೆ ತಳಕು ಹಾಕಿ …ಳನ್ನು ಬರೆದಿದ್ದಾರೆ. ಅವು ಬಹಳ ಜನಪ್ರಿಯವೂ 80ರ ದಶಕದಲ್ಲಿ ಪ್ರಜಾಮತದಲ್ಲಿ ತುಳಸೀದಳ …ಳಸೀ ಕಾದಂಬರಿಗಳು ಧಾರಾವಾಹಿಯಾಗಿ … ಇಂತಹ ರೋಚಕತೆಗೆ ಮತ್ತಷ್ಟು ಪುಷ್ಟಿ …ತು. ನಿರೂಪಣಾ ತಂತ್ರ ಮತ್ತು ವಿಷಯ …ವ ಕಾದಂಬರಿ ಅದ್ಭುತವಾದ ಯಶಸ್ಸನ್ನು ಕಂಡಿತು. …ದ ಪರಿಣಾಮವೆಂದರೆ ಮನೋವಿಜ್ಞಾನವನ್ನೂ …ಕಥೆಗಳನ್ನು ಕಟ್ಟುವಂತೆ ಉತ್ಪ್ರೇಕ್ಷಿಸಿ ವಸ್ತು …ನ್ನು ವಾಸ್ತವದಿಂದ ದೂರಕ್ಕೆಳೆಯಲಾಯಿತು. … ಮೌಢ್ಯದ ಪರಮ ಕೂಪದ ಕಲ್ಪನೆಗಳನ್ನು …ಸಮೀಪಕ್ಕೆ ತರಲಾಯಿತು. ಮೋಡಿ (ಒಂದು …ಪ್ನಾಟಿಸಂ), ಪ್ಯಾರಾ ಸೈಕಾಲಜಿ, ಪ್ಯಾರಾನಾರ್ಮಲ್ …ಗಳು, ಮ್ಯಾಜಿಕ್ ರೈಟಿಂಗ್, ರಿಮೋಟ್ …, ಆತ್ಮಗಳೊಂದಿಗೆ ಸಂವಹನ, ಪೂರ್ವಜನ್ಮದ …ತ್ಯಾದಿ ಹತ್ತು ಹಲವು ಮಹಾಸುಳ್ಳುಗಳು …ತ್ತಾ ಹೋದವು. ಅವುಗಳ ಬಗ್ಗೆ ಅನೇಕಾನೇಕ … ಬಂದವು. ಇಂತಹ ಮೌಢ್ಯವನ್ನು ಬಲಗೊಳಿಸು …ಲಿವುಡ್ ಮತ್ತು ಬಾಲಿವುಡ್ ಸಿನಿಮಾಗಳ … ಕಡಿಮೆಯಿಲ್ಲ, ವಿಜ್ಞಾನ ಕಲಿತವರೇ ಇಂತವನ್ನು …ದು ತಲೆ ಕೆಡಿಸಿಕೊಂಡು ತಿಕ್ಕಲುತಿಕ್ಕಲಾಗಿ … ಅತ್ತ ಯಾವ ತಾಂತ್ರಿಕ ಸಾಧನೆಯೂ ಇಲ್ಲದೇ, …ಸಹಜ ಮನುಷ್ಯರಂತೂ ಇರದೇ ಎಡವಟ್ಟು …ಂದಿರುವವರ ವಿಷಯಗಳನ್ನು ಮುಂದೆ …ಸಾರ ತಿಳಿಸುತ್ತೇನೆ. ಒಟ್ಟಾರೆ ವಿದ್ಯಾವಂತರ …ಸ್ಸಿ ಎಸ್ಕುಪ್ಪಿ ಹೋದಾಗ ಮೂಢರೂ, ಮುಗ್ಧರೂ …ಮಾನ್ಯರ, ಪಾಪದ ಅವಿದ್ಯಾವಂತರ ಪಾಡೇನು? …ಕಾಲಿಕ ಬಲಿಪಶುಗಳು ಶೋಷಣೆಗೆ.

ಚಾನೆಲ್‌ನಲ್ಲಿ ಅಂಜನಾ

… ಮಾರ್ತಾಂಡ ಸಂತೋಷ್ ಗುರೂಜಿ ಎಂಬ …ಗ್ಗ, ಕುಹಕ, ಕೊಂಕು ಮತ್ತು ವಿತಂಡವಾದದ …ಸ ಕಾಷಾಯಧಾರಿ ಅದ್ಯಾವುದೋ ಅಯುಷ್ಯ …ಧರ್ಮಪೀಠಾರೂಢ, ಈ ಅಂಜನಾವಿದ್ಯೆಯನ್ನು … ಪ್ರಾಯೋಗಿಕವಾಗಿ ಚಾನೆಲ್‌ನಲ್ಲೇ ಮಾಡಿ, …ಮ್ಮ ಸತ್ಯವೆಂದು ನಿರೂಪಿಸಿದರಂತೆ. ಅದನ್ನು …ಲೀಸ್ ಕಮಿಷನರ್‌ಗಳು, ಇನ್ನಿತರ ಗುಪ್ತದಳ …ಅಧಿಕಾರಿಗಳು ಅವರ ಬೆನ್ನು ಬಿದ್ದಿದ್ದರಂತೆ. … ಅಪರಾಧಿಯನ್ನು ಹುಡುಕಿಕೊಡಿ, ನಮ್ಮ …ಮಾಡಿ ಮಾಡಿ ಎಂದೆಲ್ಲಾ ದುಂಬಾಲು … ಅವರ ಹಾಗೇ ಸುಮ್ಮನೆ ಅವೆಲ್ಲಾ ಬೇಡಾಂತ, ಒಮ್ಮೆ ಒಂದು ಮಾಡಿಕೊಟ್ಟರೆ ಪದೇ ಪದೇ ಅದಕ್ಕಾಗಿ ಬೆನ್ನು ಬೀಳುವರಂತ ಮಾಡಲಿಲ್ಲವಂತೆ. ಹಾಗಂತ ಅವರೇ ಒಂದು ಸಂದರ್ಭದಲ್ಲಿ ಖುದ್ದು ನನಗೆ ಹೇಳಿದ್ದು.

ಅಂಜನಾ ಎಂಬುದು ಅಂತಹದ್ದೊಂದು ವಿದ್ಯೆಯಾಗಿದ್ದರೆ ದೇಶದಲ್ಲಿ ನಡೆಯುವ ಎಷ್ಟೋ ಕೊಲೆ, ಸುಲಿಗೆ, ದರೋಡೆಗಳನ್ನು ಮಾಡುವ ಅಪರಾಧಿಗಳ ಪತ್ತೆಗೆ ಪೊಲೀಸ್ ವ್ಯವಸ್ಥೆ ಅದನ್ನು ಏಕೆ ಬಳಸಿಕೊಳ್ಳಬಾರದು? ಸಾಹಿತಿಗಳ, ವಿಚಾರಪರರ, ಇನ್ನಿತರ ನಿರುಪದ್ರವಿ ಚಿಂತಕರ ಹತ್ಯೆಗಳಾದಾಗ, ಅವರ ಹಂತಕರ ಬೇಟೆಗೆ ತಂಡಗಳನ್ನು ರಚಿಸಿಕೊಂಡು ಅಹೋರಾತ್ರಿ ಪೊಲೀಸ್ ಇಲಾಖೆ ಒದ್ದಾಡುತ್ತಿದ್ದಾಗ ಅಥವಾ ಲೋಕ ಕಲ್ಯಾಣಾರ್ಥವಾಗಿ, ನೊಂದ ಜನರ ಸಾಂತ್ವನಕ್ಕಾಗಿ, ದೇಶ ರಕ್ಷಣೆಗಾಗಿ ಭಯೋತ್ಪಾದಕರನ್ನೂ ಒಳಗೊಂಡಂತೆ ಅನೇಕ ಬಗೆಯ ಸಮಾಜಘಾತುಕ ಶಕ್ತಿಗಳ ಬಗ್ಗೆ ಏಕೆ ಈ ಅಂಜನಾ ವಿದ್ಯಾ ವಿಶಾರದರು ಸುಳಿವು ನೀಡಬಾರದು? ಆದರೆ ಅವು ಎಂದಿಗೂ ನಡೆದಿಲ್ಲ, ನಡೆಯುವುದೂ ಇಲ್ಲ. ಈಗಷ್ಟೇ ಅಲ್ಲ, ಯಾವ ಕಾಲದಲ್ಲಿಯೂ ಇದು ಯಶಸ್ವಿಯಾದ ವಿದ್ಯೆಯಲ್ಲ, ವಿಜ್ಞಾನವಲ್ಲ. ಜೋತಿಷ್ಯ ಪಂಡಿತರ ದಂಡನ್ನೇ ತಮ್ಮ ಜೊತೆಯಲ್ಲಿಟ್ಟುಕೊಂಡಿದ್ದ ರಾಜಾಧಿರಾಜರುಗಳೆಲ್ಲಾ ದಾಳಿಗಳಿಗೆ ತುತ್ತಾಗಿದ್ದಾರೆ. ಮೋಸ ವಂಚನೆ ಕುಟಿಲತೆಗಳಿಗೆ ಬಲಿಯಾಗಿದ್ದಾರೆ. ತಮ್ಮ ಸಾಮ್ರಾಜ್ಯಗಳನ್ನು ರಕ್ಷಿಸಿಕೊಳ್ಳುವುದಿರಲಿ, ತಮ್ಮ ಮತ್ತು ತಮ್ಮ ಕುಟುಂಬಗಳ ಪ್ರಾಣಗಳನ್ನೂ ಉಳಿಸಿಕೊಳ್ಳದೇ ಮಣ್ಣಾಗಿ ಹೋಗಿದ್ದಾರೆ. ಮಾಟ ಮಂತ್ರಾದಿ ತಂತ್ರಗಳು ನಿಜಕ್ಕೂ ಸುಳ್ಳೇ. ಆದರೆ ಅವುಗಳ ಸುತ್ತ ಹೆಣೆಯಲಾದಂತಹ ಕಥೆಗಳು ರೋಚಕವಾಗಿರುತ್ತವೆ. ಅವು ನಮ್ಮ ಬದುಕಿನಲ್ಲಿ ನಿಜವೇ ಆದರೆ, ನಾವೂ ಆ ಅನುಭವವನ್ನು ಪಡೆದಿದ್ದೇ ಆದರೆ ಎಂದು ನೆನೆದು ಪುಳಕಗೊಳ್ಳುವ ಮನಸ್ಸಿಗೆ ಅಂತಹವನ್ನು ತಟ್ಟನೆ ನಿರಾಕರಿಸಲು ಮನಸ್ಸಾಗುವುದಿಲ್ಲ. ಆದ್ದರಿಂದಲೇ ರೋಚಕಾನುಭವಗಳ ನಿರೀಕ್ಷೆಯನ್ನು ಸದಾ ಹೊತ್ತಿರುವ ಮನಸ್ಸುಗಳು ಇವನ್ನು ನಿರಾಕರಿಸದೇ, ಎಷ್ಟೋ ಬಾರಿ ವಾಸ್ತವವಾಗಿ ನಂಬಲು ಸಿದ್ಧರಾಗದಿದ್ದಾಗ, ವಿಜ್ಞಾನದ ನೆರವನ್ನು ಪಡೆದುಕೊಂಡು ನಿಜಗೊಳಿಸಿಕೊಳ್ಳಲು ಸಾಧ್ಯವೇನೋ ಎಂದು ಹೆಣಗಾಡುತ್ತಾರೆ.


ಜಾನಪದ ಸಿಸಿ ಕ್ಯಾಂಗಳು

ಬಾಲನಾಗಮ್ಮ ಅಥವಾ ಪಾತಾಳ ಭೈರವಿಯಂತಹ ಜಾನಪದ ಕಥೆಗಳಲ್ಲಿ ಗುಹೆಯ ಹೊರಗೆ ಯಾರು ಬಂದರು, ಅರಮನೆಯಲ್ಲಿ ರಾಜಕುಮಾರಿ ಯಾವ ಮಂಚದ ಮೇಲೆ ಮಲಗಿರುವಳು, ಹೊರಗೆ ಕಾವಲು ಯಾರಿದ್ದಾರೆ ಎಂದು



ನೋಡಲು ಬಳಸುವ ಮಾಯಾದರ್ಪಣವು ಇಂದು ಸಿಸಿ ಕ್ಯಾಮರಾಗಳಂತೆ ಕಾಣುವುದನ್ನು, ನಮ್ಮಲ್ಲಿ ಅಂದೇ ಇಂತಹ ಸಿ ಸಿ ಕ್ಯಾಂ-ಗಳಿದ್ದವು ಎಂದು ನಮ್ಮ ಸನಾತನಿಗಳು ಹೇಳಿದರೆ ಆಶ್ಚರ್ಯವೇನೂ ಇಲ್ಲ.

ಅಂಜನಾ ನೋಡುವುದು ಹೇಗಂತೆ ಗೊತ್ತೇ? (ಈ ಸಂತೋಷ್ ಗುರೂಜಿಯಂತವರ ಪ್ರಕಾರ) ಈ ಅಂಜನಾ ವಿದ್ಯಾ ವಿಶಾರದರು ತಮ್ಮ ಧ್ಯಾನ ಕೇಂದ್ರಿತ ವಸ್ತುಗಳನ್ನು ಅನುಸರಿಸಲು ವಾಹಕರಿಗೆ ಸೂಚಿಸುತ್ತಾರಂತೆ. ಅವರು ಅವರ ಮಾತಿನ ಸಮ್ಮೋಹನಕ್ಕೆ ಒಳಗಾಗಿ ನಡೆದುಕೊಳ್ಳುತ್ತಿರುತ್ತಾರಂತೆ. ನಂತರ ಯಾರನ್ನು ಅಂಜನಾ ನೋಡಲು ಕುಳ್ಳಿರಿಸಿರುವರೋ ಅವರ ಸೂಕ್ಷ್ಮ ಮನಸ್ಸು ಯಾವುದನ್ನು (ಸಜೆಸ್ಟ್) ಅನುಸರಿಸಬೇಕೋ ಅನುಸರಿಸುತ್ತಾ ಹೋಗುವಂತೆ ನಿರ್ದೇಶನಗಳನ್ನು ಕೊಡುತ್ತಾರಂತೆ. ಹಾಗೇ ಅವರು ಕಾಲದಲ್ಲಿ ಹಿಮ್ಮುಖವಾಗಿ ಚಲಿಸುತ್ತಾ ಅವರು ಸಾಕ್ಷೀಕರಿಸಿರುವ ಸ್ಥಳ ಮತ್ತು ದಾರಿಗಳನ್ನು ತಿಳಿಯುತ್ತಾರಂತೆ. ಹಾಗೆಯೇ ಮಾಡುತ್ತಾ



ಬೇಕಾದ ಮಾಹಿತಿ ದೊರಕಿದ ಮೇಲೆ ಬಲಿ ಕೊಡುತ್ತಾರಂತೆ. ಬಲಿ ಎಂದರೆ ನಿಂಬೆಹಣ್ಣನ್ನು ಎರಡು ಹೋಳಾಗಿ ಕೊಯ್ಯುವ ಸಾಂಕೇತಿಕತೆ ಅಂತೆ. ಅಷ್ಟಾದರೆ ಅಂಜನಾ ನೋಡುವುದಕ್ಕೆ ಹೋದ ವ್ಯಕ್ತಿಯನ್ನು ಆತ್ಮದ ಆಕ್ರಮಣದಿಂದ ತಪ್ಪಿಸಲು ಸಾಧ್ಯವಂತೆ.

ಎದುರನ್ನೇ ನೋಡದವರು

ಎದುರಿಗೆ ಕುಳಿತುಕೊಂಡು ಮಾತಾಡುತ್ತಿರುವ ಒಬ್ಬ ಚಿಂತನಶೀಲನ, ಪ್ರಗತಿಪರನ, ಲೇಖಕನು ನೇರವಾಗಿಯೇ ಹೇಳಲು ಪ್ರಯತ್ನಿಸುತ್ತಿರುವಂತಹ ಮಾತುಗಳಲ್ಲಿ ಆತನ ಉದ್ದೇಶ, ತಾತ್ಪರ್ಯಗಳನ್ನೇ ತಿಳಿದುಕೊಳ್ಳದ ಸಂತೋಷ್ ಗುರೂಜಿಯಂತಹ ಹುಸಿ ವೈಜ್ಞಾನಿಕ ತಂತ್ರಿಗಳು ಇನ್ನಾವ ತಂತ್ರ ಶಾಸ್ತ್ರದಲ್ಲಿ ಪರಿಣಿತನಾಗಿ ಆತ್ಮಗಳನ್ನು, ಅಧ್ಯಾತ್ಮತರಂಗಗಳನ್ನು ಕಂಡುಬಿಡುತ್ತಾರೋ ನಾ ಬೇರೆ ಕಾಣೆ! ಎದುರಿಗಿರುವ ಮನುಷ್ಯನ ಒಳನೋಟ, ಅಂತರಂಗಗಳನ್ನೇ ಅರಿಯದ ಕಾಮಿಡಿ ಪೀಸುಗಳು ಅಧ್ಯಾತ್ಮ ಚಿಂತಕರೆಂದು, ಜ್ಯೋತಿಷ್ಯ ಪಂಡಿತರೆಂದು ಕರೆಸಿಕೊಂಡು ಚಾನೆಲ್‌ಗಳಲ್ಲಿ ಮೌಢ್ಯದ ಕೂಪಕ್ಕೆ ಸಾಮಾನ್ಯರನ್ನು ತಳ್ಳುತ್ತಿದ್ದಾರೆ. ಅಂಥಾ ವಾಚಾಳಿಗಳಿಗೆಲ್ಲಾ ವಿದ್ಯಾವಾಚಸ್ಪತಿಗಳೆಂಬ ಬಿರುದುಗಳು ಬೇರೆ.

ಕಾಕತಾಳೀಯಗಳು

ಈ ಲೇಖನ ಬರೆಯುವಾಗಲೇ (ಈ ಮೇಲಿನ ಪ್ಯಾರಾವನ್ನು ಟೈಪ್ ಮಾಡುತ್ತಿದ್ದಾಗಲೇ) ಒಂದು ಫೋನ್ ಬಂತು. ಮೂಡಬಿದ್ರಿಯಿಂದ ಹಿರಿಯರಾದ ಭಾಸ್ಕರ್ ಬಂಗೇರಾರವರದ್ದು. ಹಳೆಯ ತಾಂತ್ರಿಕ ವಿದ್ಯೆಗಳ ಬಗ್ಗೆ, ಶಾಸ್ತ್ರಗಳ ಬಗ್ಗೆ, ಅಧ್ಯಾತ್ಮ ವಿಚಾರಗಳು, ವೈದ್ಯಕೀಯ ಮತ್ತು ಆತ್ಮಗಳ ಬಗ್ಗೆ ಸಾಕಷ್ಟು ತಿಳಿವಳಿಕೆ ಮತ್ತು ಅಭ್ಯಾಸ ಮಾಡುವಂತವರೂ ಆಗಿರುವ ಅವರನ್ನು ಈ ಅಂಜನಾ ಬಗ್ಗೆ ಕೇಳುವ ಎಂದು ಆಲೋಚನೆ ಮಾಡಿದ್ದೆ. ಆದರೆ ಅವರದ್ದೇ ಫೋನ್ ಬಂದ ಕಾಕತಾಳೀಯಕ್ಕೆ ನನಗೆ ಅಪಾರ ಆಶ್ಚರ್ಯವಾಯಿತು. ಎಷ್ಟೋ ತಿಂಗಳುಗಳಿಂದ ಫೋನ್ ಮಾಡಿರದಿದ್ದ ಅವರು ಈ ಸಂಬಂಧಿತ ವಿಷಯದ ನಿರೂಪಣೆಯ ಸಮಯದಲ್ಲೇ ಮಾಡಿದ್ದು ಮಹಾ ಆಶ್ಚರ್ಯಕರ. ಇಂತಹ ಕಾಕತಾಳೀಯಗಳು ಕೆಲವೊಮ್ಮೆ ಇಂತಹ ವಿದ್ಯೆಗಳನ್ನು ಸಮರ್ಥಿಸುತ್ತವೆ. ಆದರೆ ಮತ್ತೆ ಮತ್ತೆ ಇಂತಹ ಘಟನಾವಳಿಯನ್ನು ನಿರೀಕ್ಷಿಸುತ್ತಾ ಹೋಗುವಾಗ ಕಾಕತಾಳೀಯಗಳು ಉಂಟಾಗುವುದಿಲ್ಲ. ಕಾಕತಾಳೀಯವೆಂದರೇನೇ ಅನಿರೀಕ್ಷಿತವಾಗಿ ಅಪೇಕ್ಷೆಗೆ ನೆರವಾಗುವುದು ತಾನೇ?

ಭಾಸ್ಕರ್ ಬಂಗೇರಾ ತಮ್ಮ ಮಾತಲ್ಲಿ ಅಂಜನಾದಲ್ಲಿ ನೋಡುಗನ ಮನಸ್ಥಿತಿಯ ಪ್ರಾಶಸ್ತ್ಯ ಬಹುಮುಖ್ಯವೆಂದರು. ಕಳೆದ ಬಾರಿಯ ಲೇಖನದಲ್ಲಿ ನಾನು ಬಾಲಕನಾಗಿ ಅಂಜನಾ ನೋಡದೇ ಹೋದ ವಿಫಲ ಪ್ರಯತ್ನಕ್ಕೆ ಕಾರಣ ನನ್ನಲ್ಲಿರುವ ವಿಚಾರಪರತೆಯೇ ಎನ್ನುವ ಅವರ ಮಾತುಗಳನ್ನು ಕೇಳುತ್ತಾ ಒಂದು ಹಂತಕ್ಕೆ ಅದು ನಿಜವೆನಿಸಿತು.

ಪ್ರದೀಪ್ ಅಗರ್‌ವಾಲ್ ಎಂಬಾತ ಸೆಲ್ಫ್ ಹಿಪ್ನಾಟಿಸಂನಿಂದ ವ್ಯಕ್ತಿವಿಕಾಸ ಎಂಬ ಶಿಬಿರಗಳನ್ನು ಮಾಡುತ್ತಾರೆ. ಅವರ ಸೆಲ್ಫ್ ಹಿಪ್ನಾಟಿಸಂ ಕ್ಯಾಸೆಟ್‌ಗಳು 90ರ ದಶಕಗಳಲ್ಲಿ ಬಹಳ ಜನಪ್ರಿಯವಾಗಿದ್ದವು. ಬೆಂಗಳೂರಿನಲ್ಲೊಮ್ಮೆ ಅವರು ಸಭಾಂಗಣದಲ್ಲಿರುವ ಎಲ್ಲರನ್ನೂ ಸಮ್ಮೋಹನಕ್ಕೆ ಒಳಪಡಿಸಿದ್ದಾಗ ನಾನು ಯಾವ ರೀತಿಯ ಸಂಮೋಹನಕ್ಕೂ ಒಳಗಾಗದೇ ಎಲ್ಲವನ್ನೂ ನೋಡುತ್ತಲಿದ್ದೆ. ನನ್ನ ಪಕ್ಕದಲ್ಲಿರುವವರ ಮತ್ತು ಸುತ್ತಮುತ್ತಲಿರುವವರ ವರ್ತನೆಗಳನ್ನು ಗಮನಿಸುತ್ತಿದ್ದೆ. ಮುಂದೇನಾಗುವುದು ಎಂದು ಸಿನಿಮಾ ನೋಡುವ ಹಾಗೆಯೇ ಕುತೂಹಲದಿಂದ ಕಾದು ಕುಳಿತಿದ್ದೆ. ನಾನು ಯಾವ ರೀತಿಯಲ್ಲಿಯೂ ವಶೀಕರಣಕ್ಕೆ ಒಳಗಾಗಿರಲಿಲ್ಲ. ಅಷ್ಟೇ ಏಕೆ, ಕೆಲವು ಅಲ್ಲೆಲ್ಲೂ ವಿಚಿತ್ರ ಅರಚಾಟದ, ಬ್ಲಾಬ್ಲಾಬ್ಲಾ ಎಂಬೇನೋ ಪೈಶಾಚಿಕ ಭಾಷೆಯ ಪದರಾಟದ ಕ್ರೈಸ್ತರ ಬೃಹತ್ ಮತ್ತು ಪವಾಡ ಸದೃಶ ಪ್ರಾರ್ಥನಾ ಶಿಬಿರಗಳಲ್ಲಿ ಪಾಸ್ಟರ್‌ಗಳ ಡೋಂಗಿ ಪ್ರದರ್ಶನಗಳನ್ನು ಸಂಮೋಹನಕ್ಕೊಳಗಾಗಿರುವವರ ಮಧ್ಯೆ ಕುಳಿತೇ ನೋಡುವಾಗ ಒಮ್ಮೆಯೂ ವಿಚಲಿತನಾಗಿದ್ದಿಲ್ಲ ಮತ್ತು ಅವರ ಜಾಲಕ್ಕೆ ಸೆಳೆದು ಹೋಗಿದ್ದಿಲ್ಲ. ಏಕೆ ಮತ್ತು ಹೇಗೆ?

ಮನಸ್ಸಿಗೆ ನಿರ್ದೇಶನ

80ರ ದಶಕದಲ್ಲಿ ಚಾಮರಾಜಪೇಟೆಯ ನಾಲ್ಕನೇ ರಸ್ತೆಯಲ್ಲಿದ್ದ ಶ್ರೀ ಸಿದ್ಧಾರೂಢರ ಮಠಕ್ಕೆ ಗಣೇಶ್ ಎಂಬುವರೊಬ್ಬರು ಬರುತ್ತಿದ್ದರು. ಬೆಂಗಳೂರಿನ ಕೃಷ್ಣರಾಜ ಮಾರುಕಟ್ಟೆಯಲ್ಲಿ ಚಿಕಿತ್ಸಾಲಯವನ್ನು ತೆರೆದಿದ್ದ ಹಿರಿಯ ವೈದ್ಯರೊಬ್ಬರ ಮಗನಾಗಿದ್ದ ಅವರು ವಿಜಯ ಬ್ಯಾಂಕಲ್ಲಿ ಉದ್ಯೋಗಿಯಾಗಿದ್ದರು. ಜಾದೂ ಅವರ ಹವ್ಯಾಸ. ಜಾದೂ ವಿದ್ಯೆಯಲ್ಲಿ ಅವರು ಪರಿಣಿತರೂ ಆಗಿದ್ದರು. ಅವರು ಟೌನ್‌ಹಾಲ್‌ನಲ್ಲಿ ಜಾದೂ ಪ್ರದರ್ಶನಗಳನ್ನು ನೀಡುತ್ತಿದ್ದರು. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮೋಟಾರ್ ಬೈಕ್ ಓಡಿಸುವುದರಲ್ಲಿ ಅವರು ಖ್ಯಾತರಾಗಿದ್ದರು.

ಒಮ್ಮೆ ಮಠದಲ್ಲಿ ನಾವು ಯುವಕರೆಲ್ಲಾ ಸೇರಿಕೊಂಡು ಲಘುವಾಗಿ ಹರಟೆ ಹೊಡೆಯುತ್ತಿದ್ದಾಗ ಗಣೇಶ್ ನಮಗೆ ಕೆಲವು ಸರಳ ಜಾದೂತಂತ್ರಗಳನ್ನು ಹೇಳಿಕೊಟ್ಟರು. ಆದರೆ ಅವರು ನಮ್ಮ ಮೇಲೆ ಪ್ರಯೋಗ ಮಾಡಿದ ಒಂದು ಅಚ್ಚರಿಯ ಮನೋವೈಜ್ಞಾನಿಕ ತಂತ್ರವು ನನ್ನ ಅಂಜನಾ ಎಂಬ ಕಾದಂಬರಿಗೆ ಮೂಲಪ್ರೇರಣೆ ಕೂಡ ಆಯಿತು.

ಆಗ ಅವರು ನನಗೆ ಯಾವುದಾದರೂ ಒಂದು ಸಂಖ್ಯೆಯನ್ನು ಹಾಳೆಯ ಮೇಲೆ ಬರೆಯಲು ಹೇಳುತ್ತಿದ್ದರು. ನಾನು ಯಾವುದೋ ಸಂಖ್ಯೆಯನ್ನು ಬರೆದಿದ್ದೆ. ಅದು ಯಾವ ಸಂಖ್ಯೆ ಎಂದು ಗಣೇಶ್ ಹೇಳುತ್ತಿದ್ದರು. ಅವರೊಡನೆ ಕೆಲವು ಕಾಲ ಮಾತುಕತೆ ನಡೆಸಿದ ಮೇಲೆ ತಿಳಿದುಬಂದ ವಿಷಯವೆಂದರೆ, ನಾನು ಬರೆದಿದ್ದ ಸಂಖ್ಯೆಯನ್ನು ಬರೆಯಲು ಅವರೇ ಸೂಚಿಸಿರುವುದು ಎಂದು. ಆದರೆ ಇತ್ತೀಚಿಗೆ ಪರಿಚಯವಾದ ಜಾದೂ ಸ್ನೇಹಿತರೊಬ್ಬರು ಅದನ್ನೂ ಕಣ್ಕಟ್ಟೇ ಹೊರತು ಇನ್ನಾವುದೋ ಉನ್ನತವಾದಂತಹ ಮನೋವಿಜ್ಞಾನವೇನಲ್ಲ ಎಂದೂ ವಾದಿಸಿದರು. ಆದರೆ ನನಗೆ ಆ ವಯಸ್ಸಿನಲ್ಲಿ ಅದೇನೂ ಅರ್ಥವಾಗಲಿಲ್ಲ.


ಸಂಮೋಹನಾ ಶಕ್ತಿ

2006ರಲ್ಲಿ ಚಲನಚಿತ್ರ ಸಂಗೀತ ನಿರ್ದೇಶಕ ಹಂಸಲೇಖರವರ ದೇಸೀ ಶಾಲೆಯಲ್ಲಿ ನಾನು ಉಪಾಧ್ಯಾಯನಾಗಿ ಕೆಲಸ ಮಾಡುತ್ತಿದ್ದಾಗ, ಸಂಮೋಹನದ ಪ್ರಾತ್ಯಕ್ಷಿಕೆಯನ್ನು ನೀಡುವ ಸಲುವಾಗಿ ರಾಮಚಂದ್ರ ಗುರೂಜಿಯವರು (ಈಗ ಜನ್ಮಾಂತರ ಕಾರ್ಯಕ್ರಮದ ಖ್ಯಾತಿವೆತ್ತವರು) ಕೆಲವು ವಿದ್ಯಾರ್ಥಿಗಳನ್ನು ಸಮ್ಮೋಹನಕ್ಕೊಳಪಡಿಸಿ ಅವರ ಕೈಗಳಿಗೆ ಮತ್ತು ಕಾಲುಗಳಿಗೆ ಆಳವಾಗಿಯೇ ಸೂಜಿಗಳನ್ನು ಚುಚ್ಚಿದ್ದರು. ಆದರೆ ಸಮ್ಮೋಹನಕ್ಕೊಳಗಾಗಿದ್ದ ವ್ಯಕ್ತಿಗೆ ಯಾವುದೇ ನೋವು ಆಗುತ್ತಿರಲಿಲ್ಲ. ಅಚ್ಚರಿಯ ಸಂಗತಿಯೆಂದರೆ ರಕ್ತಸ್ರಾವ ಕೂಡ ಆಗುತ್ತಿರಲಿಲ್ಲ. ಇದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ ಹಂಸಲೇಖ, ನಾನು ಮತ್ತು ಇತರರು ಬೆಕ್ಕಸ ಬೆರಗಾಗಿದ್ದೆವು.

ಇದೇ ರಾಮಚಂದ್ರ ಗುರೂಜಿ ಕಳೆದ ವರ್ಷ ಸಮುದ್ರದಲ್ಲಿ ಕಳೆದುಹೋದ ವಿಮಾನದ ಬಗ್ಗೆ ಇಬ್ಬರ್‍ಯಾರಿಗೋ ಕೂರಿಸಿ ಅವರು ವಿಮಾನದಲ್ಲಿ ಸಂಚಾರ ಮಾಡಿದವರ ಆತ್ಮದೊಂದಿಗೆ ಸಂಪರ್ಕ ಮತ್ತು ಸಂವಹನ ಎಂದು ಮಾಡಿದ ಫ್ಲಾಪ್ ಶೋಗೆ ಕೂಡ ನಾನು ಸಾಕ್ಷಿಯಾಗಿದ್ದೆ. ಆಗ ಹಂಸಲೇಖ ದೇಸಿ ಶಾಲೆಯಲ್ಲಿ ನಾನು ನೋಡಿದ್ದೇನು?

ಇವೆಲ್ಲಾ ಏನು? ಅಂಜನಾ ಬರಿಯ ಮನಸ್ಥಿತಿಯೇ? ಪೂರ್ವಜನ್ಮ ಅಥವಾ ಆತ್ಮಗಳ ಜೊತೆ ಸಂವಹನ ಎಂಬುದು ಸಂಮೋಹನಕ್ಕೊಳಗಾಗಿರುವ ಮನಸ್ಥಿತಿಯೇ! ವಿಶೇಷ ಅರಿವು ವಿಶೇಷ ಮನಸ್ಥಿತಿಗಳಿರುವವರಿಗೆ ಲಭಿಸುತ್ತವೆಯೇ ಅಥವಾ ಯಾವುದೇ ವಿಶೇಷಣಗಳಿಲ್ಲದ ಸರಳ ಮನಸ್ಥಿತಿಯುಳ್ಳವರಿಗೆ ಲಭಿಸುವುದೇ? ನೋಡೋಣ ಮುಂದೆ. ■

ಅಂಬೇಡ್ಕರ್ ಹೆಸರಲ್ಲಿ ಪರಮೇಶ್ವರ್ ಪ್ರಮಾಣವಚನ ಸ್ವೀಕರಿಸಬೇಕಿ



ನೂತನ ಸಚಿವರ ಪ್ರಮಾಣವಚನ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಜಭವನಕ್ಕೆ ಗೆಳೆಯರಾದ ರಾಜಕುಮಾರ್ ಮತ್ತು ನಾನು ಹೋಗಿದ್ದೆವು. ಪ್ರಮಾಣ ವಚನಕ್ಕಿಂತ ಮುಂಚೆ ನಾವಿಬ್ಬರೂ ಚರ್ಚೆ ಮಾಡಿದೆವು. ಅದೇನೆಂದರೆ, ಡಾ.ಜಿ. ಪರಮೇಶ್ವರ್ ಅವರು ಡಾ.ಅಂಬೇಡ್ಕರ್ ಅಥವಾ ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಬಹುದೆಂದು ಮಾತನಾಡಿಕೊಂಡೆವು.

ಒಂದು ವೇಳೆ ಡಾ.ಅಂಬೇಡ್ಕರ್ ಅಥವಾ ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದೇ ಆದರೆ ದಲಿತರ ಕೋಟಾದಡಿ ಸಿಎಂ ಸ್ಥಾನ ಬಯಸಲು ಅರ್ಹರಾಗಿರುತ್ತಾರೆ, ಇಲ್ಲವಾದರೆ ನಿಜವಾಗಿಯೂ ಅವರು ಸಿಎಂ ಸ್ಥಾನದ (ಕೆಲವರ ಪ್ರಕಾರ ದಲಿತ ಸಿಎಂ) ಕನಸು ಕಾಣಲೂ ಸಹಿತ ಅವರಿಗೆ ನೈತಿಕತೆ ಇರುವುದಿಲ್ಲವೆಂದು ಮಾತನಾಡಿದೆವು.

ಆದರೆ ದುರಂತ ಅಂದರೆ ಡಾ.ಪರಮೇಶ್ವರ್ ಅವರು ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದ್ದು. ಅದನ್ನು ನೋಡಿ ಮತ್ತು ಕೇಳಿ ನನಗಂತೂ ತುಂಬಾ ಆಘಾತವಾಯಿತು. ಡಾ.ಅಂಬೇಡ್ಕರ್ ಅವರ ಹೆಸರನ್ನು ಹೇಳಲು ಹಿಂಜರಿಯುವ ಇಂಥ ಮನಸುಗಳನ್ನು ನಮ್ಮ ಜನಾಂಗದ ನಾಯಕರೆಂದು ಹೇಗೆ ಒಪ್ಪಿಕೊಳ್ಳಬೇಕು?

ನಮಗೆ ನಮ್ಮ ಹೆಮ್ಮೆಯೂ ಡಾ.ಅಂಬೇಡ್ಕರ್; ನಮ್ಮ ಗರ್ವವೂ ಡಾ.ಅಂಬೇಡ್ಕರ್ ಎಂದು ಹೇಳುವವರು ನಮ್ಮ ನಾಯಕರಾಗಲು ಯೋಗ್ಯವೆಂದು ನಂಬಿದವನು ನಾನು. ಇಂಥವರ ಮಧ್ಯೆ ಸ್ವಲ್ಪಮಟ್ಟಿಗೆ ಸತೀಶ ಜಾರಕಿಹೊಳಿ, ಎಚ್.ಆಂಜನೇಯ, ಡಾ.ಎಚ್.ಸಿ.ಮಹದೇವಪ್ಪನವರು ಭಿನ್ನವಾಗಿ ಕಾಣುತ್ತಾರೆ. ಹಾಗೆಯೇ ಶ್ರೀನಿವಾಸ ಪ್ರಸಾದ್



ಅವರೊಬ್ಬರು ಮಾತ್ರ ಕೆಲ ವೈಚಾರಿಕ ವಿಷಯದಲ್ಲಿ ನಮ್ಮ ಮುಂದೆ ವಿಶಿಷ್ಟ ಸ್ಥಾನದಲ್ಲಿ ನಿಲ್ಲುತ್ತಾರೆ. ಅವರು ಮಾತ್ರ ಸಂವಿಧಾನದ ಮತ್ತು ಡಾ.ಅಂಬೇಡ್ಕರ್ ಅವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದನ್ನು ಸ್ಮರಿಸಬಹುದು. ಹಾಗೆಯೇ ಜ್ಞಾತಿ ಜನಗಣತಿಯಲ್ಲಿ ಬಹಿರಂಗವಾಗಿ ಧರ್ಮದ ಕಾಲಂನಲ್ಲಿ ಬೌದ್ಧ ಎಂದು ಬರೆಸಿದ ಶ್ರೀನಿವಾಸ ಪ್ರಸಾದ್ ಸಾಹೇಬರು ನಮ್ಮ ಹೆಮ್ಮೆಯೂ ಹೌದು, ನಮ್ಮ ಗರ್ವವೂ ಹೌದು.

ಇನ್ನು ಮುಂದಾದರೂ ಡಾ.ಪರಮೇಶ್ವರ್ ಅವರನ್ನು ಸಿಎಂ (ದಲಿತ ಸಿಎಂ) ಮಾಡಬೇಕೆಂದು ಬೊಬ್ಬೆ ಹೊಡೆಯುವ ಭಟ್ಟಂಗಿಗಳಿಗೆ ಒಂದು ಸಲಹೆ ನೀಡಲು ಬಯಸುತ್ತೇನೆ. ಅದೇನಂದರೆ ಅಧಿಕಾರ ಪಡೆಯಲು ಜನಾಂಗೀಯ ಬೆಂಬಲ ಬೇಕು ಆದರೆ ನಮ್ಮ ಜನಾಂಗದ ಸ್ವಾಭಿಮಾನದ ಸಂಕೇತವಾದ ಡಾ.ಅಂಬೇಡ್ಕರ್ ಅವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸದ ನಮ್ಮ ಘನವೆತ್ತ ನಾಯಕರಿಗೆ ದಯವಿಟ್ಟು ಡಾ.ಅಂಬೇಡ್ಕರ್ ಅವರ ಬಗ್ಗೆ ಪರಿಚಯ ಮಾಡಿಸಿರಿ.

ಈ ನನ್ನ ಅನಿಸಿಕೆಯಿಂದ ಕೆಲವರು ನಖಶಿಖಾಂತ ಉರಿಸಿಕೊಳ್ಳುತ್ತಾರೆ. ಪರವಾಗಿಲ್ಲ, ಈ ನನ್ನ ಅನಿಸಿಕೆಯಿಂದ ನನ್ನನ್ನು ಕಾಂಗ್ರೆಸ್ ಪಕ್ಷದಿಂದ ಕಿತ್ತಾಕಿದರೂ ನಾನು ಹೆಮ್ಮೆ ಪಡುತ್ತೇನೆ. ನನಗೆ ಡಾ.ಅಂಬೇಡ್ಕರ್ ಅವರೇ ಪ್ರಥಮ ಹಾಗೆಯೇ ಡಾ.ಅಂಬೇಡ್ಕರ್ ಅವರೇ ಅಂತಿಮ. ಡಾ. ಅಂಬೇಡ್ಕರ್ ಅವರು ಈ ದೇಶದ ಶೋಷಿತ ಸಮುದಾಯಗಳಿಗೆ ಹೇಳಿಕೊಟ್ಟಿರುವ ಸ್ವಾಭಿಮಾನದ ಮುಂದೆ ಯಾವ ಪಕ್ಷವಾಗಲಿ ದೊಡ್ಡದಲ್ಲ ಅಥವಾ ಯಾವ ವ್ಯಕ್ತಿಯಾಗಲಿ ದೊಡ್ಡವರಲ್ಲ ಅಲ್ಲವೆ?

ಡಾ.ಪರಮೇಶ್ವರ್ ಸಾಹೇಬರೇನಾದರೂ ಡಾ. ಅಂಬೇಡ್ಕರ್ ಅವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದರೆ ನನ್ನ ಮನಸ್ಸಿನಲ್ಲಿ ಈಗ ಇರುವ ಅವರ ಮೇಲಿನ ಗೌರವ ಇಮ್ಮಡಿಯಾಗುತ್ತಿತ್ತು, ಪ್ರಮಾಣವಚನ ಸ್ವೀಕರಿಸುವ ಮೂಲಕ ನೇರವಾಗಿ ಸಂದೇಶ ರವಾನಿಸುವ ಒಂದು ಒಳ್ಳೆಯ ಅವಕಾಶ ಕಳೆದುಕೊಂಡರೇನೋ ಎಂದು ಅನಿಸುತ್ತಿದೆ. ನಾವೆಲ್ಲ ಏನೇನೋ ಯೋಚಿಸುತ್ತೇವೆ ಆದರೆ ಆ ಸಾಮಾಜಿಕ ಬದ್ಧತೆ ನಮ್ಮ ಘನವೆತ್ತ ನಾಯಕರಲ್ಲಿಯೂ ಇರಬೇಕಲ್ಲ.

ಯಾವಾಗ ನಮ್ಮ ರಾಜ್ಯಕ್ಕೆ ಇನ್ನೊಬ್ಬ ಬಿ.ಬಸವಲಿಂಗಪ್ಪ ಹುಟ್ಟಿ ಬರುತ್ತಾರೋ ಎಂದು ಎದುರುನೋಡುವಂತಾಗಿದೆ. ನನ್ನ ಜೀವನದಲ್ಲಿ ಬಿ.ಬಸವಲಿಂಗಪ್ಪ ಅವರಂಥ ನಿಜವಾದ ಕ್ರಾಂತಿಕಾರಿ ನಾಯಕರನ್ನು ಕಣ್ಣಾರೆ ಕಂಡು ಕೊನೆಯುಸಿರೆಳೆಯಬೇಕೆಂಬುವದೇ ನನ್ನ ಆಸೆ. ಆದರೂ ನೂತನವಾಗಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಮಾನ್ಯ ಡಾ.ಪರಮೇಶ್ವರ್ ಅವರಿಗೆ ಅಭಿನಂದನೆಗಳು ಸಲ್ಲಿಸುತ್ತೇನೆ.

ಕೊನೆಯದಾಗಿ ಗೋಮಾಂಸ ತಿನ್ನುವ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೇಳಿಕೆ ("ನಾನು ಗೋಮಾಂಸ ಇಲ್ಲಿಯವರೆಗೆ ತಿಂದಿಲ್ಲ, ಆದರೆ ಅದನ್ನು ತಿನ್ನಬೇಕೆನಿಸಿದರೆ ತಿನ್ನುತ್ತೇನೆ. ಅದನ್ನೆಲ್ಲ ಕೇಳಲು ಅವರು ಯಾರು?" ಎಂದು ಸಂಘಿಗಳಿಗೆ ಅವರು ಹಾಕಿರುವ ಸವಾಲು) ಗಮನಿಸಿದಾಗ ಅವರ ವೈಚಾರಿಕ ಮತ್ತು ಸಾಮಾಜಿಕ ಬದ್ಧತೆಗೆ ನಾವು ಅವರನ್ನು ಅಭಿನಂದಿಸಲೇಬೇಕು.

ಮುಖ್ಯಮಂತ್ರಿಗಳಿಗಿರುವ ಸಾಮಾಜಿಕ ಮತ್ತು ವೈಚಾರಿಕ ಬದ್ಧತೆ ಇತರ ನಮ್ಮ ದಲಿತ ನಾಯಕರುಗಳಿಗೆ ಮತ್ತು ದಲಿತ ಮುಖ್ಯಮಂತ್ರಿ ಕನಸು ಕಾಣುವವರಿಗೆ ಮಾದರಿಯಾಗಲಿ.

-ಟಿ.ಶಶಿಧರ್, ಈ ಮೇಲ್ ಮೂಲಕ



ಮೆಕಾಲೆ ಕಂಡರೆ ಸಂಘಿಗಳಿಗೆ ಯಾಕೆ ಕೋಪ ಗೊತ್ತ?

ಸಂಘ ಪರಿವಾರದವರು ಮಾತುಮಾತಿಗೆ ಮೆಕಾಲೆ ಪ್ರಣೀತ ಬ್ರಿಟಿಷ್ ಶಿಕ್ಷಣ ಪದ್ಧತಿಯನ್ನು ದೂಷಿಸುತ್ತಾ ಇರುತ್ತಾರೆ. ಯಾಕೆಂದರೆ ಕೇವಲ ಮೆಕಾಲೆ ಶಿಕ್ಷಣದಿಂದಾಗಿ ಶೂದ್ರರು ಉನ್ನತ ಶಿಕ್ಷಣ ಹೊಂದಿ ಸ್ವತಂತ್ರ ವಿಚಾರ ಶಕ್ತಿ ಬೆಳೆಸಿಕೊಂಡು ಸಾಮಾಜಿಕವಾಗಿ ಸವರ್ಣೀಯರಿಗಿಂತ ಮುಂದೆ ಹೋಗಲು ಸಾಧ್ಯವಾಗಿದೆ. ಇದು ಮೆಕಾಲೆ ಬಗ್ಗೆ ವೈದಿಕರ ಹೊಟ್ಟೆಯಲ್ಲಿ ಕಿಚ್ಚು ಹೊತ್ತಿಸಿದೆ. ಮೆಕಾಲೆ ಶಿಕ್ಷಣ ಪದ್ಧತಿಯಿಂದಾಗಿ ದೇವರು ಧರ್ಮದ ಹೆಸರಿನ ತಮ್ಮ ಕಳ್ಳ ವೇಷ ಕಳಚಿ ಬಿದ್ದಿದ್ದು ಹಾಗೂ ಪುರಾಣಕಥೆಗಳ ಪೊಳ್ಳುತನ ಬಯಲಾಗಿದ್ದು ವೈದಿಕರಿಗೆ ನುಂಗಲಾರದ ತುತ್ತಾಗಿದೆ. ಮೆಕಾಲೆ ಶಿಕ್ಷಣ ಇರದಿರುತ್ತಿದ್ದರೆ ಇಂದಿಗೂ ಹಿಂದೂ ಸಮಾಜವು ವೈದಿಕರ ಕಪಿಮುಷ್ಟಿಯೊಳಗೇ ಇರುತ್ತಿತ್ತು ಹಾಗೂ ದೇವರು ಧರ್ಮದ ಹೆಸರಲ್ಲಿ ಭೀಕರವಾಗಿ ಶೋಷಣೆಗೆ ಒಳಗಾಗುತ್ತಿತ್ತು, ಈ ರೀತಿ ಹುಟ್ಟಿನ ಬಲದಿಂದಲೇ ತಮಗೆ ತಾನಾಗಿ ಬರುವ ಅಧಿಕಾರ ಮತ್ತು ಹಣ ಗಳಿಸುವ ಸುಲಭ ಮಾರ್ಗವು ಮೆಕಾಲೆ ಶಿಕ್ಷಣದಿಂದ ಕೊನೆಗೊಂಡಿದ್ದು ನೋಡಿ ಸವರ್ಣೀಯರಿಗೆ ಮೆಕಾಲೆ ಬಗ್ಗೆ ಇಷ್ಟೊಂದು ವೈಯಕ್ತಿಕ ದ್ವೇಷ.

1835 ರಲ್ಲಿ ಮೆಕಾಲೆ ಭಾರತಕ್ಕೆ ಬಂದಾಗ ಕೇವಲ ಮೇಲ್ಜಾತಿಯ ಹಿಡಿತದಲ್ಲಿದ್ದ ಗುರುಕುಲಗಳನ್ನು ಹಾಗೂ ಅಕ್ಷರ ಜ್ಞಾನದ ಬಲದಿಂದ ಮೇಲ್ಜಾತಿಗಳು ಮಾಡುತ್ತಿದ್ದ ಅನಕ್ಷರಸ್ಥರ ಶೋಷಣೆ ಮತ್ತು ಮೋಸವನ್ನು ನೋಡಿ ಅವನು ದಂಗಾಗಿಹೋಗಿದ್ದ. ಕೆಳಜಾತಿ ಸಮಾಜದಲ್ಲಿದ್ದ ಘೋರ ಅನಕ್ಷರತೆ, ಮೌಢ್ಯ, ಬಡತನ ಹಾಗೂ ನಿಸ್ಸಹಾಯಕತೆಗಳನ್ನು ಹೋಗಲಾಡಿಸಲು ಎಲ್ಲರಿಗೂ ಸಮಾನ ವಿದ್ಯೆ ಕೊಡುವುದೊಂದೇ ಮಾರ್ಗವೆಂದು ಮನಗಂಡು ಮೆಕಾಲೆ ಭಾರತಕ್ಕಾಗಿ ಬ್ರಿಟಿಷ್ ಶಿಕ್ಷಣ ನೀತಿ ರೂಪಿಸಿದ. ಮೆಕಾಲೆ ಪ್ರಣೀತ ಶಿಕ್ಷಣ ಪದ್ಧತಿ ಇರದಿದ್ದರೆ ದಲಿತರು ಮತ್ತು ಕೆಳಜಾತಿಯವರು ಇಂದಿಗೂ ಅಶಿಕ್ಷಿತರಾಗಿಯೇ ಇದ್ದು ಮೇಲ್ಜಾತಿಯವರ ಗುಲಾಮೀ ಮಾಡುತ್ತಾ ವೈದಿಕರ ಗುರುಕುಲದ ಹೊರಗೇ ಬದ್ದಿರುತ್ತಿದ್ದರು.

ಮೆಕಾಲೆಯಿಂದಾಗಿ ಶಿಕ್ಷಣದ ಮೇಲೆ ಸವರ್ಣೀ... ಏಕಸ್ವಾಮ್ಯ ಮುರಿದು ಬಿದ್ದುದರಿಂದ ಹಾಗೂ ... ಸಮಾಜದ ಮೇಲಿದ್ದ ತಮ್ಮ ಹಿಡಿತ ಕಳೆದುಕೊಂಡ... ಮೆಕಾಲೆ ಹೆಸರೆತ್ತಿದರೆ ಸಾಕು ಸ... ಮೈಯುರಿಯುತ್ತದೆ. ಅದಕ್ಕಾಗಿ ಮೆಕಾಲೆ ಬ... ಕತೆಗಳನ್ನು ಹೆಣೆದು ಕೇಸರಿ ಟ್ರೋಲ್‌ಗಳು ... ದ್ವೇಷದ ವಿಷವನ್ನು ಅನುದಿನವೂ ವಾಟ... ಕಾರುತ್ತಲೇ ಇರುತ್ತಾರೆ.

ಮೆಕಾಲೆ ಭಾರತಕ್ಕೆ ಬಂದಾಗ ಎಲ್ಲಾ ತೀರ್ಥ... ಭಿಕ್ಷುಕರೇ ತುಂಬಿದ್ದರು. ಅಷ್ಟೇ ಅಲ್ಲ, ದೂರದಿಂ... ಯಾತ್ರಿಗಳನ್ನು ಕೊಂದು ದರೋಡೆ ಮಾಡುವ ... ಜನಾಂಗಗಳೂ ಉತ್ತರ ಭಾರತದ ತೀರ್ಥಕ್ಷೇತ್ರಗಳ... ಇದ್ದವು. ಆದರೆ ಕೇಸರಿ ಟ್ರೋಲ್‌ಗಳು ಈ... ತಿರುಚಿ ಆ ಕಾಲದಲ್ಲಿ ಭಾರತದಲ್ಲಿ ಭಿಕ್ಷುಕರೆ... ಮತ್ತು ಸಮಾಜದಲ್ಲಿ ಅಪರಾಧಗಳೇ ಜರು... ಎಂಬುದನ್ನು ನೋಡಿದ ಮೆಕಾಲೆ ಮತ್ಸರಗೊಂಡ... ಸಮಾಜವನ್ನು ಕೆಡಿಸಲು ಬ್ರಿಟಿಷ್ ಶಿಕ್ಷಣ ಪದ್ಧ... ಭಾರತೀಯರ ಮೇಲೆ ಹೇರಿ ಹೊಲಸು ಹರಡಿ... ಅಪ್ಪಟ ಸುಳ್ಳು ಬರೆದು ಇಂಟರ್ನೆಟ್ ಓದುಗ... ತಪ್ಪಿಸುತ್ತಿದ್ದಾರೆ. ಆದರೆ ಮೆಕಾಲೆಯ ... ಶಿಕ್ಷಣವಿರದಿದ್ದರೆ ಇಂದು ಭಾರತದಲ್ಲಿ ಇಂ... ವಾಟ್ಸ್‌ಆಪ್ ಸಹ ಇರುತ್ತಿರಲಿಲ್ಲ ಎಂಬ ... ಪಡೆಗಳ ಕುತಂತ್ರಿ ತಲೆಗೆ ಹೋಗದಿರುವುದು...

- ಆರ್.ಬಿ.ಶೆಣಾವ, ಮ...

ತಾ. 4.11.2015 ರ ಲಂಕೇಶ್ ಸ... ಸಾಹಿತಿಗಳು ತಮಗೆ ಕೊಟ್ಟ ಪ್ರಶಸ್ತಿಗಳನ್ನು ... ಹಿಂದಿರುಗಿಸುತ್ತಿರುವ ಬಗ್ಗೆ ಲೇಖನ ಪ್ರಕಟ... ಆ ಕುರಿತು ಎಷ್ಟೋ ಚರ್ಚೆಗಳಾಗಿವೆ. ಸ... ಪ್ರತಿಯೊಬ್ಬರಿಗೂ ಪೂರಾ ಸ್ವಾತಂತ್ರ್ಯ ಇದೆ.

ಸಾಹಿತಿಗಳು ಸಾಹಿತ್ಯಲೋಕಕ್ಕೆ ಸಲ್ಲಿಸಿದ ... ಗುರುತಿಸಿ ಸರ್ಕಾರ ಪ್ರಶಸ್ತಿಗಳನ್ನು ಕೊಡ... ಸಾಹಿತಿಗಳು ಪ್ರಶಸ್ತಿಗಳನ್ನು ಮರಳಿ ಕೊಡು... ನೋಡಿದರೆ ಇದು ಒಂದು ರಾಜಕೀಯ... ಪ್ರಚಾರವನ್ನು ಗಿಟ್ಟಿಸಿಕೊಳ್ಳುವ ಮಾರ್ಗ ... ಇತ್ತೀಚಿತ್ತಲಾಗಿ ಸಾಹಿತಿಗಳು ಅಭಿವೃದ್ಧಿ ಪರ ಹಾ... ಪರ ಮಾತನಾಡುವದನ್ನು ಬಿಟ್ಟು ಧರ್ಮ... ತಮ್ಮ ಹೇಳಿಕೆಗಳನ್ನು ಕೊಡುವುದು ... ಆತಂಕವನ್ನು ಉಂಟುಮಾಡುತ್ತಿದೆಯಾ? ... ಕಾಡುತ್ತಿದೆ. ಇದು ನಿಜಕ್ಕೂ ವಿಷಾದನೀಯ...

ಇನ್ನಾದರೂ ರಾಜ್ಯ ಹಾಗೂ ರಾಷ್ಟ್ರ ... ಸಾಹಿತಿಗಳು ಮಾತನಾಡಿ ಸಮಾಜವನ್ನು ವ... ಎಂದು ಹಾರೈಸುವೆ.

- ಮುರಳೀಧರ ಹನಮಸಾಗರ,



2015, ನವೆಂಬರ್ 11ನೇ ತಾರೀಖಿನ ಪತ್ರಿಕೆಯಲ್ಲಿ ಡಾ. ಹೆಚ್.ಡಿ. ಉಮಾಶಂಕರ್‌ರವರ ಲೇಖನವನ್ನು ಸಮರ್ಥಿಸಿ ನಾನು ಈ ಚೌಪದಿ ಪದ್ಯಗಳನ್ನು ಬರೆದಿರುವೆ.

ಅನಗತ್ಯವಾಗಿ ಬೇಡ ಡಾ. ಅಂಬೇಡ್ಕರರಿಗೆ ಪ್ರತಿಮೆ, ಭವನ
ಆ ಶರಣರ ಹೆಸರಲ್ಲಿ ನಿರ್ಮಿಸೋಣ ಸಮೃದ್ಧವನ
ವಿಗ್ರಹವನು ಮೆರೆಸುವುದು ಧೂರ್ತ ಪುರೋಹಿತಶಾಹಿ
ನಾವಾಗೋಣಾ ಬಸವಪ್ರಿಯನ ಸದ್ವಿಚಾರಗ್ರಾಹಿ

ಹಾರುವಕ್ಕನ ಚಾಳಿ ಅನ್ಯ ಜಾತಿಮತಗಳಿಗೆಲ್ಲ
ಈ ಪರಿ ಬೆಳೆದವು ಶೂದ್ರ ದುರ್ಗುಡಿ, ದುರ್ಮ್ಮಠಗಳೆಲ್ಲ
ಇವುಗಳಿಗೆಲ್ಲ ಪುರೋಹಿತಶಾಹಿಯೇ ಘನಾದರ್ಶ
ಆಧ್ಯಾತ್ಮ/ಸದ್ಧರ್ಮ ಅಳಿಯಿತು ಆಗಲು ಧನಕನಕ ವರ್ಷ

ಗುಡಿ ಮಠವಾಗಿರಲು ಮಧ್ಯವರ್ತಿಗೆ ಜೀವವಿಮೆ
ಮೂಡಿಸುವನು ದೇವಲೋಕದ ಶಾಖೆಗಳೆಂಬ ಭ್ರಮೆ
ನಿಜದಲಿ ಕೃಷಿ/ಕರ್ಮ ಕ್ಷೇತ್ರವೇ ಭೂಮಿಯ ಮೇಲಿನ ಸ್ವರ್ಗ
ಉಳಿಸಲದನು ಪಣ ತೊಡಲಿ ರೈತಾದಿ ಶೂದ್ರ ವರ್ಗ

- ಕೆ.ಎಸ್. ಮಲ್ಲಿಕಾರ್ಜುನ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...
lankesh70@rediffmail.c...
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬ...
ಪ್ರತಿಕ್ರಿಯೆಗಳನ್ನು 9980331427 ...
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳ...



...ಂಪೂರ್ಣ ಅವಧಿ ಮುಗಿಸುವೆ: ಸಾ.ರಾ.ಗೋವಿಂದ್

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ನೂತನ ಅಧ್ಯಕ್ಷರಾಗಿ ಸಾ.ರಾ.ಗೋವಿಂದ್ ಆಯ್ಕೆ ಆಗಿದ್ದಾರೆ. ವಾಣಿಜ್ಯ ಮಂಡಳಿಯಲ್ಲಿ ಈಗಾಗಲೇ ಹಲವು ಹುದ್ದೆಗಳನ್ನು ನಿರ್ವಹಿಸಿರುವ ಇವರು, ಡಬ್ಬಿಂಗ್ ಹೋರಾಟಕ್ಕೆ ಸಂಬಂಧಿಸಿದ್ದಂತೆ ಮಂಡಳಿಯ ಕಾರ್ಯದರ್ಶಿ ಸ್ಥಾನಕ್ಕೂ ರಾಜೀನಾಮೆ ನೀಡಿದ್ದರು.

...ಈ ಬಾರಿಯ ಚುನಾವಣೆ ಏನೆಲ್ಲ ಘಟನೆಗಳಿಗೆ ...ಯಿತು. ಸಿನಿಮಾ ರಂಗ ಒಡೆದ ಮನೆ ಅನ್ನುವುದು ...ಮ್ಮೆ ಸಾಬೀತಾಯಿತು. ಈ ಕುರಿತು ಏನು ...ತ್ತೀರಿ?

...ಮಾ ಅಂದರೆ ರಾಜಕಾರಣ ಅಲ್ಲ, ಇದು ಸಾಂಸ್ಕೃತಿಕ ... ನನಗೂ ಈ ನಡೆ ಬೇಸರ ತರಿಸಿದೆ. ವೈರಿಗಳಂತೆ ...ಣೆ ಮಾಡಿದರು. ಈ ಕುರಿತು ನಾನು ಯಾರನ್ನೂ ...ವುದಿಲ್ಲ ಮತ್ತೆ ಇಂತಹ ಪರಿಸ್ಥಿತಿ ಎದುರಾಗಬಾರದು. ... ಉದ್ಯಮವನ್ನು ಬೆಳೆಸುವವರು ಅಧಿಕಾರದ ಚುಕ್ಕಾಣಿ ...ಲಿ.

...ಸಾಂಸ್ಕೃತಿಕ ವಲಯದಲ್ಲಿ ನೀವೂ ಇದ್ದೀರಿ. ಯಾಕೆ ...ಚುನಾವಣೆಯಿಂದ ಹಿಂದೆ ಸರಿಯಬಾರದು?


...ದಿನೈದು ವರ್ಷಗಳಿಂದ ಅದನ್ನೇ ಮಾಡಿದ್ದೇನೆ. ...ಂದಿಗೂ ನಾನು ಪೈಪೋಟಿ ನಡೆಸಿಲ್ಲ. ತೀವ್ರ ...ಡ್ಡುವ ಎಲ್ಲಾ ಅರ್ಹತೆಗಳೂ ನನ್ನಲ್ಲಿ ಇದ್ದರೂ ...ಹಿರಿಯರ ಮಾತಿಗೆ ಗೌರವ ಕೊಟ್ಟು ಹಿಂದೆ ...ನೆ. ಈ ಬಾರಿ ನಾನೇ ಅಧ್ಯಕ್ಷ ಆಗಬೇಕು ಅನ್ನುವ ...ಹೆಚ್ಚಾಯಿತು. ಹೀಗಾಗಿ ಸ್ಪರ್ಧಿಸಬೇಕಾಯಿತು.

...ಈ ಗೆಲುವನ್ನು ನೀವು ಏನೆಂದು ಬಣ್ಣಿಸುತ್ತೀರಿ?

... ಮೂರು ದಶಕಗಳ ಹೋರಾಟಕ್ಕೆ ನೀಡಿದ ಗೌರವ ...ನ್ನ ಆತ್ಮೀಯರ ಶ್ರಮದಿಂದಾಗಿ ನಾನು ಗೆದ್ದಿದ್ದೇನೆ. ... ಚಲನಚಿತ್ರ ವಾಣಿಜ್ಯ ಮಂಡಳಿಯ ...ಗಿರಬಹುದು. ಆದರೆ, ಹೋರಾಟ ಯಾವತ್ತಿಗೂ ...ಲ್ಲ, ಕನ್ನಡ ಪರ ಧ್ವನಿ ಎತ್ತುತ್ತಲೇ ಇರುತ್ತೇನೆ.

... ಡಬ್ಬಿಂಗ್ ವಿಷಯವಾಗಿ ವಾಣಿಜ್ಯ ಮಂಡಳಿಯ ...ರ್ಶಿ ಸ್ಥಾನಕ್ಕೆ ನೀವು ರಾಜೀನಾಮೆ ನೀಡಿದ್ದೀರಿ. ಮತ್ತೆ ... ಪರಿಸ್ಥಿತಿ ಬಂದರೆ?

...ಣಿಜ್ಯ ಮಂಡಳಿಯ ಅಧ್ಯಕ್ಷನಾಗಿ ನಾನು ಡಬ್ಬಿಂಗ್



ಕುರಿತು ಏನೂ ಹೇಳಲಾರೆ. ಯಾಕೆಂದರೆ, ಕೇಸ್ ಕೋರ್ಟ್‌ನಲ್ಲಿದೆ. ಅಲ್ಲದೇ ಡಬ್ಬಿಂಗ್ ಹೋರಾಟಕ್ಕೆ ಅನೇಕರು ಇದ್ದಾರೆ. ಅವರು ಅದನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ವಾಣಿಜ್ಯ ಮಂಡಳಿಗೊಂದು ಬೈಲಾ ಇದೆ. ಅದು ಏನು ಹೇಳುತ್ತದೆಯೋ ಹಾಗೆ ನಡೆದುಕೊಳ್ಳುತ್ತೇನೆ. ಯಾವುದೇ ಕಾರಣಕ್ಕೂ ರಾಜೀನಾಮೆ ನೀಡಲಾರೆ. ನನ್ನ ಅವಧಿಯನ್ನು ಈ ಬಾರಿ ಪೂರ್ಣಗೊಳಿಸುತ್ತೇನೆ.

** ಕಲಾವಿದರ ಮತ್ತು ನಿರ್ಮಾಪಕರ ಮಧ್ಯೆ ಒಗ್ಗಟ್ಟೇ ಇಲ್ಲ, ಇವರನ್ನು ಒಟ್ಟಾಗಿಸಲು ಏನು ಮಾಡುತ್ತೀರಿ?*

ಎಲ್ಲರ ಕಷ್ಟಸುಖಗಳು ನನಗೆ ಗೊತ್ತಿವೆ. ನಾನು ನಿರ್ಮಾಪಕನಾಗಿಯೂ, ಕಲಾವಿದನಾಗಿಯೂ ದುಡಿದಿದ್ದೇನೆ. ಇಬ್ಬರ ಕಷ್ಟಗಳನ್ನೂ ಆಲಿಸುತ್ತೇನೆ. ಚಿತ್ರೋದ್ಯಮಕ್ಕೆ ಎಲ್ಲರೂ ಬೇಕು. ಯಾರಿಗೂ ಅನ್ಯಾಯ ಆಗುವುದಕ್ಕೆ ಬಿಡುವುದಿಲ್ಲ, ಎಲ್ಲರನ್ನೂ ಸೇರಿಸಿ ಮಾತನಾಡುತ್ತೇನೆ. ಬಿರುಕನ್ನು ಸರಿ ಮಾಡುತ್ತೇನೆ ಎಂಬ ವಿಶ್ವಾಸ ನನಗಿದೆ.

** ಕನ್ನಡದ ವಿಷಯವಾಗಿ ಹೋರಾಟ ಮಾಡುತ್ತಲೇ ಇರುತ್ತೀರಿ. ಸಿನಿಮಾದಿಂದಲೇ ಕನ್ನಡ ಕೊಲೆ ಆಗುತ್ತಿದೆ ಎಂಬ ಆರೋಪ ಇದೆಯಲ್ಲ?*

ನಮ್ಮದು ಕನ್ನಡ ಚಿತ್ರೋದ್ಯಮ. ಕನ್ನಡದ ಬಗೆಗೆ ಅನ್ಯಾಯ ಆಗುವುದಕ್ಕೆ ನಾನು ಬಿಡುವುದಿಲ್ಲ. ಕರ್ನಾಟಕದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ. ಆಂಗ್ಲ ಭಾಷೆಯ ಶೀರ್ಷಿಕೆಗಳು ಹೆಚ್ಚಾಗುತ್ತಿವೆ. ನಿರ್ದೇಶಕರಿಗೆ ಮನವರಿಕೆ ಮಾಡಿಕೊಡುತ್ತೇನೆ. ಎಲ್ಲರೂ ನಮ್ಮವರೇ ಆಗಿರುವುದರಿಂದ ಈ ಸಮಸ್ಯೆ ಬೇಗ ಸರಿಹೋಗುತ್ತದೆ.

** ಮಲ್ಟಿಪ್ಲೆಕ್ಸ್ ಥಿಯೇಟರ್ ವಿರುದ್ಧವೂ ನೀವು ಹೋರಾಟ ಮಾಡಿದ್ದೀರಿ. ಇದು ಮುಂದುವರೆಯುತ್ತಾ?*

ಈ ಚಿತ್ರಮಂದಿರಗಳು ಸುಲಿಗೆ ಮಾಡುತ್ತಿವೆ. ಅದಕ್ಕೆ ಕಡಿವಾಣ ಹಾಕಲೇಬೇಕು. ಅತೀ ಶೀಘ್ರದಲ್ಲಿ ಅದಕ್ಕೊಂದು ರಣತಂತ್ರ ಹೆಣೆಯುತ್ತೇವೆ. ಅಲ್ಲದೇ ಇದರತ್ತ ಮುಖ್ಯಮಂತ್ರಿಗಳ ಮತ್ತು ವಾರ್ತಾ ಇಲಾಖೆಯ ಸಚಿವರ ಗಮನ ಹರಿಸುವಂತೆ ಮಾಡುತ್ತೇನೆ. ಅವರು ನಮ್ಮ ಮಾತು ಕೇಳದೇ ಇದ್ದರೆ ಬೇರೆ ರೀತಿಯ ಹೋರಾಟಕ್ಕೂ ನಾವು ಸಿದ್ಧ.

** ಚಲನಚಿತ್ರ ವಾಣಿಜ್ಯ ಮಂಡಳಿಯು ಹಲವು ಹೋಳಾಗಿದೆ. ಇವೆಲ್ಲವನ್ನೂ ಒಂದಾಗಿಸುತ್ತೀರಾ?*

ಈಗಾಗಲೇ ಉತ್ತರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಆಗಿದೆ. ಇನ್ನೆರಡು ವಾಣಿಜ್ಯ ಮಂಡಳಿಗಳು ಶುರು ಆಗಲಿವೆ ಎಂಬ ಮಾತೂ ಕೇಳಿ ಬಂದಿದೆ. ಅಲ್ಲದೇ ಡಬ್ಬಿಂಗ್ ಚಲನಚಿತ್ರ ವಾಣಿಜ್ಯ ಮಂಡಳಿಯೂ ಆಗಿದೆ. ಇದು ಒಳ್ಳೆಯದಲ್ಲ. ಅಲ್ಲದೇ ಒಟ್ಟಾಗಿ ಹೋದಾಗಲೇ ನಾವು ಎಲ್ಲವನ್ನೂ ಗೆಲ್ಲುವುದಕ್ಕೆ ಸಾಧ್ಯ. ಆಗುತ್ತಿರುವ ಸಮಸ್ಯೆಯನ್ನು ಕೇಳುತ್ತೇನೆ. ಸರಿ ಮಾಡುವತ್ತ ಹೆಜ್ಜೆ ಇಡುತ್ತೇನೆ.

** ನಿಮ್ಮ ವಿರೋಧಿ ಬಣದ ಬಗ್ಗೆ ಏನು ಹೇಳುತ್ತೀರಿ?*


ನನಗೆ ಯಾರೂ ವಿರೋಧಿಗಳು ಇಲ್ಲ ಅನ್ನುವುದನ್ನು ಆಗಲೇ ಸ್ಪಷ್ಟ ಪಡಿಸಿದ್ದೇನೆ. ಚುನಾವಣೆ ಮುಗಿಯುವತನಕ ಅವರು ನನ್ನ ಪ್ರತಿಸ್ಪರ್ಧಿಗಳು. ಈಗ ಅವರು ನನ್ನದೇ ಕುಟುಂಬದವರು. ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗುವುದೇ ಅಧ್ಯಕ್ಷನ ಕರ್ತವ್ಯ. ಆ ಕೆಲಸವನ್ನು ಚಾಚೂ ತಪ್ಪದೇ ಮಾಡುವೆ. ■

...ಮಿತ ನಿಮಿತ್ತಂ ಬಹುಕೃತ ಅನೃತಂ

...ಬುಲೆಟ್ ರೈಲು, ಮೇಕ್ ಇನ್ ಇಂಡಿಯಾ, ...ಪ್ ಇಂಡಿಯಾ, ಸ್ಮಾರ್ಟ್ ಸಿಟಿ ಇತ್ಯಾದಿಗಳೆ ...ವೃದ್ಧಿ" ಎಂದು ಕರೆಯಲಾಗುತ್ತಿರುವ ದಿನಗಳಿವು. ...ಗೆ, ಪಾಶ್ಚಿಮಾತ್ಯ ಸಂಸ್ಕೃತಿಯನ್ನು ತಿರಸ್ಕರಿಸಬೇಕೆಂದು ...ಸುವ ಇದೇ ಮಂದಿ ತಮ್ಮ ಈ "ಅಭಿವೃದ್ಧಿ"ಯ ...ಷಣೆಗಳಿಗೆ ಪಾಶ್ಚಿಮಾತ್ಯ ಭಾಷೆಯ ಮೊರೆ ...ವುದೇಕೆಂಬ ಕುತೂಹಲ ಬಹಳಷ್ಟು ಜನರನ್ನು ...ದೆ. ಇರಲಿ. "ಅಭಿವೃದ್ಧಿ" ಮಂತ್ರವನ್ನು ದಶದಿಕ್ಕುಗಳಲ್ಲಿ ...ಗುತ್ತಿರುವ ಈ ಸಂದರ್ಭದಲ್ಲಿ ಚುನಾವಣಾ ಪ್ರಚಾರ ... ಕೂಡ ಅಭಿವೃದ್ಧಿ ಕಾಣಬೇಡವೇ ಎಂಬ ಪ್ರಶ್ನೆ ...ತವಲ್ಲ ಎನಿಸುತ್ತದೆ. ಆದರೆ ಅದು ...ಗೊಳ್ಳುವ ಬದಲು ದಿನೇ ದಿನೇ ...ಟ್ಟಕ್ಕೆ ಇಳಿಯುತ್ತಲೇ ಸಾಗಿರುವುದು ...ದ್ದ ದುರಂತ. ಅದರಲ್ಲೂ ಸಂಘಪರಿ... ಹರಕುಬಾಯಿಗಳ ಹೊಲಸು ...ಗಳನ್ನು ಮೀರಿಸಬಲ್ಲವರು ನಾಗರಿಕ ...ಜಗಳಲ್ಲೆಲ್ಲೂ ಕಾಣಸಿಗ ಲಾರರೆಂದೇ ...ತ್ತಿದೆ. ಇತ್ತೀಚಿನ ಬಿಹಾರ ಚುನಾವಣೆಗಳ ... ಗುರುಶಿಷ್ಯರ ಬಾಯಿಯಿಂದ ...ದ್ದಿರುವ ಮಾತುಗಳನ್ನಂತೂ ಗಟಾರದಲ್ಲಿ ... ಕೊಳಚೆ ನೀರಿಗೆ ಹೋಲಿಸಬೇಕಷ್ಟೆ. ... ವೈಷಮ್ಯ ಹೆಚ್ಚಿಸುವ ಮೂಲಕ ...ರನ್ನು ಧ್ರುವೀಕರಿಸಲು ಹೊರಟಿರುವ ... ಗುರು, 'ಇಲ್ಲಿ ದಲಿತ ಮತ್ತು ಇತರ ...ದ ಜಾತಿಗಳ (ಒಬಿಸಿ) ಮೀಸಲಾತಿ ... ಕಸಿದು ಒಂದು ನಿರ್ದಿಷ್ಟ ...ಯದವರಿಗೆ (ಮುಸ್ಲಿಂ ಎಂದು ...) ಸಮರ್ಪಿಸಲಾಗುತ್ತಿದೆ; ಆದರೆ ಬಿಜೆಪಿ ...ಗೆಂದೂ ಅಂಬೇಡ್ಕರರ ಕಾಣ್ಕೆಯಾದ ... ವಿಷಯಕ್ಕೆ ತಲೆಹಾಕಿಲ್ಲ' ಎಂದು ಪದೇಪದೇ ... ಇನ್ನು ಚಾಂಡಾಲ ಶಿಷ್ಯ 'ಬಿಹಾರದಲ್ಲಿ ಬಿಜೆಪಿ ... ಪಾಕಿಸ್ತಾನದಲ್ಲಿ ಪಟಾಕಿಗಳು ಸಿಡಿಯುತ್ತವೆ' ಎಂಬ ...ಚ ಮಾತುಗಳನ್ನಾಡುತ್ತ ಬಿಜೆಪಿಯೇತರರಿಗೆ ...ವವರು ದೇಶಪ್ರೇಮಿಗಳಲ್ಲವೆಂದು ಪರೋಕ್ಷವಾಗಿ ...ನ್ನು ಅಪಮಾನಿಸುತ್ತಾನೆ.

... ಬಿಜೆಪಿ ಯಾವತ್ತೂ ಮೀಸಲಾತಿಯನ್ನು ... ಗೋಜಿಗೇ ಹೋಗಿಲ್ಲವೆಂದು ಮೋದಿ ...ಲ್ಲಿ ಹಸಿ ಹಸಿ ಸುಳ್ಳು, ಇತಿಹಾಸದ ಪುಟಗಳನ್ನು ...ದರೆ ಸಾಕು ಸತ್ಯಾಂಶ ತಾನೇತಾನಾಗಿ ...ತ್ತದೆ. ಸತ್ಯಾಂಶ ಏನೆಂದರೆ ಇದೇ ಬಿಜೆಪಿ ಈ ಹಿಂದೆ ಉತ್ತರ ಪ್ರದೇಶದಲ್ಲಿ ಆಡಳಿತದ ಚುಕ್ಕಾಣಿಯನ್ನು ಹಿಡಿದಿದ್ದ ಸಂದರ್ಭದಲ್ಲಿ ಮೀಸಲಾತಿಯನ್ನು ದುರ್ಬಲಗೊಳಿಸಲು ಯತ್ನಿಸಿತ್ತು. ಈ ವಿದ್ಯಮಾನ ನಡೆದುದು 2001ರಲ್ಲಿ. ಇಂದು ಕೇಂದ್ರ ಗೃಹಸಚಿವನಾಗಿರುವ ರಾಜನಾಥ್ ಸಿಂಗ್ ಅಂದು ರಾಜ್ಯದ ಮುಖ್ಯಮಂತ್ರಿ ಆಗಿದ್ದ. ಆಗ ಆತ ಒಬಿಸಿ ಮತ್ತು ದಲಿತ ಸಮುದಾಯಗಳಲ್ಲಿ ಸಣ್ಣಸಣ್ಣ ಉಪಜಾತಿಗಳ ಪ್ರವರ್ಗಗಳನ್ನು ಹುಟ್ಟುಹಾಕಿದ್ದ. ಸಿಂಗ್‌ನ ಈ ಹೆಜ್ಜೆಯ ಉದ್ದೇಶ ಕೆನೆ ಪದರದ ಜನರನ್ನು ಪ್ರತ್ಯೇಕಿಸುವುದಾಗಿರಲಿಲ್ಲ. ವಾಸ್ತವವಾಗಿ ಅದರ ಹಿಂದೆ ಕೆಲವು ನಿರ್ದಿಷ್ಟ ಜಾತಿಗಳ ಮೀಸಲಾತಿ ಕೋಟಾವನ್ನು ಕಡಿಮೆ ಮಾಡುವ ಉದ್ದೇಶವಿತ್ತು. ಈ ರೀತಿಯಾಗಿ ಮೀಸಲಾತಿ ಪ್ರಮಾಣವನ್ನು ಮತ್ತಷ್ಟು ವಿಭಜಿಸುವ ಮೂಲಕ ಒಬಿಸಿ ಮತ್ತು ದಲಿತ ಸಮುದಾಯಗಳೊಳಗೆ ಒಡಕು ಮೂಡಿಸುವುದು ಸಿಂಗ್‌ನ ಅಂತಿಮ ಗುರಿ ಆಗಿತ್ತು. ಇದು, ಬಿಜೆಪಿಯ ಒಟ್ಟು ಕಾರ್ಯತಂತ್ರಕ್ಕೆ ಅನುಗುಣವಾಗಿಯೂ ಇತ್ತು. ಏಕೆಂದರೆ ಪ್ರಸಕ್ತ ಮೀಸಲಾತಿ ನೀತಿ "ದೋಷಯುತ" ವಾಗಿದ್ದು ಅದನ್ನು ಸರಿಪಡಿಸಬೇಕೆಂದು ಬಿಜೆಪಿ ಯಾವತ್ತೂ ಕೂಗೆಬ್ಬಿಸುತ್ತಲೇ ಬಂದಿದೆ. ವಾಸ್ತವದಲ್ಲಿ ಇದು ಬಿಜೆಪಿಯ ಮಾತೃ ಸಂಘಟನೆಯಾದ ಆರೆಸ್ಸೆಸ್‌ನ ಹೆಬ್ಬಯಕೆಯ ಪ್ರತಿಫಲನವಾಗಿದೆ. ಭಾರತವನ್ನು "ಹಿಂದೂ ರಾಷ್ಟ್ರ"ವನ್ನಾಗಿಸಿ ಜಾತಿಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಲು ಹವಣಿಸುತ್ತಿರುವ ಆರೆಸ್ಸೆಸ್, ಸಂವಿಧಾನವನ್ನು ಬಿಸುಟು ಅದರ ಜಾಗದಲ್ಲಿ ಮನುಸಂಹಿತೆಯನ್ನು ಜಾರಿಗೊಳಿಸಲು ಉದ್ದೇಶಿಸುತ್ತಿದೆ. ಆದುದರಿಂದಲೆ ಸಂಘ ಪರಿವಾರ ಜಾತಿ ಆಧಾರಿತ ಮೀಸಲಾತಿಯನ್ನು ವಿರೋಧಿಸುತ್ತದೆ; ಆದಾಯ ಆಧರಿತ ಮೀಸಲಾತಿ ಬೇಕೆನ್ನುತ್ತದೆ.

ತನ್ನ ಗುರಿ ಸಾಧಿಸಲು ರಾಜನಾಥ್ ಸಿಂಗ್ ಒಂದು ಉಪಾಯ ಹೂಡಿದ. ಮೀಸಲಾತಿಯ ಪ್ರಯೋಜನ ಉದ್ದೇಶಿತ ಜನರನ್ನು ತಲಪುತ್ತಿದೆಯೆ ಇಲ್ಲವೆ ಎಂಬುದನ್ನು ಕಂಡುಕೊಳ್ಳಬೇಕಾಗಿದೆ ಎಂದು ಹೇಳಿದ. ಅಂತೆಯೆ ಮೀಸಲಾತಿಯ ಪ್ರಯೋಜನವನ್ನು ಅಳೆಯುವುದಕ್ಕಾಗಿ ಮತ್ತು ಮೀಸಲಾತಿ ನೀತಿಗೆ ಸೂಕ್ತ ತಿದ್ದುಪಡಿಗಳನ್ನು ಸೂಚಿಸುವು ದಕ್ಕಾಗಿ 2001ರ ಜೂನ್‌ನಲ್ಲಿ ರಾಜ್ಯ ಸರ್ಕಾರದ ವತಿಯಿಂದ ಒಂದು "ಸಾಮಾಜಿಕ ನ್ಯಾಯ ಸಮಿತಿ"ಯನ್ನು ರಚಿಸಲಾ ಯಿತು. ಆರು ತಿಂಗಳೊಳಗೆ ಸಮಿತಿಯ ವರದಿಯೂ ಬಂದುಬಿಟ್ಟಿತು. ತಕ್ಷಣ ಸರ್ಕಾರಿ ನೌಕರಿಗಳಲ್ಲಿ ಜಾತಿ ಪ್ರಾತಿನಿಧ್ಯ ಎಷ್ಟೆಷ್ಟಿದೆ ಎಂದು ತಿಳಿಯಲು ಅವಸರವಸರವಾಗಿ ಸಮೀಕ್ಷೆಯೊಂದನ್ನು ಕೈಗೊಳ್ಳಲಾಯಿತು. ಬಳಿಕ ಒಬಿಸಿ ಮತ್ತು ದಲಿತ ಸಮುದಾಯಗಳಲ್ಲಿನ ಕೆಲವು ನಿರ್ದಿಷ್ಟ ಜಾತಿಗಳು ಮೀಸಲಾತಿಯ ಹೆಚ್ಚಿನ ಲಾಭವನ್ನು ತಮ್ಮದಾಗಿಸಿ ಕೊಂಡಿವೆ ಎಂದು ಘೋಷಿಸಲಾಯಿತು. ಇವರೆಲ್ಲ ಬಿಜೆಪಿ ಮತದಾರರಲ್ಲ ಎಂಬುದನ್ನು ಗಮನಿಸಬೇಕು.



ಮುಂಬರಲಿದ್ದ ಚುನಾವಣೆಗಳನ್ನು ಗಮನದಲ್ಲಿಟ್ಟು ಕೊಂಡ ರಾಜನಾಥ್ ಸಿಂಗ್ ಸರ್ಕಾರ ಅದಕ್ಕೆ ಮುನ್ನ ಒಬಿಸಿ ಸಮುದಾಯಗಳನ್ನು ಹಿಂದುಳಿದ, ಹೆಚ್ಚು ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ಎಂಬ ಮೂರು ಪ್ರತ್ಯೇಕ ಪ್ರವರ್ಗಗಳಾಗಿ ವಿಂಗಡಿಸಿತು. ದಲಿತ ಸಮುದಾಯವನ್ನು 'ಎ' ಮತ್ತು 'ಬಿ' ಎಂಬ ಎರಡು ಪ್ರತ್ಯೇಕ ಪ್ರವರ್ಗಗಳಾಗಿ ವಿಭಜಿಸಿತು. ಒಟ್ಟು ಶೇಕಡ 50ರ ಮೀಸಲಾತಿ ಮಿತಿಯನ್ನು ಕಾಯ್ದುಕೊಳ್ಳಲು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು 2%ದಿಂದ 1%ಕ್ಕೆ ಇಳಿಸಿತು. ಇದಕ್ಕಾಗಿ ಕಾಯುತ್ತಿದ್ದ ಬಿಜೆಪಿ ತನ್ನ ಬೆಂಬಲಿಗ ಜಾತಿಗಳನ್ನು ಅತ್ಯಂತ ಹಿಂದುಳಿದ ಒಬಿಸಿಗಳು ಮತ್ತಿತರ ಹೆಚ್ಚು ಮೀಸಲಾತಿ ಇರುವ ಗುಂಪುಗಳಿಗೆ ಸೇರಿಸಿತು. 2001ರ ಸೆಪ್ಟಂಬರ್‌ನಲ್ಲಿ ವಿಶೇಷ ಗಜೆಟ್ ಪ್ರಕಟಣೆ, ಸುಗ್ರೀವಾಜ್ಞೆಗಳನ್ನು ಹೊರಡಿಸಿದ ರಾಜ್ಯ ಸರ್ಕಾರ ತದನಂತರ ಅಕ್ಟೋಬರ್‌ನಲ್ಲಿ ಸದನದ ಅನುಮೋದನೆ ಪಡೆದು 'ಯುಪಿ ಸಾರ್ವಜನಿಕ ಸೇವೆ ತಿದ್ದುಪಡಿ ಕಾಯ್ದೆ'ಯನ್ನು ಜಾರಿಗೊಳಿಸಿಯೇಬಿಟ್ಟಿತು. ತದನಂತರ ಈ ಹೊಸ ಕಾಯ್ದೆಯನ್ವಯ ಸುಮಾರು 20,000 ಹೊಸ ಹುದ್ದೆಗಳನ್ನು ಸೃಷ್ಟಿಸಿ ಅವುಗಳಿಗೆ ನೇಮಕಾತಿಯನ್ನೂ ಮಾಡಲಾಯಿತು. ಹೀಗೆ ನೇಮಕಾತಿ ಆದವರು ಯಾರೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ!


ಈ ಬೆಳವಣಿಗೆಗಳನ್ನು ಗಮನಿಸುತ್ತಿದ್ದ ಅಶೋಕ್ ಯಾದವ್ ಎಂಬೊಬ್ಬ ಉಚ್ಚಾಟಿತ ಮಂತ್ರಿ 'ಹೊಸ ಕಾಯ್ದೆ ಮತಬ್ಯಾಂಕ್ ಸೃಷ್ಟಿಸುವ ಉದ್ದೇಶಕ್ಕಾಗಿದ್ದು ಸಂವಿಧಾನವನ್ನು ಉಲ್ಲಂಘಿಸುತ್ತದೆ' ಎಂದು ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ. ವಿಚಾರಣೆ ನಡೆಸಿದ ನ್ಯಾಯಾಲಯ ಹೊಸ ಕಾಯ್ದೆಗೆ ಮತ್ತು ನೇಮಕಾತಿಗಳಿಗೆ ತಡೆಯಾಜ್ಞೆ ನೀಡಿತಲ್ಲದೆ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಅನುಮೋದನೆ ಇಲ್ಲದೆ ಮೀಸಲಾತಿ ನೀತಿಯ ಮರುಪರಿಶೀಲನೆ ಮಾಡುವಂತಿಲ್ಲ ಎಂದು ಆದೇಶಿಸಿತು. ಪರಿಣಾಮವಾಗಿ ಮುಂದಿನ ಚುನಾವಣೆಗಳಲ್ಲಿ ಬಿಜೆಪಿ ಸೋಲುಂಡಿತು. ಬಿಎಸ್‌ಪಿಯ ಮಾಯಾವತಿ ಮುಖ್ಯಮಂತ್ರಿ ಯಾದಾಗ ತಿದ್ದುಪಡಿಗಳನ್ನು ವಾಪಾಸು ಪಡೆಯಲಾಯಿತು.

ಗುರುವಿನ ಪಾಲಿಗೆ ಬಿಹಾರದ ಚುನಾವಣೆಗಳು ಅತ್ಯಂತ ಮಹತ್ವಪೂರ್ಣವಲ್ಲದೆ ಪ್ರತಿಷ್ಠೆಯ ಪ್ರಶ್ನೆಯೂ ಆಗಿರುವು ದರಿಂದಲೆ ಮೀಸಲಾತಿಯಂತಹ ವಿಷಯಗಳ ಬಗ್ಗೆ ಇಂಥಾ ಹಸಿಹಸಿ ಸುಳ್ಳುಗಳನ್ನು ಪೋಣಿಸಲಾಗುತ್ತಿದೆ!

(ಆಧಾರ www.catchnews.comನಲ್ಲಿ ಭರತ್ ಭೂಷಣ್)

ಬೂಸಿ ಬಸ್ಯ... ಮೋದಿ!

85





ಅನಂತನ ಅವತಾರ

ಹಿರಿಯ ನಟ ಅನಂತ್ ನಾಗ್ ಈಗ ನಾನಾ ಅವತಾರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಬಹು ವರ್ಷಗಳ ನಂತರ ಮತ್ತೆ ಅವರು 'ದಿ ಪ್ಲಾನ್' ಸಿನಿಮಾದ ಮೂಲಕ ನಾಯಕರಾಗಿದ್ದಾರೆ. ಇದೊಂದು ಥ್ರಿಲ್ಲರ್ ಸಿನಿಮಾ. ಕೀರ್ತಿ ನಿರ್ದೇಶನದಲ್ಲಿ ಚಿತ್ರ ಮೂಡಿಬರುತ್ತಿದ್ದು, ಬಹುತೇಕ ಚಿತ್ರವನ್ನು ಜೈಲಿನಲ್ಲೇ ಚಿತ್ರೀಕರಿಸಿದ್ದಾರೆ ನಿರ್ದೇಶಕರು. ಯಾವುದೋ ಅಪರಾಧಕ್ಕೆ ಸಿಲುಕುವ ನಾಲ್ವರು ಯುವಕರು, ತಮಗರಿವಿಲ್ಲದೇ ಸಮಾಜದ ಮುಖ್ಯವಾಹಿನಿಗೆ ಬರುವ ಕತೆಯನ್ನು ಸಿನಿಮಾ ಹೊಂದಿದೆ.

ನಿರ್ದೇಶಕರ ಚೊಚ್ಚಲು ಸಿನಿಮಾ ಇದು. ಅಲ್ಲದೇ ಕನ್ನಡದ 'ಮಿಂಚಿನ ಓಟ' ಸಿನಿಮಾವನ್ನು ನೆನಪಿಸುವ ಹಲವು ದೃಶ್ಯಗಳು ಇಲ್ಲಿವೆಯಂತೆ. ಈ ಕಾರಣಕ್ಕಾಗಿಯೇ ಅನಂತ್ ನಾಗ್ ಅಭಿನಯಿಸಲು ಒಪ್ಪಿಕೊಂಡಿದ್ದಾರಂತೆ.

ಸಿನಿಮಾದ ಮತ್ತೊಂದು ವಿಶೇಷತೆ ಅಂದರೆ, ಬಹುತೇಕ ಚಿತ್ರವನ್ನು ಕಾಡಿನ ಮಧ್ಯೆ ಇರುವ ಮಡಿಕೇರಿ ಜೈಲಿನಲ್ಲಿ ಶೂಟ್ ಮಾಡಲಾಗಿದೆ. "ಕತೆ ಹೇಳಿದಾಗ ಅನಂತ್ ನಾಗ್ ಥ್ರಿಲ್ ಆದರು. ಈ ಪಾತ್ರದಲ್ಲಿ ನಟಿಸುವುದಾಗಿ ಒಪ್ಪಿಕೊಂಡರು. ಆ ಪಾತ್ರಕ್ಕೆ ಅವರೇ ಬೇಕಿತ್ತು. ಅಳುಕಿನಿಂದಲೇ ಅವರ ಹತ್ತಿರ ಹೋದೆವು. ಚಿತ್ರಕತೆ ಕೇಳುತ್ತಿದ್ದಂತೆಯೇ ಸಿನಿಮಾ ಶುರು ಮಾಡಿ ಅಂದರು. ಈಗ ಬಹುತೇಕ ಶೂಟಿಂಗ್ ಮುಗಿದಿದೆ" ಅನ್ನುವುದು ನಿರ್ದೇಶಕರ ಮಾತು.

ದೇಸಾಯಿ ಚಿತ್ರದಲ್ಲಿ ರಮೇಶ್



ರಮೇಶ್ ಅರವಿಂದ್ ನಿರ್ದೇಶನದ 'ಉತ್ತಮ ವಿಲನ್' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲಲಿಲ್ಲ. ಹೀಗಾಗಿ ರಮೇಶ್ ಕೂಡ ಮತ್ತೊಂದು ಪ್ರಯತ್ನಕ್ಕೂ ಮುಂದಾಗಲಿಲ್ಲ. ಈ ಸಿನಿಮಾದ ನಂತರ ರಮೇಶ್ ಏನು ಮಾಡುತ್ತಿದ್ದಾರೆ ಎಂಬ ಕುತೂಹಲ ಅವರ ಅಭಿಮಾನಿಗಳಲ್ಲಿತ್ತು. ಅದಕ್ಕೀಗ ಉತ್ತರ ಸಿಕ್ಕಿದೆ. ಸದ್ಯ ಇವರು ಸುನಿಲ್ ಕುಮಾರ್ ದೇಸಾಯಿ ನಿರ್ದೇಶನದ ಹೊಸ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಈಗಾಗಲೇ ಬಹುತೇಕ ಚಿತ್ರೀಕರಣ ಕೂಡ ನಡೆದಿದೆ.

ಈ ಚಿತ್ರದಲ್ಲಿ ಹಲವು ವಿಶೇಷತೆಗಳಿವೆ. 'ಬೆಳದಿಂಗಳ ಬಾಲೆ' ಜೋಡಿ ಅನಂತ್ ನಾಗ್ ಮತ್ತು ಸುಮನ್ ನಗರಕರ್ ಮತ್ತೆ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅಲ್ಲದೇ ಇದೇ ಮೊದಲ ಬಾರಿಗೆ ರಮೇಶ್ ಜತೆ ಹರ್ಷಿಕಾ ಪೂಣಚ್ಚ ತೆರೆ ಹಂಚಿಕೊಂಡಿದ್ದಾರೆ. ನಿರ್ದೇಶಕರೂ ಬಹುದಿನಗಳ ನಂತರ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಬಹುತೇಕ ಚಿತ್ರೀಕರಣ ಬೆಂಗಳೂರಿನಲ್ಲೇ ನಡೆದಿದೆ. ಬಹುದೊಡ್ಡ ತಾರಾಗಣವೇ ಸಿನಿಮಾದಲ್ಲಿದ್ದು, ಮತ್ತೊಮ್ಮೆ ಬೆಳದಿಂಗಳನ್ನು ನೆನಪಿಸಲಿದ್ದಾರೆಯೇ ದೇಸಾಯಿ ಎಂಬ ಪ್ರಶ್ನೆ ಎಲ್ಲರಲ್ಲಿದೆ.

ಬಾಲಿವುಡ್ ಸಿನಿಮಾದ ಕನಸು ಕಾಣುತ್ತಿರುವ ಹರ್ಷಿಕಾ ಇಲ್ಲಿ ಗ್ಲಾಮರ್ ಪಾತ್ರ ಮಾಡಿದ್ದಾರೆ. ಬ್ರೇಕ್ ಸಿಗುವ ನಿರೀಕ್ಷೆ ಕೂಡ ಇದೆಯಂತೆ.


ಥಿಯೇಟರ್ ಸಿಗದೇ ಪ

ಹಲವು ವರ್ಷಗಳ ನಂತರ ರತ್ನಜ ಮತ್ತೆ … ಮರಳಿದ್ದಾರೆ. 'ಪ್ರೀತಿಯಲ್ಲಿ ಸಹಜ' ಎಂಬ … ಅವರು ನಿರ್ದೇಶಿಸಿದ್ದಾರೆ. ಸದ್ಯ ಅವರಿಗೆ ಥಿಯೆ… ಎದುರಾಗಿದೆ. ಮೊದಲ ಕಾಪಿ ಕೈಯಲ್ಲಿ ಹಿ… ಥಿಯೇಟರ್‌ಗಾಗಿ ಪರದಾಡುತ್ತಿದ್ದಾರೆ. ವಾರಕ್ಕೆ … ಬಿಡುಗಡೆ ಆಗುತ್ತಿವೆ. ಅಲ್ಲದೇ ಚಿತ್ರಮಂದಿ… ಕಪಿಮುಷ್ಟಿಯಲ್ಲಿವೆ. ಒಳ್ಳೆಯ ಚಿತ್ರಗಳಿ… ದುಡ್ಡು ಯಾರು ಕೊಡುತ್ತಾರೋ ಅವರ… ಹಾಕಲಾಗುತ್ತಿದೆ.




ಹೀಗಾಗಿ ರತ್ನಜ ಥಿಯೇಟರ್‌ಗಾಗಿ ಪರದಾಡುತ್ತಿದ್ದಾರೆ.

"ಅತ್ಯುತ್ತಮ ಸಿನಿಮಾ ಮಾಡಿದ್ದೇನೆ. ಈವರೆಗಿನ ನನ್ನ ಚಿತ್ರಗಳು ಕಮರ್ಷಿಯಲ್ ಆಗಿಯೂ ಹಿಟ್ ಆಗಿವೆ. ಪ್ರಶಸ್ತಿಯನ್ನೂ ಪಡೆದಿವೆ. ಸಿನಿಮಾ ರಂಗ ಮೊದಲಿನಂತೆ ಉಳಿದುಕೊಂಡಿಲ… ಸಮಸ್ಯೆ ತುಂಬಾ ಇದೆ. ಸಿನಿಮಾವನ್ನು ರೆಡಿ… ಕಾಯುತ್ತಿದ್ದೇನೆ. ಜತೆಗೆ ವಾರಕ್ಕೆ ಏಳೇಳು ಚಿತ್ರ… ಆಗುವ ಮೂಲಕ ಆತಂಕ ಸೃಷ್ಟಿಸಿವೆ. ಉತ್ತಮ ಸಿನಿಮ… ಅದನ್ನು ಎಲ್ಲರಿಗೂ ತಲುಪಿಸಬೇಕು ಎಂಬ ಆಸೆ ಇದ್ದೇ ಇರು… ಅನುಕೂಲ ದಿನಾಂಕಕ್ಕಾಗಿ ಕಾಯುತ್ತಿದ್ದೇನೆ" ಅಂತಾರೆ ರತ್ನಜ.



ಪಲಾವ್ ಮತ್ತು ಹಳಸಿದ ದಿಗಂತ್ ಪ್ರೇಮ




ದಿಗಂತ್ ಬಾಲಿವುಡ್‌ಗೆ ಹೋಗಿದ್ದು ಬಹುದೊಡ್ಡ ಸುದ್ದಿ ಆಯಿತು. ಆದರೆ ಅವರು ನಟಿಸಿದ ಚೊಚ್ಚಲ ಹಿಂದಿ ಸಿನಿಮಾ ಎರಡೇ ದಿನಕ್ಕೆ ಮಕಾಡೆಯೂ ಮಲಗಿತು. ಈಗ ಮತ್ತೊಂದು ಸುದ್ದಿ ನೀಡಿದ್ದಾರೆ ದಿಗಂತ್‌ನ ನೆಚ್ಚಿನ ಹುಡುಗಿ ಐಂದ್ರಿತಾ ರೇ. ತನ್ನ ಮತ್ತು ದಿಗಂತ್ ನಡುವಿನ ಪ್ರೇಮ ಹಳಸಿದೆ; ಹೀಗಾಗಿ ಮದುವೆಯಿಂದ ನಾನು ದೂರ ದೂರ ಎನ್ನುವ ಮಾತು ಆಡಿದ್ದಾರೆ, ಅದೂ ಮಾಧ್ಯಮದ ಪ್ರತಿನಿಧಿಗಳ ಮುಂದೆ.

ಮೊನ್ನೆಯಷ್ಟೇ ನಡೆದ ಪ್ರಜ್ವಲ್ ದೇವರಾಜ್ ಮದುವೆಗೆ ಆಗಮಿಸಿದ್ದ ಐಂದ್ರಿತಾ, ತಾವಾಗಿಯೇ ತಮ್ಮ ಮದುವೆ ವಿಷಯ ಬಿಚ್ಚಿಟ್ಟಿದ್ದಾರೆ. "ನಾನು ಮತ್ತು ಪ್ರಜ್ವಲ್ ಏಕಕಾಲಕ್ಕೆ ಸಿನಿಮಾ ಇಂಡಸ್ಟ್ರಿಗೆ ಬಂದವರು. ಅವರ ಮದುವೆ ಆಯಿತು. ನನಗೂ ಮದುವೆ ಆಗುವ ಆಸೆ. ಆದರೆ, ಹುಡುಗನನ್ನು ನೋಡಬೇಕು. ಅದಕ್ಕೆ ಎರಡು ವರ್ಷವಾದರೂ ಆದೀತು" ಅಂದಿದ್ದಾರೆ. ಅಲ್ಲಿಗೆ ದಿಗಂತ್ ಜತೆಗಿನ ಪ್ರೇಮ ಹಳಸಿದೆ ಅನ್ನುವುದನ್ನು ಹೇಳಿಕೊಂಡಿದ್ದಾರೆ.

ಯಾವಾಗಲೂ ದಿಗಂತ್‌ಗೆ ಅಂಟಿಕೊಂಡಿರುತ್ತಿದ್ದ ಐಂದ್ರಿತಾ ಕಳೆದೈದು ತಿಂಗಳಿಂದ ದೂರವೇ ಉಳಿದಿದ್ದಾರೆ. ದಿಗಂತ್ ಇರುವ ಕಡೆ ಐಂದ್ರಿತಾ ಬರುವುದಿಲ್ಲ ಅನ್ನುವ ಮಾತೂ ಹಬ್ಬಿದೆ. ಅದಕ್ಕೆ ಕಾರಣ ಗೊತ್ತಿಲ್ಲ.



ವರ್ಮಾ ಸಿನಿಮಾದಲ್ಲಿ ಯಶ್



'ಕಿಲ್ಲಿಂಗ್ ವೀರಪ್ಪನ್' ಸಿನಿಮಾದ ಮೂಲಕ ರಾಮ್‌ಗೋಪಾಲ್ ವರ್ಮಾ ಕನ್ನಡಕ್ಕೆ ಬಂದಾಗಿದೆ. ಈ ಸಿನಿಮಾ ಇದೇ ತಿಂಗಳು ಬಿಡುಗಡೆಯೂ ಆಗಲಿದೆ. 'ಕಿಲ್ಲಿಂಗ್ ವೀರಪ್ಪನ್' ತೆರೆ ಕಾಣುತ್ತಿದ್ದಂತೆಯೇ ಮತ್ತೊಂದು ಕನ್ನಡದ ಚಿತ್ರವನ್ನು ವರ್ಮಾ ಕೈಗೆತ್ತಿಕೊಳ್ಳಲಿದ್ದಾರೆ. ಈ ಚಿತ್ರಕ್ಕೆ ಯಶ್ ನಾಯಕ ಎನ್ನುವ ಮಾತು ಕೇಳಿಬರುತ್ತಿದೆ.


ವರ್ಮಾ ಅವರ ಹೊಸ ಸಿನಿಮಾದ ಬಗ್ಗೆ ಈಗಾಗಲೇ ಹಲವು ವಿಷಯಗಳು ಕೇಳಿಬರುತ್ತಿವೆ. ಚಿತ್ರಕ್ಕೆ 'ಅಪ್ಪಾ' ಎಂದು ಹೆಸರಿಟ್ಟಿದ್ದು, ಸುದೀಪ್ ನಾಯಕರಾಗಿ ನಟಿಸಲಿದ್ದಾರೆ ಎಂಬ ಮಾಹಿತಿಯೂ ಇತ್ತು. ಆದರೆ, ಸುದೀಪ್ ಬದಲು ಯಶ್ ನಾಯಕ ಅನ್ನುವ ಸುದ್ದಿ ಈಗ ಬಂದಿದೆ. ಈ ಕಾರಣಕ್ಕಾಗಿಯೇ 'ಕಿಲ್ಲಿಂಗ್ ವೀರಪ್ಪನ್' ಸಿನಿಮಾದ ಆಡಿಯೋ ಬಿಡುಗಡೆಗೆ ಯಶ್‌ರನ್ನು ಆಹ್ವಾನಿಸಲಾಗಿತ್ತು.

ಆಡಿಯೋ ಬಿಡುಗಡೆ ಸಮಯದಲ್ಲಿ ವರ್ಮಾ ಬಗ್ಗೆ ಯಶ್ ಅಭಿಮಾನದ ಮಾತು ಆಡಿದ್ದಾರೆ. ವರ್ಮಾ ಕೂಡ ಯಶ್‌ಗೆ ಬೆನ್ನು ತಟ್ಟಿದ್ದಾರೆ. ಹೀಗಾಗಿ ಈ ಜೋಡಿಯ ಸಿನಿಮಾ ಬಂದರೆ ಅಚ್ಚರಿಪಡಬೇಕಿಲ್ಲ.

ಕಲ್ಪನಾ ಪ್ರಿಯ

ಉಪೇಂದ್ರ ನಟನೆಯ 'ಕಲ್ಪನಾ 2' ಚಿತ್ರಕ್ಕೆ ಕೊನೆ… ಸಿಕ್ಕಿದ್ದಾಳೆ. ರಾಧಿಕಾ ಪಂಡಿತ್ ಸೇರಿದಂತೆ ಹಲವು … ಹೆಸರು ಈ ಪಾತ್ರಕ್ಕೆ ಕೇಳಿ ಬಂದಿತ್ತು. ಕೊನೆಗ… ಪ್ರಿಯಾಮಣಿ ಪಾಲಾಗಿದೆ. ಅದನ್ನು ಪ್ರಿಯಾ… ಖಚಿತಪಡಿಸಿದ್ದಾರೆ.

ಅಂದುಕೊಂಡಂತೆ ಆಗಿದ್ದರೆ, ಈ ಪಾತ್ರ… ಪಂಡಿತ್ ನಿರ್ವಹಿಸಬೇಕಿತ್ತು. ಯಶ್ ನಟನೆಯ… ಹೆಚ್ಚಿದ್ದರಿಂದ, ಉಪೇಂದ್ರ ಚಿತ್ರಕ್ಕೆ ಕೈ ಕೊಟ್ಟ… ಹೀಗಾಗಿ ಈ ಸ್ಥಾನವನ್ನು ಪ್ರಿಯಾಮಣಿ ತುಂ…



ಇದೊಂದು ರೀಮೇಕ್ ಸಿನಿಮಾ. ತೆಲುಗಿನ 'ಕಲ್ಪನಾ 2' ಚಿತ್ರವನ್ನೇ ಕನ್ನಡಕ್ಕೆ ತರುತ್ತಿದ್ದಾರೆ. ಮೂಲ ಸಿನಿಮಾದಲ್ಲಿ ನಿತ್ಯಾ ಮೆನನ್ ಮಾಡಿರುವ ಪಾತ್ರವನ್ನು ಇಲ್ಲಿ ಪ್ರಿಯಾಮಣಿ ನಿರ್ವಹಿಸುತ್ತಿದ್ದಾರೆ. "ತೆಲುಗು ಚಿತ್ರವನ್ನು ನಾನು ನೋಡಿದ್ದೇನೆ. ಅಪರೂಪದ ಪಾತ್ರವದು. ಈ ಖುಷಿಗಿಂತ, ಇದೇ ಮೊದಲ ಬಾರಿಗೆ ನಾನು ಉಪೇಂದ್ರ ಜತೆ ತೆರೆ ಹಂಚಿಕೊಳ್ಳುತ್ತಿದ್ದೇನೆ. ಹೀಗಾಗಿ ಖುಷಿ ಇಮ್ಮಡಿಗೊಂಡಿದೆ" ಅಂತಾರೆ ಪ್ರಿಯಾ.

ಸದ್ಯ ಇವರು ಯೋಗರಾಜ್ ಭಟ್ ನಿರ್ದೇಶನದ 'ದನಕಾಯೋಣ' ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ಈ ಚಿತ್ರಕ್ಕೆ ದುನಿಯಾ ವಿಜಯ್ ನಾಯಕ. ಬಹುತೇಕ ಚಿತ್ರೀಕರಣ ಮುಗಿದಿದ್ದು, ಹಾಡುಗಳ ಚಿತ್ರೀಕರಣ ಬಾಕಿ ಇದೆ.

ಲಂಕೇಶ್ ಮೀಡಿಯಾದ ಗೈಡ್ ಪ್ರಕಾಶನದ ನೂತನ ಕೊಡ



ಗೈಡ್ ಸ್ಪರ್ಧಾ ಮಾಸಿಕ
ಅಕ್ಟೋಬರ್ 2015ರ ಹೊಸ ಸಂಚಿಕೆ
ಈಗ ಎಲ್ಲೆಡೆ ಲಭ್ಯ

ಆಯಾ ಪರೀಕ್ಷೆಗೆ
ನಿಗದಿತ ಸಿಲಬಸ್‌ಗೆ
ಅನುಗುಣವಾಗಿ ಸಮೃದ್ಧ
ಅಧ್ಯಯನ ಸಾಮಗ್ರಿ
ಸರಳ ಕೈಪಿಡಿ
ಸೀಮಿತ ಪ್ರತಿಗಳು ಮಾತ್ರ



ರಾಜ್ಯಾದ್ಯಂತ ಎಲ್ಲಾ ಪುಸ್ತಕ ಅಂಗಡಿಗಳಲ್ಲಿ ಲಭ್ಯ ಪ್ರತಿಗಳಿಗಾಗಿ: 080-26676427/98803C

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676
Fax : 26604536, E-mail :lankesh70@rediffmail.com